ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ನವೆಂಬರ್ 24 ಗುರುವಾರ 2022


ಸಂಪುಟ: 43 | ಸಂಚಿಕೆ: 217 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528, ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ಕಾಡಾನೆ ದಾಳಿಗೆ ಭವಿಷ್ಯದ ಅಂಬಾರಿ ಆನೆ ಗೋಪಾಲಸ್ವಾಮಿ ಬಲಿ



- ಸೆರೆ ಹಿಡಿದು ರೇಡಿಯೋ ಕಾಲರ್ ಅಳವಡಿಸಿ ಕಾಡಿಗೆ ಅಟ್ಟಿದ್ದ ಅಯ್ಯಪ್ಪನ ಅಟ್ಟಹಾಸದ ಶಂಕೆ
- ಭವಿಷ್ಯದ ಅಂಬಾರಿ ಆನೆ ಗೋಪಾಲಸ್ವಾಮಿ ದುರಂತ ಸಾವಿಗೆ ಅರಣ್ಯ ಇಲಾಖೆ ಮರುಕ
- ಮತ್ತಿಗೋಡು ಕ್ಯಾಂಪ್‌ನಿಂದ ಕೊಳುವಿಗೆ ತಾತ್ಕಾಲಿಕ ಕ್ಯಾಂಪ್‌ಗೆ ಕರೆತರಲಾಗಿತ್ತು
- 13 ಬಾರಿ ದಸರಾ ಮಹೋತ್ಸವದಲ್ಲಿ ಪಾಲ್ಗೊಂಡಿದ್ದ 'ಆನೆ ಫೈಟರ್' ಗೋಪಾಲಸ್ವಾಮಿ

ಮದವೇರಿದ್ದ ಗೋಪಾಲಸ್ವಾಮಿ

ಪ್ರಸಕ್ತ ಸಾಲಿನ ದಸರಾ ಮಹೋತ್ಸವದಲ್ಲಿ ಪಾಲ್ಗೊಂಡಿದ್ದ ಗೋಪಾಲಸ್ವಾಮಿ, ಅರ್ಜುನನನ್ನು ಹೊರತುಪಡಿಸಿದರೆ ಹೆಚ್ಚು ತೂಕವಿರುವ ಆನೆ. ಕಳೆದ 15 ದಿನದ ಹಿಂದಷ್ಟೇ ಚಿಕ್ಕಮಗಳೂರಲ್ಲಿ ಕಾಡಾನೆ ಸೆರೆ ಕಾರ್ಯಾಚರಣೆಯಲ್ಲಿ ಯಶಸ್ವಿಯಾಗಿ ಪಾಲ್ಗೊಂಡಿದ್ದ. ಒಂದು ವಾರದಿಂದ ಕೊಳುವಿಗೆ ಕ್ಯಾಂಪ್‌ನಲ್ಲಿ ಗೋಪಾಲಸ್ವಾಮಿಗೆ ಮದವೇರಿತ್ತು. ಮುಂಜಾಗ್ರತಾ ಕ್ರಮವಾಗಿ ಕಾಲಿಗೆ ಸರಪಳಿ ಹಾಕಲಾಗಿತ್ತು. ಮದವೇರಿದ್ದರಿಂದ ಕಾಡಾನೆ ಹಿಂಡಿಗೆ ನುಗ್ಗಿದೆ. ಈ ವೇಳೆ ನಡೆದ ದಾಳಿಯಲ್ಲಿ ಬಲಿಯಾಗಿದೆ ಎಂದು ಅಧಿಕಾರಿಗಳು ಅಭಿಪ್ರಾಯಪಟ್ಟಿದ್ದಾರೆ.

ಮೈಸೂರು,ನ.23(ಎಂಟಿವೈ)–ಕಾಡಾನೆ ದಾಳಿಗೆ ಭವಿಷ್ಯದ 'ಅಂಬಾರಿ ಆನೆ' ಭರವಸೆ ಮೂಡಿಸಿದ್ದ ಗೋಪಾಲಸ್ವಾಮಿ(39) ಬುಧವಾರ ಮಧ್ಯಾಹ್ನ ಹುಣಸೂರು ತಾಲೂಕಿನ ವೀರನಹೊಸಳ್ಳಿ ವಲಯದ ಕೊಳುವಿಗೆ ಆನೆ ಕ್ಯಾಂಪ್ ಬಳಿ ಬಲಿಯಾಗಿದ್ದಾನೆ. ನಾಗರಹೊಳೆ ಅಭಯಾರಣ್ಯದ ವೀರನಹೊಸಳ್ಳಿ ಸುತ್ತಮುತ್ತಲಿನ ಗ್ರಾಮಗಳಲ್ಲಿ ಆಗಾಗ ಉಪಟಳ ನೀಡುತ್ತಿದ್ದ ಕಾಡಾನೆ ಅಯ್ಯಪ್ಪನನ್ನು ಸೆರೆ ಹಿಡಿದು, ಅದಕ್ಕೆ ರೇಡಿಯೋ ಕಾಲರ್ ಅಳವಡಿಸಿ ಕಾಡಿಗೆ ಅಟ್ಟಲಾಗಿತ್ತು. ಈತನೇ ಇಂದು ತನ್ನ ಪುಂಡಾಟಕ್ಕೆ ಗೋಪಾಲಸ್ವಾಮಿಯನ್ನು ಬಲಿ ಪಡೆದಿರುವ ಸಾಧ್ಯತೆ ಹೆಚ್ಚಾಗಿದೆ ಎನ್ನಲಾಗಿದೆ. ಮತ್ತಿಗೋಡು ಕ್ಯಾಂಪ್‌ನಲ್ಲಿದ್ದ ಗೋಪಾಲಸ್ವಾಮಿಯನ್ನು, ಇತ್ತೀಚೆಗಷ್ಟೇ ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ವೀರನಹೊಸಳ್ಳಿ ವಲಯದ ಕೊಳುವಿಗೆ ತಾತ್ಕಾಲಿಕ ಕ್ಯಾಂಪ್‌ಗೆ ಕರೆತರಲಾಗಿತ್ತು. ಕಳ್ಳಬೇಟೆ ತಡೆ(ಎಪಿಸಿ) ಶಿಬಿರದ ಪಕ್ಕದಲ್ಲಿಯೇ ಇದ್ದ ಕ್ಯಾಂಪ್‌ನಲ್ಲಿ ಬೀಡುಬಿಟ್ಟಿದ್ದ ಗೋಪಾಲಸ್ವಾಮಿ, ಆಹಾರ ಅರಸಿ, ಕಾಡಿಗೆ ಹೋಗಿದ್ದಾಗ ದಾಳಿಗೀಡಾಗಿದ್ದಾನೆ.

ಸೋಮವಾರ(ನ.21) ರಾತ್ರಿ ಅರಣ್ಯ ಪ್ರವೇಶಿಸಿದ್ದ ಗೋಪಾಲಸ್ವಾಮಿ ಮೇಲೆ ಕಾಡಾನೆ ಅಯ್ಯಪ್ಪ ದಾಳಿ ಮಾಡಿದೆ ಎನ್ನಲಾಗಿದೆ. ಮದವೇರಿದ್ದ ಈ ಕಾಡಾನೆ ದಾಳಿಯಿಂದ ತತ್ತರಿಸಿ ಹೋಗಿರುವ ಗೋಪಾಲಸ್ವಾಮಿ, ▶ 8ನೇ ಪುಟಕ್ಕೆ

ಅಯ್ಯಪ್ಪನ ಮೇಲೆ ಡೌಟು...

ಗೋಪಾಲಸ್ವಾಮಿ ಮೇಲೆ ದಾಳಿ ನಡೆದ ಸ್ಥಳದಲ್ಲಿ 8 ತಿಂಗಳ ಹಿಂದೆ ಸೆರೆ ಹಿಡಿದು, ರೇಡಿಯೋ ಕಾಲರ್ ಅಳವಡಿಸಿ, ಕಾಡಿಗೆ ಬಿಟ್ಟಿದ್ದ ಪುಂಡ 'ಅಯ್ಯಪ್ಪ' ಇರುವುದನ್ನು ಮಾವುತ, ಕಾವಾಡಿ ಹಾಗೂ ಅರಣ್ಯ ಸಿಬ್ಬಂದಿ ಗಮನಿಸಿದ್ದಾರೆ. ಇದರಿಂದ ಅಯ್ಯಪ್ಪನೇ ಗೋಪಾಲಸ್ವಾಮಿ ಮೇಲೆ ದಾಳಿ ನಡೆಸಿರಬಹುದು ಎಂಬ ಬಲವಾದ ಶಂಕೆ ವ್ಯಕ್ತವಾಗಿದೆ.



ಒಳಪುಟಗಳಲ್ಲಿ

ಆನೆಗೆ ಬಲಿಯಾದವರ ಕುಟುಂಬಕ್ಕೆ 15 ಲಕ್ಷ ಪರಿಹಾರ

ಸರ್ಕಾರಿ ನೌಕರಿ ನೀಡುವ ಬಗ್ಗೆಯೂ ಪರಿಶೀಲನೆ: ಸಿಎಂ ಬಸವರಾಜ ಬೊಮ್ಮಾಯಿ ಭರವಸೆ

ಹಾಸನ: ಚಿಕ್ಕಮಗಳೂರು ಹಾಗೂ ಹಾಸನ ಸೇರಿದಂತೆ ಇತರೆ ಕೆಲ ಜಿಲ್ಲೆಗಳಲ್ಲಿ ಕಾಡಾನೆಗಳ ಹಾವಳಿ ಹೆಚ್ಚಾಗಿದೆ. ಇನ್ನು ಈ ಬಗ್ಗೆ ಹಾಸನದ ಹಳೇಬೀಡಿನಲ್ಲಿ ಇಂದು(ನ.23) ಪ್ರತಿಕ್ರಿಯಿಸಿರುವ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಆನೆ ದಾಳಿಗೆ ಬಲಿಯಾದವರಿಗೆ 15 ಲಕ್ಷಕ್ಕೆ ಪರಿಹಾರ ಹಣ ಏರಿಕೆ ಮಾಡಿದ್ದೇವೆ. ಮೃತರ ಕುಟುಂಬಕ್ಕೆ ಉದ್ಯೋಗ ಕೊಡುವ ಬಗ್ಗೆ ಕೂಡ ಗಂಭೀರವಾಗಿ ಚರ್ಚೆ ಮಾಡುತ್ತೇನೆ ಎಂದು ಭರವಸೆ ನೀಡಿದರು.

ಕಾಡಾನೆ ಹಾವಳಿ ವಿಚಾರ ಸರ್ಕಾರ ಗಂಭೀರವಾಗಿ ತೆಗೆದುಕೊಂಡಿದ್ದು, ಕಾಡಾನೆ ಸ್ಥಳಾಂತರ ಮಾಡುವುದಕ್ಕಾಗಿ ವಿಶೇಷ ಕಾರ್ಯಪಡೆ ರಚನೆ ಮಾಡಲಾಗಿದೆ. ಕಾಡಾನೆ ದಾಳಿಗೆ ಬಲಿಯಾಗುವ ಕುಟುಂಬ ಸದಸ್ಯರಿಗೆ ಸರ್ಕಾರಿ ನೌಕರಿ ನೀಡುವ ಬಗ್ಗೆ ಗಂಭೀರವಾಗಿ ಚರ್ಚೆ ಮಾಡುತ್ತೇವೆ. ಮಾನವ ವನ್ಯಜೀವಿ ಸಂಘರ್ಷ ಹೆಚ್ಚಾಗಿದೆ. ಬರಗಾಲದಲ್ಲಿ ಕಾಡಿನಿಂದ ನಾಡಿಗೆ ಬಂದಿದ್ದ ಪ್ರಾಣಿಗಳು ಹಿಂದಿರುಗಿಲ್ಲ. ಗುಂಪಿನಲ್ಲಿರುವ ಆನೆಗಳನ್ನು ಚದುರಿಸುವುದು ಕಷ್ಟ, ಆನೆಗಳು ಹೆಚ್ಚಾಗಿರುವ ಕಡೆ ನೂರಾರು ಸಿಬ್ಬಂದಿ ಸೇರಿ ಹಿಮ್ಮೆಟ್ಟಿಸಬೇಕು. ಅದಕ್ಕೆ ಬೇಕಾದಷ್ಟು ಹಣ ನೀಡಲು ರಾಜ್ಯ ಸರ್ಕಾರ ಸಿದ್ಧವಿದೆ ಎಂದರು.



ಪ್ರಸಕ್ತ ವರ್ಷದ ಬಜೆಟ್‌ನಲ್ಲಿ ನೂರು ಕೋಟಿ ಹಣ ಮೀಸಲಿಟ್ಟಿದ್ದೇವೆ. ಬಂಡೀಪುರದಲ್ಲಿ ಹೊಸ ರೀತಿಯ ಫೆನ್ಸಿಂಗ್ ಟ್ರಯಲ್ ಮಾಡಿದ್ದೇವೆ. ಗುಂಪಿನಲ್ಲಿ ಇರೋ ಆನೆ ಚದುರಿಸೋದು ಕಷ್ಟ, ಆದರೂ ಈ ವರ್ಷ 16 ಆನೆಗಳನ್ನು ಹಿಮ್ಮೆಟ್ಟಿಸಲಾಗಿದೆ. ಮೊನ್ನೆ ನಾನು ಸಭೆ ಮಾಡಿ ಕಾರ್ಯಪಡೆ ರಚನೆ ಮಾಡಿದ್ದೇವೆ. ▶ 8ನೇ ಪುಟಕ್ಕೆ

ಮಂಗಳೂರು ಸ್ಫೋಟದಿಂದ ಪಾಠ ಕಲಿಯಿರಿ

ನಿಮ್ಮ 'ಆಧಾರ್' ಸುರಕ್ಷಿತವಾಗಿರಲಿ...

- ಎಡಿಜಿಪಿ ಅಲೋಕ್ ಕುಮಾರ್ ಸಲಹೆ
- ಮನೆ ಬಾಡಿಗೆಗೆ ನೀಡುವಾಗ ಎಚ್ಚರ... ಎಚ್ಚರ...!



ಬೆಂಗಳೂರು: ಮಂಗಳೂರು ಸ್ಫೋಟ ಪ್ರಕರಣದಿಂದ ನಾವೆಲ್ಲರೂ ಪಾಠ ಕಲಿಯಬೇಕಿದೆ ಎಂದು ಹೇಳಿರುವ ಎಡಿಜಿಪಿ ಅಲೋಕ್ ಕುಮಾರ್ ಅವರು, ಜನತೆಗೆ ಕೆಲ ಎಚ್ಚರಿಕೆಗಳನ್ನು ನೀಡಿದ್ದಾರೆ. ಈ ಕುರಿತು ಟ್ವೀಟ್ ಮಾಡಿರುವ ಅವರು, ಮಂಗಳೂರು ಸ್ಫೋಟ ಪ್ರಕರಣದಿಂದ ಪಾಠ ಕಲಿಯಬೇಕಿದೆ ಒಂದು ವೇಳೆ ನಿಮ್ಮ ಆಧಾರ್ ಕಾರ್ಡ್ ಕಳೆದು ಹೋದರೆ ಬಹಳ ಎಚ್ಚರ ವಹಿಸಬೇಕು. ಆಧಾರ್ ಸಂಖ್ಯೆ ನೀಡುವ ವಿಶಿಷ್ಟ ಗುರುತು ಪ್ರಾಧಿಕಾರ ವೆಬ್ ಸೈಟ್‌ನಲ್ಲಿ ಲಭ್ಯವಿರುವ ಲಾಕ್ ಮತ್ತು ಅನ್ ಲಾಕ್ ವ್ಯವಸ್ಥೆಯನ್ನು ಬಳಕೆ ಮಾಡುವಂತೆ ಸಲಹೆ ನೀಡಿದ್ದಾರೆ. ಮನೆಗಳನ್ನು ಬಾಡಿಗೆಗೆ ಕೊಡುವಾಗಲೂ

ಬಾಡಿಗೆಗೆ ಬರುವ ವ್ಯಕ್ತಿಗಳ ವಿವರಗಳನ್ನು ಮಾಲೀಕರು ಸಂಪೂರ್ಣವಾಗಿ ತಿಳಿದುಕೊಳ್ಳಬೇಕು. ಮನೆಯ ಅಕ್ಕಪಕ್ಕ ಏನು ನಡೆಯುತ್ತಿದೆ ಎಂಬುದನ್ನು ಗಮನಿಸುತ್ತಿರಬೇಕು ಎಂದು ಹೇಳಿದ್ದಾರೆ.



ಗೃಹ ಸಚಿವ ಆರಗ ಜ್ಞಾನೇಂದ್ರರಿಂದ ಸ್ಫೋಟ ಸಂಭವಿಸಿದ್ದ ಆಟೋ ಪರಿಶೀಲನೆ

'ಆಧಾರ್' ಲಾಕ್ ಮಾಡುವುದು ಹೇಗೆ: ವಿಶಿಷ್ಟ ಗುರುತು ಪ್ರಾಧಿಕಾರದ UIDAI ವೆಬ್ ಸೈಟ್‌ನಲ್ಲಿ ಅಗತ್ಯ ವಿವರಗಳನ್ನು ನಮೂದಿಸಿ, ನಿಮ್ಮ ಗುರುತು ದೃಢೀಕರಿಸಿದ ನಂತರ ನಿಮ್ಮ ಆಧಾರ್ ವಿವರಗಳನ್ನು ಲಾಕ್ ಮಾಡಲು ಅವಕಾಶವಿದೆ. ಹೀಗೆ ಆಧಾರ್ ದತ್ತಾಂಶ ಲಾಕ್ ಮಾಡಿದರೆ ನಿಮ್ಮ ಆಧಾರ್ ಸಂಖ್ಯೆಯನ್ನು ಬಳಸಿಕೊಂಡು ಯಾರೂ, ಯಾವುದೇ ಮಾಹಿತಿಯನ್ನು ದೃಢೀಕರಿಸಲು ಆಗುವುದಿಲ್ಲ. ಅಂದರೆ ಸಿಮ್ ಪಡೆಯುವುದು, ಬ್ಯಾಂಕ್ ಅಕೌಂಟ್ ತೆರೆಯುವುದು ಸೇರಿದಂತೆ ದುಷ್ಕರ್ಮಿಗಳು ಮೋಸ ಮಾಡುವ ಅವಕಾಶಗಳು ▶ 8ನೇ ಪುಟಕ್ಕೆ

ಇಂದಿನಿಂದ ಹಾಲು, ಮೊಸರು ಲೀಟರ್‌ಗೆ 2 ರೂ. ಹೆಚ್ಚಳ

ಬೆಂಗಳೂರು, ನ.23(ಕೆಎಂಶಿ)– ನಂದಿನಿ ಹಾಲು ಮತ್ತು ಮೊಸರಿನ ಮಾರಾಟ ದರ ಪ್ರತಿ ಲೀಟರ್‌ಗೆ ಎರಡು ರೂ. ಹೆಚ್ಚಳವಾಗಿದೆ. ಪರಿಷ್ಕೃತ ದರ ನಾಳೆ ಮುಂಜಾನೆಯಿಂದಲೇ ಜಾರಿಗೊಳ್ಳಲಿದೆ.



ಕೆಎಂಎಫ್, ಪ್ರತಿ ಲೀಟರ್‌ಗೆ ಮೂರು ರೂ. ಹೆಚ್ಚಳ ಮಾಡಿ. ಕಳೆದ ಕೆಲವು ದಿನಗಳ ಹಿಂದೆ ಹೊರಡಿಸಿದ್ದ ಆದೇಶಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಡೆಯೊಡ್ಡಿದ್ದರು.

ಒಕ್ಕೂಟ ಸರ್ಕಾರದೊಂದಿಗೆ ಚರ್ಚೆ ನಡೆಸಿದ ನಂತರ ಪ್ರತಿ ಲೀಟರ್‌ಗೆ ಎರಡು ರೂ. ಹೆಚ್ಚಿಸಲು ಅನುಮತಿ ನೀಡಿತ್ತು. ಇಂದು ಮಹಾಮಂಡಳದ ಸಭೆಯ ನಂತರ 2 ರೂ. ಹೆಚ್ಚಳ ಮಾಡಿ ಆದೇಶ ಮಾಡಲಾಗಿದೆ. ಹೆಚ್ಚಳದ ದರವನ್ನು ಪೂರ್ಣವಾಗಿ ಹಾಲು ಉತ್ಪಾದಕರಿಗೆ ಪಾವತಿಸುವುದಾಗಿ ಮಹಾಮಂಡಳ ತನ್ನ ಹೇಳಿಕೆಯಲ್ಲಿ ತಿಳಿಸಿದೆ. ಕಳೆದ 2 ವರ್ಷಗಳಿಂದ ಪಶು ಆಹಾರ ಸಾಮಗ್ರಿಗಳು ಹೆಚ್ಚಳವಾಗಿದ್ದು, ಹೈನುಗಾರಿಕೆ ರೈತರಿಗೆ ನೆರವಾಗುವ ದೃಷ್ಟಿಯಿಂದ ದರ ಏರಿಸಲಾಗಿದೆ.

ಡಿ.7ಕ್ಕೆ 'ಹುತ್ತರಿ' ಆಚರಣೆ

ನಾಪೋಕ್ಲು, ನ.23– ಕೊಡಗಿನ ಸುಗ್ಗಿಯ ಹಬ್ಬ 'ಹುತ್ತರಿ'ಯನ್ನು ಡಿ.7ರಂದು ಆಚರಿಸಲು ಕಕ್ಕಬೆ ಪಾಡಿ ಶ್ರೀ ಇಗ್ಗುತ್ತಪ್ಪ ಸನ್ನಿಧಿಯಲ್ಲಿ ಬುಧವಾರ ದಿನ ನಿಗದಿಪಡಿಸಲಾಯಿತು.



ಪಾಡಿ ಶ್ರೀ ಇಗ್ಗುತ್ತಪ್ಪ ದೇಗುಲದ ಆವರಣದಲ್ಲಿ ನಾಡಿನ ಹದಿಮೂರು ತಕ್ಕ ಮುಖ್ಯಸ್ಥರು, ದೇವಾಲಯದ ಭಕ್ತಜನ ಸಂಘದ ಅಧ್ಯಕ್ಷ ಮತ್ತು ಪದಾಧಿಕಾರಿಗಳ, ದೇವಾಲಯದ ಆಡಳಿತ ಅಧಿಕಾರಿಗಳು, ಊರಿನ ಗಣ್ಯರ ಉಪಸ್ಥಿತಿಯಲ್ಲಿ ಸಂಪ್ರದಾಯದಂತೆ ದೇಗುಲದ ಅಮ್ಮಂಗೇರಿ ಜ್ಯೋತಿಷಿ ಶಶಿಕುಮಾರ್ ಮತ್ತು ನಾಣಯ್ಯ, ಜೀವನ್ ಧಾರ್ಮಿಕ ವಿಧಿ ವಿಧಾನಗಳೊಂದಿಗೆ ಹುತ್ತರಿ ದಿನ ಮತ್ತು ಆಚರಣೆಯ ಸಮಯವನ್ನು ನಿಗದಿಪಡಿಸಿದರು. ರೋಹಿಣಿ ನಕ್ಷತ್ರದ ಹುಣ್ಣಿಮೆಯ ದಿನವಾದ ಡಿ.7 ಬುಧವಾರ ರಾತ್ರಿ 7.20 ಗಂಟೆಗೆ ಪಾಡಿ ಶ್ರೀ ಇಗ್ಗುತ್ತಪ್ಪ ದೇಗುಲದಲ್ಲಿ ನೆರೆ ಕಟ್ಟುವುದು, 8.20 ಗಂಟೆಗೆ ಕದಿರು ತೆಗೆಯುವುದು ಮತ್ತು 9.20 ಗಂಟೆಗೆ ಪ್ರಸಾದ ಸ್ವೀಕಾರಕ್ಕೆ ಶುಭ ಗಳಿಗೆ ನಿರ್ಧರಿಸಲಾಯಿತು.

ಅತ್ಯಾಚಾರಿಗೆ 43 ವರ್ಷ ಜೈಲು ಶಿಕ್ಷೆ

- ಮೈಸೂರು ಹೊರ ವಲಯದ ಫಾರಂವೊಂದರಲ್ಲಿ ಘಟನೆ ನಡೆದಿತ್ತು
- ಬಿಹಾರ ಮೂಲದ ವ್ಯಕ್ತಿ ಹೀನ ಕೃತ್ಯವೆಸಗಿದ್ದ
- ಪೋಕ್ಸೋ ನ್ಯಾಯಾಲಯದಿಂದ ಈ ಕಠಿಣ ಶಿಕ್ಷೆ ಪ್ರಕಟ

ಮೈಸೂರು, ನ.23–ಶಿವಮೊಗ್ಗ ಮೂಲದ ಅಪ್ರಾಪ್ತ ಬಾಲಕಿ ಮೇಲೆ ಅತ್ಯಾಚಾರವೆಸಗಿದ ಬಿಹಾರ ಮೂಲದ ಕಾರ್ಮಿಕನಿಗೆ 43 ವರ್ಷ ಜೈಲು ಶಿಕ್ಷೆ ಹಾಗೂ 50 ಸಾವಿರ ರೂ. ದಂಡ ವಿಧಿಸಿ ಪೋಕ್ಸೋ ವಿಶೇಷ ನ್ಯಾಯಾಲಯದ ನ್ಯಾಯಾಧೀಶರಾದ ಶ್ರೀಮತಿ ಶ್ಯಾಮ ಖಮ್ರೋಜ್ ತೀರ್ಪು ನೀಡಿದ್ದಾರೆ.

ಮೈಸೂರು ತಾಲೂಕು ಹಳೇ ಕೆಂಪಯ್ಯನ ಹುಂಡಿ ಗ್ರಾಮದ ಫಾರಂವೊಂದರಲ್ಲಿ ಕಾರ್ಮಿಕನಾಗಿದ್ದ ಬಿಹಾರ ಮೂಲದ ನಾಜಿಮ್ ಶಿಕ್ಷೆಗೊಳಗಾದವನು. ಈ ಪ್ರಕರಣದಲ್ಲಿ ದಂಡದ ಮೊತ್ತದಲ್ಲಿ 25 ಸಾವಿರ ರೂ. ಸಂತ್ರಸ್ತ ಬಾಲಕಿಗೆ ನೀಡಬೇಕು. ಹಾಗೂ ಬಾಲಕಿ 7 ಲಕ್ಷ ರೂ. ಪರಿಹಾರ ಪಡೆಯಲು ಅರ್ಹಳು ಎಂದು ನ್ಯಾಯಾಧೀಶರು ತಮ್ಮ ಆದೇಶದಲ್ಲಿ ತಿಳಿಸಿದ್ದಾರೆ.

ವಿವರ: ಶಿವಮೊಗ್ಗ ಜಿಲ್ಲೆಯ ಮಹಿಳೆಯೋರ್ವಳು ಜೀವನೋಪಾಯಕ್ಕಾಗಿ ತನ್ನ 10 ವರ್ಷದ ಮಗಳೊಂದಿಗೆ ಹಳೇ ಕೆಂಪಯ್ಯನ ಹುಂಡಿ ಗ್ರಾಮದಲ್ಲಿರುವ ಫಾರಂಗೆ ಬಂದು, ಅಲ್ಲೇ ನೆಲೆಸಿ, ಕೆಲಸ ಮಾಡುತ್ತಿದ್ದಳು. ಈಕೆಯ ಪುತ್ರಿ ಶಾಲೆಗೆ ಹೋಗದೆ ಫಾರಂನಲ್ಲೇ ಇದ್ದಳು. ಫಾರಂನ ಕಾರ್ಮಿಕ ನಾಜಿಮ್‌ಗೆ ಒಮ್ಮೆ ನಾಯಿ ಕಚ್ಚಿದ್ದು, ಆತ ತನ್ನ ಕೊಠಡಿಯಲ್ಲೇ ವಿಶ್ರಾಂತಿ ಪಡೆಯುತ್ತಿದ್ದ. ಆ ವೇಳೆ ಬಾಲಕಿ ಆತನಿಗೆ ಊಟ ತಂದು ಕೊಡುತ್ತಿದ್ದಳು. ಕಾಮುಕ ನಾಜಿಮ್, ಮೊಬೈಲ್‌ನಲ್ಲಿ ಬಾಲಕಿಗೆ ಅಶ್ಲೀಲ ವೀಡಿಯೋಗಳನ್ನು ತೋರಿಸಿದ್ದಲ್ಲದೇ, ಆಕೆಯ ಮೇಲೆ ಮೂರ್‍ನಾಲ್ಕು ಬಾರಿ ಅತ್ಯಾಚಾರವೆಸಗಿದ್ದಾನೆ. 2021ರ ಸೆ.15ರಂದು ಬಾಲಕಿಯು ಅಳುತ್ತಾ, 'ನಾವು ಇಲ್ಲಿ ಇರುವುದು ಬೇಡ, ಊರಿಗೆ ಹೋಗೋಣ' ಎಂದು ಹಠ ಹಿಡಿದಿದ್ದಾಳೆ. ಆ ವೇಳೆ ತಾಯಿ ಸಮಾಧಾನಪಡಿಸಿ ವಿಚಾರಿಸಿದಾಗ ನಾಜಿಮ್ ತನ್ನ ಮೇಲೆ ಮೂರ್‍ನಾಲ್ಕು ಬಾರಿ ಅತ್ಯಾಚಾರವೆಸಗಿದ್ದು, ಹಾಗೂ ಈ ವಿಚಾರವನ್ನು ಯಾರಿಗಾದರೂ ಹೇಳಿದರೆ ಕೊಲೆ ಮಾಡುವುದಾಗಿ ಬೆದರಿಸಿದ್ದಲ್ಲದೇ ಹಲ್ಲೆ ನಡೆಸಿದ್ದಾನೆ ಎಂದು ಬಾಲಕಿ ತನ್ನ ತಾಯಿಗೆ ವಿವರಿಸಿದ್ದಾಳೆ. ಈ ಸಂಬಂಧ ಮೈಸೂರಿನ ಮಹಿಳಾ ಠಾಣೆಯಲ್ಲಿ ಪೋಕ್ಸೋ ಕಾಯಿದೆಯಡಿ ಪ್ರಕರಣ ದಾಖಲಾಗಿತ್ತು.



ಮೈಸೂರು ಹೊರವಲಯದಲ್ಲಿ ಪೆರಿಫೆರಲ್ ರಸ್ತೆಗೆ ಡಿಪಿಆರ್ ತಯಾರಿಸಲು 10 ದಿನದಲ್ಲಿ ಟೆಂಡರ್





ದೇವನೂರು ಕೆರೆ ಪುನರುಜ್ಜೀವನ ಸಂಬಂಧ ಸಂಸದ ಪ್ರತಾಪ್‌ಸಿಂಹ, ಮುಡಾ ಆಯುಕ್ತ ಜಿ.ಟಿ.ದಿನೇಶ್‌ಕುಮಾರ್ ಬುಧವಾರ ಪರಿಶೀಲನೆ ನಡೆಸಿದರು.

ಮೈಸೂರು, ನ.23(ಆರ್‌ಕೆ)–ಮೈಸೂರು ಹೊರ ವಲಯದಲ್ಲಿ ಪೆರಿಫೆರಲ್ ರಿಂಗ್ ರಸ್ತೆ ನಿರ್ಮಾಣಕ್ಕೆ ಡಿಪಿಆರ್ (ವಿಸ್ತೃತ ಯೋಜನಾ ವರದಿ) ಸಿದ್ಧಪಡಿಸಲು 10 ದಿನದಲ್ಲಿ ಮುಡಾ ಟೆಂಡರ್ ಕರೆಯಲು ನಿರ್ಧರಿಸಿದೆ.

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ವು ಮೈಸೂರು ಹೊರ ವಲಯದಲ್ಲಿ 75 ರಿಂದ 120 ಕಿ.ಮೀ. ಉದ್ದದ ಪೆರಿಪೆರಲ್ ರಿಂಗ್ ರಸ್ತೆ ನಿರ್ಮಿಸಲು ಮುಂದಾಗಿದ್ದು, ಬಜೆಟ್‌ನಲ್ಲೂ ಅನುದಾನ ಮೀಸಲಿರಿಸಿದೆ. ಮಹತ್ವದ ಈ ಯೋಜನೆಯನ್ನು ಅನುಷ್ಠಾನಗೊಳಿಸಲು ಪ್ರಾಧಿಕಾರವು ಡಿಪಿಆರ್ ಸಿದ್ಧಪಡಿಸಲು ಅರ್ಹ ಅನುಭವವಿರುವ ಸಂಸ್ಥೆಗಳಿಂದ ಡಿಪಿಆರ್ ತಯಾರಿಸಲು ಮುಂದಾಗಿದೆ.

ಕೋಟ್ಯಾಂತರ ರೂ. ವೆಚ್ಚವಾಗುವುದರಿಂದ ಡಿಪಿಆರ್ ಸಿದ್ಧಪಡಿಸಲು ಟೆಂಡರ್ ಸಿದ್ಧಪಡಿಸುವ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿದೆ. ನಗರಾಭಿವೃದ್ಧಿ ಇಲಾಖೆಯಿಂದ ಅನುಮೋದನೆ ಸಿಕ್ಕಿದಲ್ಲಿ ನಾವು 10 ದಿನದೊಳಗಾಗಿ ಪೆರಿಫೆರಲ್ ರಸ್ತೆ ನಿರ್ಮಾಣಕ್ಕೆ ಡಿಪಿಆರ್ ತಯಾರಿಸಲು ಮುಡಾದಿಂದ ಟೆಂಡರ್ ಆಹ್ವಾನಿಸುತ್ತೇವೆ ಎಂದು ಮುಡಾ ▶ 6ನೇ ಪುಟಕ್ಕೆ

ವಾರದೊಳಗೆ ದೇವನೂರು ಕೆರೆ ಪುನರುಜ್ಜೀವನ ಕಾಮಗಾರಿ ಆರಂಭ

ಮೈಸೂರು, ನ.23(ಆರ್‌ಕೆ)–ವಾರದೊಳಗಾಗಿ ಮೈಸೂರಿನ ದೇವನೂರು ಕೆರೆ ಪುನರುಜ್ಜೀವನ ಕಾಮಗಾರಿ ಆರಂಭಿಸಲಾಗುವುದು ಎಂದು ಮುಡಾ ಆಯುಕ್ತ ಜಿ.ಟಿ.ದಿನೇಶ್ ಕುಮಾರ್ ತಿಳಿಸಿದ್ದಾರೆ.

ಖಾಸಗಿ ಬಡಾವಣೆಗೆ ಸಂಪರ್ಕ ಕಲ್ಪಿಸಲು ಕೆರೆ ಮಧ್ಯೆ ರಸ್ತೆ ನಿರ್ಮಿಸಿಕೊಂಡಿದ್ದಾರೆಂಬ ಆರೋಪದ ಹಿನ್ನೆಲೆಯಲ್ಲಿ ಬಿಜೆಪಿ ಮುಖಂಡರಾದ ಸಂದೇಶ್ ಸ್ವಾಮಿ, ಗಿರಿಧರ್ ಹಾಗೂ ಇತರರು ಕೆರೆ ಒತ್ತುವರಿ ತೆರವುಗೊಳಿಸುವಂತೆ ಒತ್ತಾಯಿಸಿದ ಹಿನ್ನೆಲೆಯಲ್ಲಿ ಸಂಸದ ಪ್ರತಾಪ್ ಸಿಂಹರೊಂದಿಗೆ ಮಂಗಳವಾರ ಸ್ಥಳಕ್ಕೆ ತೆರಳಿದ ಅವರು, ಸರ್ವೆ ಮಾಡಿಸಿ 12.37 ಎಕರೆ ಪ್ರದೇಶವಿರುವ ದೇವನೂರು ಕೆರೆ ಒತ್ತುವರಿ ತೆರವುಗೊಳಿಸಲಾಗುವುದು ಎಂದರು. ವಸತಿ ಬಡಾವಣೆಗಳಿಂದ ಕಲುಷಿತ ನೀರು ಹರಿದು ಬಂದಿರುವುದರಿಂದ ಮಲಿನವಾಗಿರುವ ದೇವನೂರು ಕೆರೆಯನ್ನು ಪುನರುಜ್ಜೀವನಗೊಳಿಸಿ ಮೊದಲಿನಂತೆ ಮೂಲ ಸ್ಥಿತಿಗೆ ತರಲು ಮುಡಾದಿಂದ 5 ಕೋಟಿ ರೂ. ವೆಚ್ಚದಲ್ಲಿ ಕಾಮಗಾರಿ ಕೈಗೆತ್ತಿಕೊಳ್ಳುತ್ತಿದ್ದು, ಒಂದು ವಾರದೊಳಗೆ ಕೆಲಸ ಆರಂಭಿಸುವುದಾಗಿ ದಿನೇಶ್ ಕುಮಾರ್ ತಿಳಿಸಿದರು. ನೀರಿನಲ್ಲಿ ಬೆಳೆದಿರುವ ಜೊಂಡು, ಗಿಡ–ಗಂಟಿ ತೆಗೆದು ಡೀಸೆಲ್ಟ್ ಮಾಡುವುದು, ಎಸ್‌ಟಿಪಿ ಮೂಲಕ ನೀರನ್ನು ಶುದ್ಧೀಕರಿಸಿ ಕೆರೆಗೆ ಬಿಡುವುದು, ▶ 6ನೇ ಪುಟಕ್ಕೆ

ಮರು ಮುದ್ರಣ ಕಂಡ ಕೆ.ಬಿ.ಗಣಪತಿ ಕಾದಂಬರಿ 'ಆದರ್ಶವಾದಿ'



ಮೈಸೂರು, ನ. 23– ಹಿರಿಯ ಪತ್ರಿಕೋದ್ಯಮಿ ಹಾಗೂ 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಕೆ.ಬಿ.ಗಣಪತಿ ಅವರ 'ಆದರ್ಶವಾದಿ' ಕಾದಂಬರಿ ಮರು ಮುದ್ರಣಗೊಂಡಿದೆ.

ಗಣೇಶ ಅಮೀನಗಡ ಅವರ ಕವಿತಾ ಪ್ರಕಾಶನದಿಂದ ಎರಡನೇ ಮುದ್ರಣ ಕಂಡ ಈ ಕಾದಂಬರಿಯು 1992ರಲ್ಲಿ ಮೊದಲ ಬಾರಿ ಪ್ರಕಟವಾಗಿತ್ತು.

'ಈ ಕಾದಂಬರಿಯ ಪ್ರತಿಗಳು ಸಂಪೂರ್ಣ ಮಾರಾಟವಾಗಿ ಅನೇಕ ವರ್ಷಗಳೇ ಕಳೆದುಹೋಗಿದ್ದವು. ಆದರೆ ಮರುಮುದ್ರಣಗೊಂಡಿರಲಿಲ್ಲ. ಈ ವರ್ಷ ಪ್ರಕಟವಾಗಿದ್ದಕ್ಕೆ ಖುಷಿ ಇದೆ' ಎನ್ನುತ್ತಾರೆ ಕಾದಂಬರಿಕಾರ ಕೆ.ಬಿ.ಗಣಪತಿ.

'ಮರು ಮುದ್ರಣ ಸಂದರ್ಭದಲ್ಲಿ ಮತ್ತೆ ಈ ಕಾದಂಬರಿ ಓದಿದಾಗ ಈಗಲೂ ಕಥಾವಸ್ತು ಪ್ರಸ್ತುತವಾಗಿದೆ ಎನಿಸಿತು. ಜೀವನದಲ್ಲಿ ಆದರ್ಶಗಳನ್ನಿಟ್ಟುಕೊಂಡು ಬದುಕಲು ಹೊರಟವರು ಯಾವ ರೀತಿ ತಮ್ಮ ಆದರ್ಶವನ್ನು ಸ್ವಾರ್ಥಕ್ಕಾಗಿ ರಾಜೀ ಮಾಡಿಕೊಳ್ಳುತ್ತಾರೆ ಎನ್ನುವುದು ಪುಸ್ತಕದ ಕಥಾವಸ್ತು. ಆ ಕಾರಣಕ್ಕಾಗಿಯೇ ಈ ಪುಸ್ತಕ ಕಾಲಾತೀತವಾಗುವ ಕಾದಂಬರಿ ಎನ್ನಬಹುದು ಎಂದು ಗಣಪತಿ ಅವರು ಅಭಿಪ್ರಾಯಪಟ್ಟಿದ್ದಾರೆ.

"ಇಂಥ ಅಪರೂಪದ ಕಾದಂಬರಿಯ ದೊಡ್ಡ ಗುಣವೆಂದರೆ ಕ್ಷಣ ಕ್ಷಣಕ್ಕೂ ಕುತೂಹಲ ಮೂಡಿಸುವುದು ಜೊತೆಗೆ ಓದಿಸಿಕೊಂಡು ಹೋಗುತ್ತದೆ. ಮೂವತ್ತು ವರ್ಷಗಳ ಹಿಂದೆ ಪ್ರಕಟವಾದ ಈ ಕಾದಂಬರಿಯ ತಾಜಾತನ ಗಮನಾರ್ಹ. ಇದಕ್ಕಾಗಿ ಈ ಕಾದಂಬರಿಯ ಮರುಮುದ್ರಣ ನಮ್ಮ ಪ್ರಕಾಶನದಿಂದ ಪ್ರಕಟಗೊಂಡಿದೆ" ಎಂದು ಪ್ರಕಾಶಕ ಗಣೇಶ ಅಮೀನಗಡ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

160 ಪುಟಗಳ ಈ ಕಾದಂಬರಿಯ ಬೆಲೆ 160 ರೂಪಾಯಿ. ಈಗ ನೂರು ರೂಪಾಯಿಗೆ ಲಭ್ಯವಿದೆ.

ಮಾಹಿತಿಗೆ ಮೊ. 9880105526 ಸಂಖ್ಯೆ ಸಂಪರ್ಕಿಸಬಹುದು.

ಮೈಸೂರಲ್ಲಿ ಎನ್ಐಎ ಭಯೋತ್ಪಾದನಾ ನಿಗ್ರಹ ಪಡೆಯ ಕೇಂದ್ರ ಸ್ಥಾಪಿಸಿ


ಕೇಂದ್ರ ಸರ್ಕಾರಕ್ಕೆ ಶ್ರೀರಾಮಸೇನೆ ಮುಖ್ಯಸ್ಥ ಪ್ರಮೋದ್ ಮುತಾಲಿಕ್ ಆಗ್ರಹ

ಮೈಸೂರು, ನ.23(ಪಿಎಂ)– ಮೈಸೂರು ನಗರ ಭಯೋತ್ಪಾದಕರಿಗೆ ಸ್ಲೀಪಿಂಗ್ ಸೆಲ್ (ಭಯೋತ್ಪಾದಕರ ತಾಣ) ಆಗುತ್ತಿದ್ದು, ಹಾಗಾಗಿ ಇಲ್ಲೊಂದು ಎನ್ಐಎ ಭಯೋತ್ಪಾದನೆ ನಿಗ್ರಹ ಪಡೆಯ ಕೇಂದ್ರ ತೆರೆಯಬೇಕೆಂದು ಕೇಂದ್ರ ಸರ್ಕಾರವನ್ನು ಆಗ್ರಹಿಸುವುದಾಗಿ ಶ್ರೀರಾಮಸೇನೆ ಮುಖ್ಯಸ್ಥ ಪ್ರಮೋದ್ ಮುತಾಲಿಕ್ ತಿಳಿಸಿದರು.

ಮೈಸೂರು ಅರಮನೆ ಉತ್ತರ ದ್ವಾರದ ಸಮೀಪ ಬುಧವಾರ ಮಾಧ್ಯಮದವರಿಗೆ ಪ್ರತಿಕ್ರಿಯೆ ನೀಡಿದ ಅವರು, ಮೈಸೂರು ನಗರವು ಭಯೋತ್ಪಾದಕ ಚಟುವಟಿಕೆಯ ಕೇಂದ್ರವಾಗುತ್ತಿದೆ. ಹಿಂದೂ ಕಾರ್ಯಕರ್ತ ಕ್ಯಾತಮಾರನಹಳ್ಳಿ ರಾಜು ಹತ್ಯೆಯೂ ಇಲ್ಲೇ ಆಯಿತು. ಇಲ್ಲಿನ ಕೋರ್ಟ್ ಆವರಣದಲ್ಲೂ ಬಾಂಬ್ ಸ್ಫೋಟಿಸಲಾಯಿತು. ಇದೀಗ ಮಂಗಳೂರಿನಲ್ಲಿ ಕುಕ್ಕರ್ ಬಾಂಬ್ ಸ್ಫೋಟಿಸಿದ ವ್ಯಕ್ತಿಯೂ ಮೈಸೂರಿನಲ್ಲೇ ಮನೆ ಮಾಡಿದ್ದ ಎಂದರು.

ಇದೆಲ್ಲವನ್ನು ನೋಡಿದರೆ ಮೈಸೂರು ಭಯೋತ್ಪಾದಕರಿಗೆ ಸ್ಲೀಪಿಂಗ್ ಸೆಲ್ ಆಗುತ್ತಿದೆ. ಹಾಗಾಗಿ ಇಲ್ಲಿ ಎನ್ಐಎ ಭಯೋತ್ಪಾದನೆ ನಿಗ್ರಹ ಪಡೆಯ ಕೇಂದ್ರ ಸ್ಥಾಪಿಸಿ, ಭಯೋತ್ಪಾದಕ ಚಟುವಟಿಕೆಗಳಿಗೆ ಕಡಿವಾಣ ಹಾಕಬೇಕು ಎಂದು ಪ್ರಮೋದ್ ಮುತಾಲಿಕ್ ಆಗ್ರಹಿಸಿದರು.

ಕಾನೂನುಬಾಹಿರ ಚಟುವಟಿಕೆ ಮೂಲಕ ಅನೇಕ ಸಂಘಟನೆಗಳು ಸಮಾಜಘಾತುಕ ಕೃತ್ಯದಲ್ಲಿ ತೊಡಗಿವೆ. ಭಯೋತ್ಪಾದನೆ ಕೃತ್ಯಗಳನ್ನು ಹಿಂದೂಗಳು ಮಾಡಿದ್ದಾರೆ ಎಂದು ಬಿಂಬಿಸಲು ಹಣೆಗೆ ಕುಂಕುಮ ಇಟ್ಟುಕೊಳ್ಳುವುದು, ಕೈಗೆ ದಾರ ಕಟ್ಟಿಕೊಳ್ಳುವುದು ಸೇರಿದಂತೆ ಬೇರೆ ಬೇರೆ ತಂತ್ರಗಾರಿಕೆ ನಡೆಸಲಾಗುತ್ತಿದೆ. ಹಿಂದೂಗಳೇ ಭಯೋತ್ಪಾದಕರು ಎಂದು ಬಿಂಬಿಸುವ ಪ್ರಯತ್ನದಲ್ಲಿ ಅವರು ವಿಫಲವಾಗಿದ್ದಾರೆ ಎಂದರು.



ಎನ್ಆರ್ ಕ್ಷೇತ್ರದಲ್ಲಿ ಕೂಂಬಿಂಗ್ ಆಪರೇಷನ್ ಆಗಬೇಕೆಂಬ ಸಂಸದ ಪ್ರತಾಪ್ ಸಿಂಹ ಹೇಳಿಕೆ ಸಂಬಂಧ ಪ್ರತಿಕ್ರಿಯಿಸಿ, ಅವರ ಹೇಳಿಕೆ ಒಪ್ಪುತ್ತೇನೆ. ಹಿಂದೂ ಸಮಾಜ ಎಂದೂ ಭಯೋತ್ಪಾದನೆ ಚಟುವಟಿಕೆಯಲ್ಲಿ ತೊಡಗುವುದಿಲ್ಲ. ಹಿಂದೂಗಳು ಎಂದೂ ಭಯೋತ್ಪಾದಕರು ಆಗುವುದಿಲ್ಲ. ಹಲಾಲ್ ವಿರುದ್ಧ ನಮ್ಮ ಹೋರಾಟ ಪ್ರಾರಂಭವಾದ ಬಳಿಕ ಇದೀಗ ಹಿಂದೂಗಳ ಹೆಸರಿಟ್ಟುಕೊಂಡೇ ಮಾಂಸ ಮಾರಾಟ ಮಾಡಲಾಗುತ್ತಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಲವ್ ಜಿಹಾದ್ ಹೆಚ್ಚಾಗುತ್ತಿದೆ. ಹಿಂದೂ ಹುಡುಗಿಯರು ಎಚ್ಚೆತ್ತುಕೊಳ್ಳಬೇಕು. ಎಚ್ಚರತಪ್ಪಿ ಹಿಂದೂ ಧರ್ಮ ಬಲಿ ಕೊಡಕೂಡದು. 3 ಸಾವಿರ ಹೆಣ್ಣು ಮಕ್ಕಳನ್ನು ಲವ್ ಜಿಹಾದ್‌ನಿಂದ ಪಾರು ಮಾಡಿದ್ದೇವೆ. ರಾಜ್ಯ ಬಿಜೆಪಿ ಸರ್ಕಾರ ಲವ್ ಜಿಹಾದ್ ವಿರುದ್ಧ ಪ್ರಬಲ ಕಾನೂನು ರಚನೆ ಮಾಡಬೇಕೆಂದು ಮುಖ್ಯಮಂತ್ರಿಗಳನ್ನು ಒತ್ತಾಯಿಸಿದರು. ಬಿಜೆಪಿ ಸರ್ಕಾರ ಇದ್ದಾಗಲೇ ಹಿಂದೂಗಳ ಗುರಿಯಾಗಿಸಿ ಕೃತ್ಯ ನಡೆಸಲಾಗುತ್ತಿದೆಯೇ? ಎಂಬುದಕ್ಕೆ ಪ್ರತಿಕ್ರಿಯಿಸಿ, ಹಿಂದೆಯೂ ಇತ್ತು. ಈಗಲೂ ಮುಂದುವರೆದಿದೆ. ಇದಕ್ಕೆ ಕಡಿವಾಣ ಹಾಕುವ ನಿಟ್ಟಿನಲ್ಲಿ ನಾವು ಹೋರಾಟ ಮುಂದುವರೆಸಿದ್ದೇವೆ ಎಂದರು.

ಮುಂಬರುವ ಚುನಾವಣೆಯಲ್ಲಿ ಸ್ಪರ್ಧೆ

ಬಿಜೆಪಿ ಸರ್ಕಾರದಲ್ಲಿ ಹಿಂದೂಗಳಿಗೆ ರಕ್ಷಣೆ ಇಲ್ಲವೇ? ಎಂಬುದಕ್ಕೆ ಉತ್ತರಿಸಿ, ರಕ್ಷಣೆ ನೀಡುವಲ್ಲಿ ನಿರ್ಲಕ್ಷ್ಯ ಮಾಡಲಾಗುತ್ತಿದೆ. ಹೀಗಾಗಿ ನಾನು ಸೇರಿದಂತೆ 25 ಮಂದಿ ಕಟ್ಟಾ ಹಿಂದೂ ಕಾರ್ಯಕರ್ತರು ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸಲು ನಿಶ್ಚಯಿಸಿದ್ದೇವೆ. ಈ ನಿರ್ಧಾರ ಹಿಂದುತ್ವದ ರಕ್ಷಣೆಗಾಗಿಯೇ ಹೊರತು ಬೇರೇನೂ ಅಲ್ಲ ಎಂದು ಪ್ರಮೋದ್ ಮುತಾಲಿಕ್ ಹೇಳಿದರು.

ಟಿಕೆಟ್ ದೊರೆಯುವ ನಿರೀಕ್ಷೆಯಲ್ಲಿ ಬಿಜೆಪಿ ಕುರಿತು ಪ್ರಮೋದ್ ಮುತಾಲಿಕ್ ಮೃದು ಧೋರಣೆ ಅನುಸರಿಸುತ್ತಿದ್ದಾರೆ ಎನ್ನಲಾಗುತ್ತಿದೆ ಎಂಬ ಬಗ್ಗೆ ಉತ್ತರಿಸಿದ ಅವರು, ನಾನು ಸಿದ್ದರಾಮಯ್ಯ ಅವರಿಗಿಂತ ಹೆಚ್ಚು ಬಿಜೆಪಿಯನ್ನು ಟೀಕೆ ಮಾಡುತ್ತಿದ್ದೇನೆ. ಹಿಂದುತ್ವ ಸಂರಕ್ಷಣೆ ಉದ್ದೇಶದಿಂದ ಆಗಾಗ್ಗೆ ತೀವ್ರವಾಗಿ ಟೀಕೆ ಮಾಡುತ್ತಿದ್ದೇನೆ. ಅದೂ ನನ್ನ ಸ್ವಾರ್ಥಕ್ಕಾಗಿ ಅಲ್ಲ. ಇದ್ದಿದ್ದನ್ನು ಇದ್ದಂತೆ ಹೇಳುವ ಹಿನ್ನೆಲೆಯಲ್ಲಿ ನನ್ನನ್ನು ದೂರವಿಡುತ್ತಿರುವುದು ಗೊತ್ತಿದೆ. ಇಲ್ಲಿ ಮೃದು ಧೋರಣೆ ಪ್ರಶ್ನೆಯೇ ಇಲ್ಲ ಎಂದು ಸ್ಪಷ್ಟಪಡಿಸಿದರು.

ನಾಳೆಯಿಂದ ಮೈಸೂರಲ್ಲಿ ಶಾರದ ವೀಣಾ ಮಹೋತ್ಸವ

ಮೈಸೂರು, ನ.23– ನಗರದ ಶ್ರೀ ಶಾರದಾ ಪ್ರತಿಷ್ಠಾನ ಟ್ರಸ್ಟ್ ವತಿಯಿಂದ ನ.25ರಿಂದ 27ರವರೆಗೆ ಪ್ರಥಮ ವರ್ಷದ 'ಶಾರದ ವೀಣಾ ಮಹೋತ್ಸವ'ವನ್ನು ಜಯನಗರದ 16ನೇ ಕ್ರಾಸ್ ಶ್ರೀರಾಮ ಮಂದಿರದಲ್ಲಿ ಹಮ್ಮಿಕೊಳ್ಳಲಾಗಿದೆ.

ನ.25ರಂದು ಸಂಜೆ ನಡೆಯುವ ಉದ್ಘಾಟನಾ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಪ್ರಸಿದ್ಧ ವೀಣಾ ವಾದಕ ವಿದ್ವಾನ್ ಆರ್.ಕೆ.ಪದ್ಮನಾಭ ಹಾಗೂ ಖ್ಯಾತ ಮೃದಂಗ ವಾದಕ ವಿದ್ವಾನ್ ಪಿ.ಎಸ್.ಶ್ರೀಧರ್ ಆಗಮಿಸಲಿದ್ದು, ಅಧ್ಯಕ್ಷತೆಯನ್ನು ಮೈಸೂರಿನ ಖ್ಯಾತ ಮೃದಂಗ, ಘಟ, ಮೋರ್ಚಿಂಗ್ ವಾದ್ಯಗಾರರಾದ ವಿದ್ವಾನ್ ವಿ.ಎಸ್.ರಮೇಶ್ ವಹಿಸಲಿದ್ದಾರೆ. ಶ್ರೀ ಶಾರದಾ ಪ್ರತಿಷ್ಠಾನದ ಅಧ್ಯಕ್ಷ ವಿದ್ವಾನ್ ಮೈಸೂರು ಕುಮಾರ್ ಕಾರ್ಯಕ್ರಮದಲ್ಲಿ ಉಪಸ್ಥಿತರಿರುವರು. ಪ್ರಥಮ ದಿವಸ ನ.25ರಂದು ಸಂಜೆ 6 ಗಂಟೆಗೆ ವಿದ್ವಾನ್ ಆರ್.ಕೆ.ಪದ್ಮನಾಭರವರಿಂದ ವೀಣಾವಾದನವನ್ನು ಆಯೋಜಿಸಲಾಗಿದೆ. ಇವರಿಗೆ ಮೃದಂಗದಲ್ಲಿ ವಿದ್ವಾನ್ ಪಿ.ಎಸ್.ಶ್ರೀಧರ್, ಘಟದಲ್ಲಿ ವಿದ್ವಾನ್ ವಿ.ಎಸ್.ರಮೇಶ್ ಸಹಕಾರ ನೀಡುವರು. ಎರಡನೇ ದಿನವಾದ ನ.26ರಂದು ಸಂಜೆ 6 ಗಂಟೆಗೆ ವಿದುಷಿ ಬಿ.ಕೆ.ವಿಜಯಲಕ್ಷ್ಮಿ ರಘು (ಶಿವಮೊಗ್ಗ) ಅವರಿಂದ ವೀಣಾವಾದನವನ್ನು ಹಮ್ಮಿಕೊಳ್ಳಲಾಗಿದ್ದು, ಇವರಿಗೆ ಮೃದಂಗದಲ್ಲಿ ವಿದ್ವಾನ್ ಎಸ್.ಕುಮಾರಸ್ವಾಮಿ ಹಾಗೂ ಘಟದಲ್ಲಿ ವಿದ್ವಾನ್ ವಿ.ಶ್ಯಾಮ್ ಸಹಕಾರ ನೀಡಲಿದ್ದಾರೆ. ಮೂರನೇ ದಿನವಾದ ನ.27ರಂದು ಸಂಜೆ 6 ಗಂಟೆಗೆ ವಿದ್ವಾನ್ ಲೋಕೇಶ್ವರ್ (ತುಮಕೂರು) ಇವರಿಂದ ವೀಣಾವಾದನವನ್ನು ಏರ್ಪಡಿಸಲಾಗಿದೆ. ಇವರಿಗೆ ಮೃದಂಗದಲ್ಲಿ ವಿದ್ವಾನ್ ಎಸ್.ಸುದರ್ಶನ್ ಹಾಗೂ ಘಟದಲ್ಲಿ ವಿದ್ವಾನ್ ವಿ.ಎಸ್.ರಮೇಶ್ ಸಹಕಾರ ನೀಡಲಿದ್ದಾರೆ ಎಂದು ಪ್ರತಿಷ್ಠಾನದ ಅಧ್ಯಕ್ಷ ವಿದ್ವಾನ್ ಮೈಸೂರು ಕುಮಾರ್ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗೆ ಮೊ.9845887237 ಸಂಪರ್ಕಿಸಬಹುದು.

ಪಿಎಚ್.ಡಿ ಪದವಿ



ಮೈಸೂರು,ನ.23–ಡಾ.ಎಂ.ಆರ್.ಜನಾರ್ಧನ ಅವರ ಮಾರ್ಗದರ್ಶನದಲ್ಲಿ ಎಂ.ಆರ್.ಅನುಷಾ, ಭೂವಿಜ್ಞಾನ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾ ಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಇಂದಿನಿಂದ ಸಾಂಸ್ಕೃತಿಕ ಕಾರ್ಯಕ್ರಮ

ಮೈಸೂರು,ನ.23–ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ವತಿಯಿಂದ ಆಯೋಜಿಸಿರುವ 2022ರ ದಸರಾ ವಸ್ತುಪ್ರದರ್ಶನ ಆವರಣದ ಪಿ.ಕಾಳಿಂಗರಾವ್ ಮಂಟಪದಲ್ಲಿ ನವೆಂಬರ್ 24ರಿಂದ 27ರವರೆಗೆ ನಾನಾ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ನವೆಂಬರ್ 24 ರಂದು ಸಂಜೆ 7 ರಿಂದ 8 ಗಂಟೆಯವರೆಗೆ ಧಾರವಾಡದ ಸೌಮ್ಯ ಡೋಲಿನ್ ತಂಡದವರಿಂದ ಸುಗಮಸಂಗೀತ, 8 ರಿಂದ 9.30 ಗಂಟೆಯವರೆಗೆ ಮೈಸೂರು ಜಿಲ್ಲಾ ಕನ್ನಡ ರಂಗಭೂಮಿ ವೃತ್ತಿ ಕಲಾವಿದೆಯರ ಸಂಘದ ವಸಂತಕೃಷ್ಣ ತಂಡದವರಿಂದ ನಾಟಕ.

ನವೆಂಬರ್ 25ರಂದು 7 ರಿಂದ 8 ಗಂಟೆಯವರೆಗೆ ರಾಘವೇಂದ್ರ ನಗರದ ಎನ್.ಚಂದನ ಅವರಿಂದ ಪಿಟೀಲು ವಾದನ, 8ರಿಂದ 9.30 ಗಂಟೆಯವರೆಗೆ ಮೈಸೂರಿನ ಮೋಹನ್‌ದೇವಯ್ಯ ಅವರಿಂದ ಆರ್ಕೆಸ್ಟ್ರಾ.

ನವೆಂಬರ್ 26ರಂದು 7ರಿಂದ 9.30 ಗಂಟೆವರೆಗೆ ಬೆಂಗಳೂರಿನ ವಿಜಯಕಶ್ಯಪ್ ಅವರಿಂದ ನಾಟಕ, ನವೆಂಬರ್ 27ರಂದು 7ರಿಂದ 9:30 ಗಂಟೆವರೆಗೆ ಮೈಸೂರಿನ ಯೋಗೇಶ್ ಅವರಿಂದ ಅಂಧಕಲಾವಿದರಿಂದ ನೃತ್ಯ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಡಾ.ಡಿ.ಎಂ.ನಾಗರಾಜು ಅವರಿಗೆ ಡಾ.ಬಾ.ರಾ.ಗೋಪಾಲ್ ಶಾಸನದತ್ತಿ ಪ್ರಶಸ್ತಿ



ಮೈಸೂರು, ನ. 23– ಮೈಸೂರಿನ ಭಾರತೀಯ ಪುರಾತತ್ವ ಸರ್ವೇಕ್ಷಣ ಇಲಾಖೆ ಶಾಸನ ವಿಭಾಗದ ನಿವೃತ್ತ ನಿರ್ದೇಶಕರಾದ ಡಾ. ಡಿ.ಎಂ. ನಾಗರಾಜು ಅವರನ್ನು ಡಾ.ಬಾ.ರಾ.ಗೋಪಾಲ್ ಶಾಸನ ದತ್ತಿ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ.

ಕರ್ನಾಟಕದ ಇತಿಹಾಸ, ಸಂಸ್ಕೃತಿ, ಶಾಸನ ಕ್ಷೇತ್ರಗಳಲ್ಲಿ ಸಲ್ಲಿಸಿದ ಗಣನೀಯ ಸೇವೆಯನ್ನು ಪರಿಗಣಿಸಿ ಕರ್ನಾಟಕ ಇತಿಹಾಸ ಅಕಾಡೆಮಿಯು ಚಿಕ್ಕಮಗಳೂರು ಜಿಲ್ಲೆಯ ಹೊರನಾಡಿನಲ್ಲಿ ನ.24ರಿಂದ 26ರವರೆಗೆ ನಡೆಯುವ 36ನೇ ವಾರ್ಷಿಕ ಸಮ್ಮೇಳನದಲ್ಲಿ ಡಾ.ಬಾ.ರಾ.ಗೋಪಾಲ್ ಶಾಸನದತ್ತಿ ಪ್ರಶಸ್ತಿ ನೀಡಿ ಗೌರವಿಸಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ಮಂಗಳೂರು ಕುಕ್ಕರ್ ಬಾಂಬ್ ಸ್ಫೋಟ ಪ್ರಕರಣ

ತಮಿಳುನಾಡು, ಕೇರಳದಲ್ಲೂ ತನಿಖೆ ಚುರುಕು



ಮಂಗಳೂರು: ಕುಕ್ಕರ್ ಬಾಂಬ್ ಬ್ಲಾಸ್ಟ್ ಕೇಸ್‌ಗೆ ಸಂಬಂಧಿಸಿದಂತೆ ತಮಿಳುನಾಡು, ಕೇರಳದಲ್ಲೂ ತನಿಖೆ ಚುರುಕುಗೊಳಿಸಲಾಗಿದೆ ಎಂದು ಡಿಜಿಪಿ ಪ್ರವೀಣ್ ಸೂದ್ ಹೇಳಿದ್ದಾರೆ.

ಮಂಗಳೂರು ಪೊಲೀಸ್ ಆಯುಕ್ತರ ಕಚೇರಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಶಾರೀಕ್ ಕೃತ್ಯಕ್ಕೆ ಹಣದ ಮೂಲದ ಬಗ್ಗೆ ತನಿಖೆ ನಡೆಯುತ್ತಿದೆ. ಆದರೆ ಈಗಲೇ ಎಲ್ಲ ಮಾಹಿತಿಗಳನ್ನು ಬಹಿರಂಗಗೊಳಿಸಲು ಸಾಧ್ಯವಿಲ್ಲ. ಸದ್ಯ ಆರೋಪಿಯ ಪ್ರಾಣ ಉಳಿಸಬೇಕು, ಅದು ನಮಗೆ ಅತೀ ಅಗತ್ಯ. ಅವನ ವಿಚಾರಣೆ ಬಳಿಕ ಮತ್ತಷ್ಟು ಸತ್ಯ ಹೊರಗೆ ಬರುತ್ತದೆ. ಈಗಲೇ ಎಲ್ಲ ಮಾಹಿತಿಯನ್ನು ಬಹಿ ರಂಗಗೊಳಿಸಿದರೆ ಮುಂದಿನ ವಿಚಾರಣೆಗೆ ತೊಂದರೆಯಾಗುತ್ತದೆ ಎಂದರು. ಎನ್ಐಎ ಮತ್ತು ಕೇಂದ್ರದ ತನಿಖಾ ಸಂಸ್ಥೆಗಳು ನಮ್ಮ ಜೊತೆ ಇವೆ. ಸದ್ಯದಲ್ಲೇ ಅಧಿಕೃತವಾಗಿ ಈ ಪ್ರಕರಣ ಎನ್ಐಎಗೆ ಹಸ್ತಾಂತರ ಆಗಲಿದೆ. ಈ ಬಗ್ಗೆ ಕೇಂದ್ರ ಸರ್ಕಾರಕ್ಕೆ ಪತ್ರ ಬರೆಯಲಾಗಿದೆ. ತಮಿಳುನಾಡು, ಕೇರಳ ಎಲ್ಲಾ ಕಡೆಗಳಲ್ಲೂ ನಮ್ಮ ತನಿಖೆ ನಡೆಯುತ್ತಿದೆ. ನಮ್ಮ ಪೊಲೀಸರು ಕೂಡ ಈ ಬಗ್ಗೆ ವಿಚಾರಣೆ ಮುಂದುವರಿಸುತ್ತಾರೆ. ಪ್ರತಿಯೊಬ್ಬರ ಸಹಕಾರಕ್ಕಾಗಿ ನಾವು ಹಲವು ಜನರನ್ನು ವಿಚಾರಣೆ ಮಾಡುತ್ತೇವೆ. ಅವರನ್ನು ನಾವು ಅರೆಸ್ಟ್ ಮಾಡುತ್ತಿಲ್ಲ. ವಿಚಾರಣೆಗೆ ಮಾತ್ರ ಕರೆದು ತರ್ತೀವಿ ಅಷ್ಟೇ ಹೊರತು ಅವರು ಅಪರಾಧಿಗಳಾಗಿರುವುದಿಲ್ಲ. ಅವರನ್ನು ಅಪರಾಧಿಗಳಂತೆ ಬಿಂಬಿಸುವುದನ್ನು ಬಿಡಬೇಕು ಎಂದು ಮನವಿ ಮಾಡಿದ್ದಾರೆ. ಈಗಾಗಲೇ ಬೆಂಗಳೂರು ಸೇರಿ 8 ಕಡೆ ದಾಳಿ ನಡೆಸಿ, 4 ಮಂದಿಯನ್ನು ವಶಕ್ಕೆ ಪಡೆದು ವಿಚಾರಣೆ ಮಾಡ್ತಿದ್ದೇವೆ ಆದರೆ ಆರೋಪಿಗಳು ಎಂದು ಯಾರನ್ನೂ ಕರೆತಂದಿಲ್ಲ. ಒಬ್ಬರನ್ನು ಹಿಡಿಯುವ ಪ್ರಶ್ನೆಯಲ್ಲ, ಕೃತ್ಯದ ಹಿಂದಿರುವವರೂ ನಮಗೆ ಬೇಕು. ಅದಕ್ಕಾಗಿ ನಾವು ಎಲ್ಲಾ ರೀತಿಯಿಂದಲೂ ತನಿಖೆ ಮಾಡುತ್ತಿದ್ದೇವೆ ಎಂದು ಮಾಹಿತಿ ನೀಡಿದ್ದಾರೆ.



ಸಹಕಾರಿ ರತ್ನ ಪ್ರಶಸ್ತಿ ಪುರಸ್ಕೃತರಾದ ದಿ ಮೈಸೂರು ಕೋ ಆಪರೇಟಿವ್ ಬ್ಯಾಂಕ್ ಮಾಜಿ ಅಧ್ಯಕ್ಷ ಕೆ.ಉಮಾಶಂಕರ್ ಅವರನ್ನು ಗೋಕುಲಂನ ಕೆಂಪೀರೇಗೌಡರ ಉದ್ಯಾನವನದಲ್ಲಿ ಸನ್ಮಾನಿಸಲಾಯಿತು. ದಿ ಸಿಟಿ ಕೋ ಆಪರೇಟಿವ್ ಬ್ಯಾಂಕ್ ಅಧ್ಯಕ್ಷ ಎಸ್.ಬಿ.ಶಿವು, ನಿರ್ದೇಶಕ ವಿ.ಮಧು, ದಿ ಮೈಸೂರು ಕೋ ಆಪರೇಟಿವ್ ಬ್ಯಾಂಕ್ ನಿರ್ದೇಶಕ ಪಡುವಾರಹಳ್ಳಿ ಎಂ.ರಾಮಕೃಷ್ಣ, ವೆಂಕಟಾಚಲ, ಜನಹಿತ ವಿವಿಧೋದ್ದೇಶ ಸಹಕಾರ ಸಂಘದ ನಿರ್ದೇಶಕರಾದ ಸಿ.ಡಿ.ಕುಮಾರ್, ಸಂತೋಷ್, ಬಿ.ಕುಮಾರ್, ಕೇಬಲ್ ಕಿಟ್ಟಿ, ಗೋಕುಲಂನ ಜಯಣ್ಣ, ಶ್ರೀನಿವಾಸ್‌ಗೌಡ, ಸುರೇಂದ್ರ ಉಪಸ್ಥಿತರಿದ್ದರು.

ನಾಳೆ ಕನ್ನಡ ಚಲನಚಿತ್ರ ಗೀತೆಗಳ ಗಾಯನ



ಮೈಸೂರು,ನ.23(ಪಿಎಂ)–ಅಮೃತವರ್ಷಿಣಿ ಗಾನ ವೃಂದ ಹವ್ಯಾಸಿ ಗಾಯಕರ ತಂಡದ ವತಿಯಿಂದ ಕನ್ನಡ ರಾಜ್ಯೋತ್ಸವ ಪ್ರಯುಕ್ತ ನ.25ರಂದು ಕನ್ನಡ ಚಲನಚಿತ್ರ ಗೀತೆಗಳ ರಸಮಂಜರಿ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ತಂಡದ ಅಧ್ಯಕ್ಷ ಅಮೃತೇಶ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಸಂಜೆ 5.30ಕ್ಕೆ ಜೆಎಲ್‌ಬಿ ರಸ್ತೆಯ ನಾದಬ್ರಹ್ಮ ಸಂಗೀತ ಸಭಾದಲ್ಲಿ ಕಾರ್ಯಕ್ರಮ ನಡೆಯಲಿದೆ. ಯಾವುದೇ ಪ್ರಾಯೋಜಕತ್ವ ಇಲ್ಲದೆ ತಂಡದ ಸದಸ್ಯರ ಮೂಲಕ ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ತಂಡದಲ್ಲಿ 12 ಮಂದಿ ಸದಸ್ಯರಿದ್ದು, ಕರೋಕೆ ಮೂಲಕ ಗಾಯನ ಸಾದರಪಡಿಸಲಾಗುವುದು ಎಂದರು. ನಾಡು–ನುಡಿಗೆ ಸಂಬಂಧಿಸಿದ ಆಯ್ದ 30 ಗೀತೆಗಳನ್ನು ಸಾದರಪಡಿಸಲಾಗುವುದು. ಪ್ರವೇಶ ಉಚಿತವಿದೆ ಎಂದರು. ತಂಡದ ಉಪಾಧ್ಯಕ್ಷೆ ಪುಷ್ಪಲತಾ, ಕಾರ್ಯದರ್ಶಿ ಬಾಲು ಪ್ರಕಾಶ್, ಸದಸ್ಯರಾದ ಪದ್ಮಜಾ ಸತ್ಯನಾರಾಯಣ, ಪ್ರದೀಪ್ ಗೋಷ್ಠಿಯಲ್ಲಿದ್ದರು.

ವರದಕ್ಷಿಣೆ ಕಿರುಕುಳಕ್ಕೆ ಗೃಹಿಣಿ ಸಾವು: ಪತಿ ಸೇರಿ ನಾಲ್ವರಿಗೆ 9 ವರ್ಷ ಶಿಕ್ಷೆ

ಮೈಸೂರು, ನ.23–ವರದಕ್ಷಿಣೆ ಕಿರುಕುಳ ನೀಡಿ ಗೃಹಿಣಿ ಆತ್ಮಹತ್ಯೆಗೆ ಪ್ರಚೋದಿಸಿದ ಪತಿ ಸೇರಿ ನಾಲ್ವರಿಗೆ 9 ವರ್ಷ ಕಠಿಣ ಶಿಕ್ಷೆ ಹಾಗೂ 25 ಸಾವಿರ ರೂ. ದಂಡ ವಿಧಿಸಿ, ಮೈಸೂರಿನ 5ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶರಾದ ಮಲ್ಲಿಕಾರ್ಜುನ ತೀರ್ಪು ನೀಡಿದ್ದಾರೆ. ನಂಜನಗೂಡು ತಾಲೂಕು ತುಂಬುನೇರಳೆ ಗ್ರಾಮದ ಜಿ.ಸಿದ್ದರಾಜು, ಆತನ ತಾಯಿ ಜಯಮ್ಮ, ಸಹೋದರಿಯರಾದ ಸುಮಾ ಮತ್ತು ಐಶ್ವರ್ಯಾ ಶಿಕ್ಷೆಗೆ ಗುರಿಯಾದವರು.

ವಿವರ: ನಂಜನಗೂಡು ತಾಲೂಕು ತಾಯೂರು ಗ್ರಾಮದ ಬಸವನಾಯಕ ಎಂಬುವರ ಪುತ್ರಿ ಪುಷ್ಪಮಾಲಾ ಅಲಿಯಾಸ್ ಮಾಲಾ ಅವರನ್ನು ತುಂಬುನೇರಳೆ ಗ್ರಾಮದ ಗುರುಸಿದ್ದನಾಯಕ ಪುತ್ರ ಜಿ.ಸಿದ್ದರಾಜು ಎಂಬಾತನಿಗೆ 2012ರ ಮೇ 30ರಂದು ಮದುವೆ ಮಾಡಿಕೊಡಲಾಗಿತ್ತು. ಈ ವೇಳೆ ವರದಕ್ಷಿಣೆಯಾಗಿ 1 ಲಕ್ಷ ರೂ. ಅಲ್ಲದೇ ವರನ ಕಡೆಯವರೇ ಮದುವೆ ಮಾಡಿಕೊಳ್ಳಬೇಕೆಂದು ಖರ್ಚಿಗಾಗಿ ಮತ್ತೆ 1 ಲಕ್ಷ ರೂ. ನೀಡಲಾಗಿತ್ತು.

ಮದುವೆಯ ನಂತರ ಪತಿ ಮತ್ತು ಆತನ ಮನೆಯವರು, ಬೇರೆ ಹುಡುಗಿಯನ್ನು ಮದುವೆಯಾಗಿದ್ದರೆ ಹೆಚ್ಚಿನ ವರದಕ್ಷಿಣೆ ಮತ್ತು ಆಸ್ತಿ ಸಿಗುತ್ತಿತ್ತು. ನಿಮ್ಮ ಮನೆಯವರು ಏನೂ ಕೊಟ್ಟಿಲ್ಲ ಎಂದು ಮಾನಸಿಕ ಹಾಗೂ ದೈಹಿಕವಾಗಿ ಪುಷ್ಪಮಾಲಾಳಿಗೆ ಹಿಂಸೆ ನೀಡುತ್ತಿದ್ದರು. ಈ ಬಗ್ಗೆ ಆಕೆಯ ಮನೆಯವರು ಗ್ರಾಮದಲ್ಲಿ ಪಂಚಾಯ್ತಿ ನಡೆಸಿದ್ದರಾದರೂ, ಗಂಡನ ಮನೆಯವರ ಹಿಂಸೆ ಮುಂದುವರೆದಿತ್ತು.

ಈ ಮಧ್ಯೆ 2014ರಲ್ಲಿ ಗೌರಿ ಹಬ್ಬಕ್ಕಾಗಿ ಬಸವರಾಜ ನಾಯಕರು ಮಗಳು ಪುಷ್ಪಮಾಲಾಳನ್ನು ತಮ್ಮ ಮನೆಗೆ ಕರೆತಂದಿದ್ದರು. 2014ರ ನವೆಂಬರ್ 4ರಂದು ಸಂಜೆ ತವರು ಮನೆಯಲ್ಲೇ ನೇಣು ಬಿಗಿದುಕೊಂಡು ಪುಷ್ಪಮಾಲಾ ಮೃತಪಟ್ಟಿದ್ದರು. ಈ ಸಂಬಂಧ ಬದನವಾಳು ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ತನಿಖೆ ನಡೆಸಿದ ನಂಜನಗೂಡು ಉಪ ವಿಭಾಗದ ಅಂದಿನ ಸಹಾಯಕ ಪೊಲೀಸ್ ಆಯುಕ್ತ ನಿಕ್ಕಂ ಪ್ರಕಾಶ್ ಅಮೃತ್ ಅವರು ನ್ಯಾಯಾಲಯಕ್ಕೆ ಆರೋಪ ಪಟ್ಟಿ ಸಲ್ಲಿಸಿದ್ದರು.

ವಿಚಾರಣೆ ನಡೆಸಿದ ನ್ಯಾಯಾಧೀಶರು ಪುಷ್ಪಮಾಲಾಳ ಪತಿ, ಅತ್ತೆ ಹಾಗೂ ಇಬ್ಬರು ನಾದಿನಿಯರಿಗೆ 9 ವರ್ಷ ಕಠಿಣ ಶಿಕ್ಷೆ ಹಾಗೂ ತಲಾ 25 ಸಾವಿರ ರೂ. ದಂಡ ವಿಧಿಸಿದ್ದಾರೆ. ದಂಡದ ಹಣದಲ್ಲಿ 70 ಸಾವಿರ ರೂ.ಗಳನ್ನು ಪರಿಹಾರ ರೂಪದಲ್ಲಿ ಪುಷ್ಪಮಾಲಾ ತಂದೆ ಬಸವರಾಜ ನಾಯಕ ಅವರಿಗೆ ನೀಡಬೇಕೆಂದು ಆದೇಶಿಸಿದ್ದಾರೆ. ಸರ್ಕಾರದ ಪರವಾಗಿ ಸರ್ಕಾರಿ ಅಭಿಯೋಜಕರಾದ ನಾಗಪ್ಪ ಸಿ. ನಾಕಮನ್ ವಾದ ಮಂಡಿಸಿದ್ದರು.

ಬ್ರಾಹ್ಮಣ ಸಮುದಾಯ ಕುರಿತು ಚಿಂತಕ ಪ.ಮಲ್ಲೇಶ್ ಹೇಳಿಕೆ ವಿಚಾರ

ವಿಷಾದ ವ್ಯಕ್ತಪಡಿಸಿದರೂ ಹೋರಾಟ ಅರ್ಥವಿಲ್ಲ

ದಲಿತ ವೆಲ್‌ಫೇರ್ ಟ್ರಸ್ಟ್ ಅಭಿಮತ; ಈ ವಿಚಾರದಲ್ಲಿ ಕೆಲವರಿಂದ ರಾಜಕಾರಣ



ಮೈಸೂರು, ನ.23 (ಪಿಎಂ)– ಬ್ರಾಹ್ಮಣ ಸಮುದಾಯ ಕುರಿತು ಚಿಂತಕ ಪ.ಮಲ್ಲೇಶ್ ಉದ್ದೇಶಪೂರ್ವಕವಾಗಿ ಹೇಳಿಕೆ ನೀಡಿಲ್ಲ. ಜೊತೆಗೆ ಅವರು ವಿಷಾದ ವ್ಯಕ್ತಪಡಿಸಿದ್ದು, ಹಾಗಾಗಿ ಅವರ ವಿರುದ್ಧ ಪ್ರತಿಭಟನೆ ಮುಂದುವರೆಸುವುದು ಸೂಕ್ತವಲ್ಲ ಎಂದು ದಲಿತ ವೆಲ್‌ಫೇರ್ ಟ್ರಸ್ಟ್ ಅಭಿಪ್ರಾಯಪಟ್ಟಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಟ್ರಸ್ಟ್ ಅಧ್ಯಕ್ಷ ಶಾಂತರಾಜು, ಪ.ಮಲ್ಲೇಶ್, ಬಸವಣ್ಣನವರ ಅನುಯಾಯಿ ಆಗಿ ಶರಣರ ಆದರ್ಶದ ಪರಿಪಾಲಕರಾಗಿ ಸಾಮಾಜಿಕ ಬದ್ಧತೆ ಹೊಂದಿರುವ ಹೋರಾಟಗಾರರು. ನಾವು ಬ್ರಾಹ್ಮಣ ಸಮುದಾಯದ ವಿರೋಧಿಗಳಲ್ಲ. ಬದಲಿಗೆ ಅಸಮಾನತೆ ಪೋಷಿಸುವ ಬ್ರಾಹ್ಮಣ್ಯದ ವಿರೋಧಿಗಳು. ಪ.ಮಲ್ಲೇಶ್ ತಮ್ಮ ಹೇಳಿಕೆಗೆ ವಿಷಾದ ವ್ಯಕ್ತಪಡಿಸಿದ ಮೇಲೂ ಅವರ ವಿರುದ್ಧ ಹೋರಾಟ ಮುಂದುವರೆಸುವುದರಲ್ಲಿ ಅರ್ಥವಿಲ್ಲ. ಆದರೂ ಕೆಲವರು ರಾಜಕಾರಣಕ್ಕೆ ಇದನ್ನು ಬಳಸಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ ಎಂದು ದೂರಿದರು.

ಕಳೆದ 8 ವರ್ಷಗಳಿಂದ ದೇಶದಲ್ಲಿ ದಲಿತರ ಮೇಲಿನ ದೌರ್ಜನ್ಯ ಹೆಚ್ಚಾಗುತ್ತಿದೆ. ಜಾತಿ–ಧರ್ಮಗಳ ನಡುವೆ ವೈಮನಸ್ಯ ಉಂಟು ಮಾಡಲಾಗುತ್ತಿದೆ. ದಲಿತ ಸಮುದಾಯ ಮಾತ್ರವಲ್ಲದೆ, ಅಲ್ಪಸಂಖ್ಯಾತರು ಹಾಗೂ ಹಿಂದುಳಿದ ವರ್ಗಗಳು ನೆಮ್ಮದಿಯಿಂದ ಬದುಕಲಾಗದ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಆತಂಕ ವ್ಯಕ್ತಪಡಿಸಿದರು.

ಬ್ರಾಹ್ಮಣ ಸಮುದಾಯದಲ್ಲಿ ಸಾಕಷ್ಟು ಮಂದಿ ಸಮಾಜ ಸುಧಾರಕರಿದ್ದಾರೆ. ಅವರನ್ನು ಎಲ್ಲರೂ ಒಪ್ಪಿಕೊಳ್ಳಲೇಬೇಕು. ಸಮಾನತೆ ಪ್ರತಿಪಾದಿಸುವ ಬ್ರಾಹ್ಮಣ ಮನಸ್ಸುಗಳು ಈಗಲೂ ಇದ್ದು, ಅವರನ್ನು ನಾವು ಗೌರವಿಸುತ್ತೇವೆ. ಅಸ್ಪೃಶ್ಯತೆ ಹೋಗಲಾಡಿಸುವ ಬಗ್ಗೆ ಬ್ರಾಹ್ಮಣ್ಯ ಮನೋಭಾವದ ಜನ ಎಂದಾದರೂ ಮಾತನಾಡಿದ್ದಾರಾ? ಚಾಮರಾಜನಗರದ ಹೆಗ್ಗೋಠಾರದಲ್ಲಿ ದಲಿತ ಮಹಿಳೆ ನೀರು ಕುಡಿದ ಕಾರಣಕ್ಕೆ ಟ್ಯಾಂಕ್ ಶುದ್ಧೀಕರಣ ಮಾಡಿದ ಘಟನೆ ಬಗ್ಗೆ ಎಷ್ಟು ಜನ ಖಂಡಿಸಿದ್ದಾರೆ ಎಂದು ಪ್ರಶ್ನಿಸಿದರು.

ಡಿ.6ರಂದು ಸಮಾವೇಶ

"ದೇಶದಲ್ಲಿ ದಲಿತರ ಮೇಲೆ ನಡೆಯುತ್ತಿರುವ ದೌರ್ಜನ್ಯಗಳ ವಿರುದ್ಧ ಹೋರಾಟದ ರೂಪುರೇಷೆ ಬಗ್ಗೆ ಚರ್ಚಿಸಲು ಡಿ.6ರಂದು ದಲಿತ ಸಂಘಟನೆಗಳ ಸ್ವಾಭಿಮಾನ ಸಮಾವೇಶ ಹಮ್ಮಿಕೊಳ್ಳಲಾಗಿದೆ. ಇಡೀ ರಾಜ್ಯದಿಂದ ಲಕ್ಷಾಂತರ ಜನ ಸಮಾವೇಶದಲ್ಲಿ ಸೇರಲಿದ್ದಾರೆ. ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಿಂದ ಲಕ್ಷಕ್ಕೂ ಅಧಿಕ ಮಂದಿ ಸಮಾವೇಶದಲ್ಲಿ ಪಾಲ್ಗೊಳ್ಳಲಿದ್ದಾರೆ

–ಶಾಂತರಾಜು, ದಲಿತ ವೆಲ್‌ಫೇರ್ ಟ್ರಸ್ಟ್ ಅಧ್ಯಕ್ಷ

ಹಲ್ಲೆಗೆ ಸಿ.ಟಿ.ರವಿ ಕಾರಣ: ಮೂಡಿಗೆರೆ ಶಾಸಕ ಎಂ.ಪಿ.ಕುಮಾರಸ್ವಾಮಿ ತಮ್ಮನ್ನು ಅಟ್ಟಾಡಿಸಿ ಹಲ್ಲೆ ನಡೆಸಿದರೆಂದು ಕಣ್ಣೀರು ಹಾಕಿದ್ದಾರೆ. ಒಬ್ಬರಾದರೂ ಬಿಜೆಪಿ ಸಂಸದರು, ಶಾಸಕರು ಕುಮಾರಸ್ವಾಮಿ ಪರವಾಗಿ ಹೇಳಿಕೆ ನೀಡಿದ್ದಾರೆಯೇ? ಅದೇ ಜಿಲ್ಲೆಯವರೇ ಆದ ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ಒಂದು ಹೇಳಿಕೆ ಸಹ ನೀಡಿಲ್ಲ. ಬಿಜೆಪಿ ಅಂದರೇನು? ಎಂದು ಅರ್ಥ ಮಾಡಿಕೊಳ್ಳಬೇಕು. ಮೀಸಲು ಕ್ಷೇತ್ರದಲ್ಲಿ ಆಯ್ಕೆಯಾದ ಜನಪ್ರತಿನಿಧಿಗಳು ಯೋಚನೆ ಮಾಡಬೇಕು. ಕುಮಾರಸ್ವಾಮಿ ಮೇಲಿನ ಹಲ್ಲೆಗೆ ಸಿ.ಟಿ.ರವಿಯೇ ಕಾರಣ ಎಂದು ದೂರಿದರು.

ಎಸ್‌ಡಿಪಿಐ ಮುಖಂಡ ದೇವನೂರು ಪುಟ್ಟನಂಜಯ್ಯ ಮಾತನಾಡಿ, ಪ.ಮಲ್ಲೇಶ್ ಅಸಮಾನತೆಯ ವ್ಯವಸ್ಥೆ ಬಗ್ಗೆ ಹೇಳಿಕೆ ನೀಡಿದ್ದಾರೆಯೇ ಹೊರತು, ಬ್ರಾಹ್ಮಣ ಸಮುದಾಯದ ಬಗ್ಗೆಯಲ್ಲ. ಅವರ ಹೇಳಿಕೆ ಬ್ರಾಹ್ಮಣೀಕರಣದ ವಿರುದ್ಧವಾಗಿದೆ. ನಾನೇ ಶ್ರೇಷ್ಠ ಎನ್ನುವುದು ಬ್ರಾಹ್ಮಣೀಕರಣದ ಮನಸ್ಥಿತಿಯಾಗಿದೆ ಎಂದು ಹೇಳಿದರು.

ಟ್ರಸ್ಟ್ ಕಾರ್ಯದರ್ಶಿ ಚಿಕ್ಕ ಅನ್ನದಾನಿ ಮಾತನಾಡಿ, ಪ.ಮಲ್ಲೇಶ್ ಅವರು ಒಂದು ನಿರ್ದಿಷ್ಟ ವರ್ಗದ ಬಗ್ಗೆ ಹೇಳಿಕೆ ನೀಡಿಲ್ಲ. ಬದಲಿಗೆ ಅವರ ಹೇಳಿಕೆಯು ಸಮಾಜದಲ್ಲಿರುವ ಶೋಷಣೆ ವಿರುದ್ಧವಾಗಿದೆ. ಹಾಗಾಗಿ ಅವರ ಹೇಳಿಕೆಗೆ ನಮ್ಮ ಸಂಪೂರ್ಣ ಬೆಂಬಲವಿದ್ದು, ಅವರ ಪರವಾಗಿ ನಾವಿದ್ದೇವೆ ಎಂದರು. ಪಾಲಿಕೆ ಮಾಜಿ ಸದಸ್ಯ ಆರ್.ಸಿದ್ದಪ್ಪ ಮುಖಂಡ ಮಹಾಲಿಂಗು ಗೋಷ್ಠಿಯಲ್ಲಿದ್ದರು.

ಪ್ರೋತ್ಸಾಹ ಧನ ಮಂಜೂರು ಆದೇಶ

ಮೈಸೂರು,ನ.23–ಸಮಾಜ ಕಲ್ಯಾಣ ಇಲಾಖೆ ವತಿಯಿಂದ 2020–21ನೇ ಶೈಕ್ಷಣಿಕ ಸಾಲಿನಲ್ಲಿ ಕೋವಿಡ್–19ರ ಸಂದರ್ಭದಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಪ್ರಥಮ ಪ್ರಯತ್ನದಲ್ಲಿ ಪ್ರಥಮ ದರ್ಜೆಯಲ್ಲಿ ಪರೀಕ್ಷೆ ಬರೆಯದೆ ತೇರ್ಗಡೆಯಾಗಿರುವ ವಿದ್ಯಾರ್ಥಿಗಳಿಗೆ ಶೇ.50ರಷ್ಟು ಪ್ರೋತ್ಸಾಹ ಧನವನ್ನು, ಉಳಿದ ಮೆಟ್ರಿಕ್ ನಂತರದ ಕೋರ್ಸುಗಳಲ್ಲಿ ವಾರ್ಷಿಕ ಪರೀಕ್ಷೆ ಬರೆದು ಪ್ರಥಮ ದರ್ಜೆ ಪ್ರಥಮ ಪ್ರಯತ್ನದಲ್ಲಿ ತೇರ್ಗಡೆಯಾದ ವಿದ್ಯಾರ್ಥಿಗಳಿಗೆ ಶೇ.100ರಷ್ಟು ಪ್ರೋತ್ಸಾಹಧನವನ್ನು ಮಂಜೂರು ಮಾಡಲು ಆದೇಶ ಹೊರಡಿಸಲಾಗಿದೆ.

ಕಾರ್ಯಾಗಾರ

ಮೈಸೂರು,ನ.23–ಗೋಲ್ಡನ್ ಜ್ಯೂಬಿಲಿ ಸೆಲೆಬ್ರೇಷನ್ ಅಂಗವಾಗಿ ಮೈಸೂರಿನ ಜೆಎಸ್‌ಎಸ್ ಫಾರ್ಮಸಿ ಕಾಲೇಜು ವತಿಯಿಂದ ವ್ಯಕ್ತಿತ್ವ ಅಭಿವೃದ್ಧಿ ಮತ್ತು ಕಾರ್ಯದ ಪರಿಣಾಮಕಾರಿತ್ವ ಕುರಿತು ಕಾರ್ಯಾಗಾರವನ್ನು ಜೆಎಸ್‌ಎಸ್ ಆಸ್ಪತ್ರೆಯ ಶ್ರೀ ರಾಜೇಂದ್ರ ಸಭಾ ಭವನದಲ್ಲಿ ನಡೆಸಲಾಯಿತು.

ಸಂಪನ್ಮೂಲ ವ್ಯಕ್ತಿಯಾಗಿ ಬೆಂಗಳೂರಿನ ಯೂನಿಕ್ ಕನ್ಸಲ್ಟೆಂಟ್ಸ್‌ನ ಮುಖ್ಯಸ್ಥ ವಿ.ಅಶ್ವತ್ಥರಾಮಯ್ಯ ಭಾಗವಹಿಸಿದ್ದರು. ಕಾಲೇಜಿನ 41 ಬೋಧಕೇತರ ಸಿಬ್ಬಂದಿ ವರ್ಗದವರು ಕಾರ್ಯಾಗಾರದ ಪ್ರಯೋಜನ ಪಡೆದುಕೊಂಡರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

24.11.2022 ಗುರುವಾರ, ಮಳೆ ನಕ್ಷತ್ರ: ಅನೂರಾಧ, 20.11.2022 ರಿಂದ 2.12.2022
ಶ್ರೀ ಶುಭಕೃತ ನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಕಾರ್ತಿಕ ಮಾಸ, ಶುಕ್ಲ ಪಕ್ಷ,
ತಿಥಿ: ಪ್ರತಿಪತ್, ನಕ್ಷತ್ರ: ಅನೂರಾಧ, ರಾಹುಕಾಲ: ಮಧ್ಯಾಹ್ನ 1.30ರಿಂದ 3 ಗಂಟೆವರೆಗೆ

- **ನಮೋ ಯೋಗ ಭವನ:** ಉಚಿತ ಯೋಗ ತರಬೇತಿ ಶಿಬಿರ, ಸ್ಥಳ: ನಮೋ ಯೋಗಭವನ, ರಾಮಾನುಜ ರಸ್ತೆ, ಬೆಳಗ್ಗೆ 6ರಿಂದ ಮತ್ತು ಸಂಜೆ 6.30ರಿಂದ.
- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಉಚಿತ ಮಧುಮೇಹ ತಪಾಸಣಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9ರಿಂದ.
- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಉಚಿತ ಮೂಳೆ ಖನಿಜ ಸಾಂದ್ರತಾ ಪರೀಕ್ಷಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9.30ರಿಂದ.
- **ಪ್ರೀತಿ ಕ್ಯಾನ್ಸರ್ ಸೆಂಟರ್:** ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ, ಸ್ಥಳ: ಪ್ರೀತಿ ಕ್ಯಾನ್ಸರ್ ಸೆಂಟರ್, ಲಕ್ಷ್ಮೀಪುರಂ, ಬೆಳಗ್ಗೆ 10 ರಿಂದ.
- **ಜೆಎಸ್‌ಎಸ್ ಮಹಾವಿದ್ಯಾಪೀಠ:** ಬೆಳಗ್ಗೆ 11ಕ್ಕೆ ಜೆಎಸ್‌ಎಸ್ ರಂಗೋತ್ಸವ ಸಮಾರೋಪ ಸಮಾರಂಭ, ಅಧ್ಯಕ್ಷತೆ: ಸಾಹಿತಿ ಡಾ. ಲತಾ ರಾಜಶೇಖರ್, ಸಮಾರೋಪ ಭಾಷಣ: ನಾಟಕಕಾರ ಡಾ. ಸುಜಾತ ಅಕ್ಕಿ, ಬೆಳಗ್ಗೆ 11 ಮತ್ತು ಸಂಜೆ 6.30ಕ್ಕೆ ಸರಸ್ವತಿಪುರಂ ಜೆಎಸ್‌ಎಸ್ ಮಹಿಳಾ ಕಾಲೇಜು ವಿದ್ಯಾರ್ಥಿನಿಯರಿಂದ ಚಾಮಚೆಲುವೆ ನಾಟಕ ಪ್ರದರ್ಶನ, ರಚನೆ: ಡಾ. ಸುಜಾತ ಅಕ್ಕಿ, ನಿರ್ದೇಶನ: ಜೀವನ್‌ಕುಮಾರ್ ಬಿ. ಹೆಗ್ಗೋಡು, ಸಹ ನಿರ್ದೇಶನ: ಶ್ರೀಮತಿ ಮಮತಾ, ಸ್ಥಳ: ನವಜ್ಯೋತಿ ಸಭಾಂಗಣ, ಜೆಎಸ್‌ಎಸ್ ಮಹಿಳಾ ಕಾಲೇಜು, ಸರಸ್ವತಿಪುರಂ, ಬೆಳಗ್ಗೆ 11.30ರಿಂದ.
- **ಶ್ರೀರಾಮಕೃಷ್ಣ ಆಶ್ರಮ:** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಅಧ್ಯಾತ್ಮ ರಾಮಾಯಣ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.
- **ಮೈಸೂರು ಜಿಲ್ಲಾ ಪೊಲೀಸ್:** ವಾರ್ಷಿಕ ಕ್ರೀಡಾಕೂಟದ ಸಮಾರೋಪ ಸಮಾರಂಭ, ಮುಖ್ಯ ಅತಿಥಿಗಳು : ದಕ್ಷಿಣ ವಲಯ ಪೊಲೀಸ್ ಮಹಾ ನಿರೀಕ್ಷಕ ಪ್ರವೀಣ್ ಮಧುಕರ್ ಪವಾರ್, ಸ್ಥಳ: ಡಿಎಆರ್ ಕವಾಯತು ಮೈದಾನ, ಜ್ಯೋತಿನಗರ, ಸಂಜೆ 4ಕ್ಕೆ.
- **ರಂಗರತ್ನಾಕರ:** ರಂಗ ದಿಗ್ಗಜರಿಗೆ ಅಭಿನಂದನೆ, ಪುಸ್ತಕ, ಧ್ವನಿಸುರುಳಿ ಬಿಡುಗಡೆ ಮತ್ತು ರಂಗ ಗೀತೆಗಳ ಗಾಯನ ಕಾರ್ಯಕ್ರಮ, ಸಾನ್ನಿಧ್ಯ: ಮೇಲುಕೋಟೆ ವಂಗೀಪುರ ಮಠದ ಶ್ರೀ ಇಳೈ ಆಳ್ವಾರ್ ಸ್ವಾಮೀಜಿ, ಉದ್ಘಾಟನೆ: ಹಿರಿಯ ಸಾಹಿತಿ ಹುರಗಲವಾಡಿ ಶ್ರೀ ಲಕ್ಷ್ಮೀನರಸಿಂಹಶಾಸ್ತ್ರಿ, ಅಧ್ಯಕ್ಷತೆ: ಹಿರಿಯ ರಂಗಕರ್ಮಿ ಪ್ರೊ. ಎಚ್.ಎಸ್.ಉಮೇಶ, ಸ್ಥಳ: ರಮಾಗೋವಿಂದ ರಂಗಮಂದಿರ, ರಾಮಕೃಷ್ಣನಗರ, ಸಂಜೆ 4ಕ್ಕೆ.
- **ಶ್ರೀರಂಗ ಆಯುರ್ವೇದ ಚಿಕಿತ್ಸಾ ಮಂದಿರ:** ಫಿಸ್ತುಲಾ ಮತ್ತು ಪೈಲ್ಸ್ ಇತ್ಯಾದಿಗಳ ಆರೋಗ್ಯ ತಪಾಸಣಾ ಶಿಬಿರ, ಸ್ಥಳ: ಮಂದಿರದ ಆವರಣ, ದಟ್ಟಗಳ್ಳಿ 3ನೇ ಹಂತ, ಬೆಳಗ್ಗೆ 10ರಿಂದ.
- **ಶ್ರೀ ಚಿನ್ಮಯ ಮಿಷನ್:** ಪಂಡಿತ್ ಕೃಷ್ಣರಾವ್ ಪ್ರಕಾಶ್ ಅವರಿಂದ ಪ್ರಾತಃಸ್ಮರಣಂ ಕುರಿತು ಉಪನ್ಯಾಸ, ಸ್ಥಳ: ಚಿನ್ಮಯ ಮಿಷನ್, ಗೋಕುಲಂ, ಸಂಜೆ 6ಕ್ಕೆ.

ಸಾಧಕರಿಗೆ 'ಹೆಮ್ಮೆಯ ಕನ್ನಡಿಗ', 'ಹೆಮ್ಮೆಯ ಕನ್ನಡತಿ' ಪ್ರಶಸ್ತಿ ಪ್ರದಾನ

ನಾಡು-ನುಡಿ ಕಟ್ಟಿ ಬೆಳೆಸುವ ಹೊಣೆ ಕನ್ನಡಿಗರದ್ದು

ಕಾಂಗ್ರೆಸ್ ಮುಖಂಡ ಎಂ.ಪ್ರದೀಪ್‌ಕುಮಾರ್ ಅಭಿಮತ



ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ಹಮ್ಮಿಕೊಂಡಿದ್ದ ಅಪ್ಪು ನಮನ-ಕರುನಾಡ ಹಬ್ಬ ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರಗಳ ಸಾಧಕರಿಗೆ 'ಹೆಮ್ಮೆಂಯ ಕನ್ನಡಿಗ', 'ಹೆಮ್ಮೆಯ ಕನ್ನಡತಿ' ಪ್ರಶಸ್ತಿಗಳನ್ನು ಮುಖಂಡ ಎಂ.ಪ್ರದೀಪ್‌ಕುಮಾರ್ ಪ್ರದಾನ ಮಾಡಿದರು.

ಮೈಸೂರು, ನ.23(ಪಿಎಂ)- ಕನ್ನಡ ನಾಡು-ನುಡಿ ಕಟ್ಟಿ ಬೆಳೆಸುವ ಹೊಣೆ ಪ್ರತಿಯೊಬ್ಬ ಕನ್ನಡಿಗರ ಮೇಲಿದೆ ಎಂದು ಕಾಂಗ್ರೆಸ್ ಮುಖಂಡ ಎಂ.ಪ್ರದೀಪ್ ಕುಮಾರ್ ಹೇಳಿದರು.

ಮೈಸೂರಿನ ಎಂಜಿ ರಸ್ತೆಯಲ್ಲಿರುವ ಖಾಸಗಿ ಹೋಟೆಲ್ ಸಭಾಂಗಣದಲ್ಲಿ ಶ್ರೀ ದುರ್ಗಾ ಫೌಂಡೇಷನ್ ವತಿಯಿಂದ 67ನೇ ಕನ್ನಡ ರಾಜ್ಯೋತ್ಸವ ಪ್ರಯುಕ್ತ ಮಂಗಳವಾರ ಹಮ್ಮಿಕೊಂಡಿದ್ದ ಅಪ್ಪು ನಮನ ಮತ್ತು ಕರುನಾಡ ಹಬ್ಬ ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರಗಳ ಸಾಧಕರಿಗೆ 'ಹೆಮ್ಮೆಯ ಕನ್ನಡಿಗ' ಮತ್ತು 'ಹೆಮ್ಮೆಯ ಕನ್ನಡತಿ' ಪ್ರಶಸ್ತಿಗಳನ್ನು ಪ್ರದಾನ ಮಾಡಿ ಅವರು ಮಾತನಾಡಿದರು.

ರಾಜಧಾನಿ ಬೆಂಗಳೂರಿನಲ್ಲಿ ಕನ್ನಡ ಸೊರಗುತ್ತಿದ್ದು, ಕನ್ನಡಿಗರು ಅಲ್ಪ ಸಂಖ್ಯಾತರಾಗುತ್ತಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಕನ್ನಡ ನಾಡು-ನುಡಿ ಕಟ್ಟುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ. ನಾಡು, ನುಡಿ, ನೆಲ, ಜಲಕ್ಕೆ ಅಪಮಾನವಾದರೆ ನಾವು ಸಹಿಸುವುದಿಲ್ಲ. ಕನ್ನಡ ಭಾಷೆ, ನಾಡು ಸಮೃದ್ಧಿಗೊಳಿಸುವ ನಿಟ್ಟಿನಲ್ಲಿ ನಾವೆಲ್ಲರೂ ಪಣ ತೊಟ್ಟು ಮುನ್ನಡೆಯಬೇಕು ಎಂದು ತಿಳಿಸಿದರು.

ಕರ್ನಾಟಕ ರಾಜ್ಯ ಮುಕ್ತ ವಿವಿ ಅರ್ಥಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ಮುಖ್ಯಸ್ಥ ಡಾ.ಆರ್. ಹೆಚ್. ಪವಿತ್ರಾ ಮಾತನಾಡಿ, ರಾಜ್ಯದಲ್ಲಿ ಅನೇಕ ಭಾಷೆಗಳನ್ನು ಮಾತನಾಡುವ ಜನರಿದ್ದು, ವಿವಿಧ ರಾಜ್ಯಗಳಿಂದ ಬಂದು ನೆಲೆಸಿರುವ ಅನ್ಯ ಭಾಷಿಗರ ಸಂಖ್ಯೆಯೂ ದೊಡ್ಡದಾಗಿಯೇ ಇದೆ. ಹೀಗೆ ಅನ್ಯ ರಾಜ್ಯ ಗಳಿಂದ ವಲಸೆ ಬಂದವರಲ್ಲಿ ಕನ್ನಡ ಕಲಿತು ಮಾತನಾಡುವವರು ತೀರಾ ಕಡಿಮೆ ಇದ್ದಾರೆ ಎಂದು ಬೇಸರ ವ್ಯಕ್ತಪಡಿಸಿದರು.

ಇದೇ ಸಂದರ್ಭದಲ್ಲಿ ಮಲ್ಲಯ್ಯ ಶಿವಮೂರ್ತಿಯ್ಯ ಕೋವಾರಿ, ಪ್ರಶಾಂತ ಮಲಗಾವಿ, ಮಹಾಂತೇಶ್ ಪೂಜಾರಿ, ಗೋಕುಲ್ ಸಾಬ್ ಬಾವಾಜಿ, ಡಾ.ಗೌತಮಿ ಗೌಡ, ಶರಣಮ್ಮ ಮಾಲಿ ಪಾಟೀಲ್, ಎಸ್.ಎನ್.ಮಂಜುಳಾ ಸೋಮಶೇಖರ್, ಜಿ.ದಿನೇಶ್, ಅಜಯ್ ನಾಯಕ್, ಉಷಾ ರಾಣಿ, ಡಿ.ಇಂದ್ರಮ್ಮ, ಎಂ.ಟಿ.ಯೋಗೇಶ್ ಕುಮಾರ್, ನಂದಕುಮಾರ್, ರೋಶನ್, ಎಂ.ಆರ್.ರೇವಣ್ಣ, ಸಿದ್ದೇಗೌಡ, ಆರ್.ಕೆ. ಬಿಂದುಗೌಡ, ಜನೇಲಾಜಸ್ವಿ, ಡಾ.ಹಲೀಮಾ, ಸೀಮಾ ಕಿರಣ್, ಭೂಮಿಕಾ, ರೂಪ ಗೌಡ, ನಯನಾ, ಎಂ.ಎಸ್.ರಶ್ಮಿ, ವಿದೂಷಿ ಎಸ್.ಎನ್.ಮೇಘನಾ ರಾವ್, ಎಲ್.ಎಸ್. ಉಮಾದೇವಿ, ನಾಗರತ್ನ ತಡಕನಹಳ್ಳಿ, ತೀರ್ಥ ಹೊನ್ನಮ್ಮ, ರವಿನಂದನ್, ಡಾ.ಸುಧಾಕರ್ ಜಿ.ಲಕ್ಕವಳ್ಳಿ, ಕುಶಾಲಾ ಹರದೇಗೌಡ ಅವರಿಗೆ ಪ್ರಶಸ್ತಿಗಳನ್ನು ಪ್ರದಾನ ಮಾಡಲಾಯಿತು. ಶ್ರೀ ದುರ್ಗಾ ಫೌಂಡೇಷನ್ ಟ್ರಸ್ಟ್ ಅಧ್ಯಕ್ಷೆ ರೇಖಾ ಶ್ರೀನಿವಾಸ್, ಶ್ರೀ ಕಲ್ಪವೃಕ್ಷ ಸೌಹಾರ್ದ ಸಹಕಾರಿ ನಿಯಮಿತದ ಅಧ್ಯಕ್ಷ ಬಸವರಾಜ ಪೂಜಾರಿ, ರೂಪದರ್ಶಿ ಶಿಲ್ಪಾ ಸುಧಾಕರ್, ಕರ್ನಾಟಕ ಪ್ರದೇಶ ಯುವ ಕಾಂಗ್ರೆಸ್ ಸಮಿತಿ ಉಪಾಧ್ಯಕ್ಷೆ ಆರ್.ಕೆ. ದಿವ್ಯಾ, ಮುಖಂಡರಾದ ಸಂತೋಷ್ ಕಿರಾಲು, ವಿದ್ಯಾ, ನಾಗಶ್ರೀ, ಮಹೇಶ್ ಇದ್ದರು.

ವಿಶ್ವಕಪ್ 2022: ಬಲಿಷ್ಠ ಜರ್ಮನಿಗೆ ಸೋಲುಣಿಸಿದ ಜಪಾನ್

ಕತಾರ್: ಫಿಫಾ ವಿಶ್ವಕಪ್ 2022ರ ಲೀಗ್ ಹಂತದಲ್ಲೇ ಬಲಿಷ್ಠ ತಂಡಗಳು ಮುಗ್ಗರಿಸುತ್ತಿವೆ. ಸೌದಿ ಅರೇಬಿಯಾ ವಿರುದ್ಧ ಅರ್ಜೆಂಟೀನಾ ತಂಡ ಆಘಾತ ಅನುಭವಿಸಿದ ಬೆನ್ನಲ್ಲೇ ಮಾಜಿ ಚಾಂಪಿಯನ್ ಜರ್ಮನಿಗೆ ಇಂದು ಏಷ್ಯಾದ ಪ್ರಮುಖ ತಂಡ ಜಪಾನ್ ಸೋಲುಣಿಸಿದೆ.

ಸೌದಿ ನಂತರ ಜಪಾನ್ ಕೂಡಾ ದೈತ್ಯ ಸಂಹಾರಿ ಎನಿಸಿಕೊಂಡಿದೆ. ಜಪಾನ್ ದೇಶದಲ್ಲಿ ಇಲ್ಲಿ ಸಂಭ್ರಮ ಕಳೆಗಟ್ಟಿದೆ. ಜರ್ಮನಿಯನ್ನು 1-2 ಅಂತರದಿಂದ ಸೋಲಿಸುವ ಮೂಲಕ ಜಪಾನ್ ಅರ್ಹ 3 ಅಂಕಗಳನ್ನು ಗಳಿಸಿದೆ. ಪಂದ್ಯದ ಎರಡು ಗೋಲುಗಳನ್ನು ದ್ವಿತೀಯಾರ್ಧದಲ್ಲೇ ಜಪಾನ್ ಗಳಿಸಿದ್ದು ವಿಶೇಷ. 33ನೇ ನಿಮಿಷದಲ್ಲಿ ಪೆನಾಲ್ಟಿ ಮೂಲಕ ಗುಯೋಗಾನ್ ಹೊಡೆದ ಗೋಲು ಮೂಲಕ ಪಡೆದ ಆರಂಭಿಕ ಮುನ್ನಡೆ ಪಡೆದ ಜರ್ಮನಿ ನಂತರ ಡಲ್ ಹೊಡೆದಿದ್ದು ಎದ್ದು ಕಾಣುತ್ತಿತ್ತು. ಜಪಾನ್ ಪೈಕಿ ಗೋಲು ಗಳಿಸಿದವರಿಬ್ಬರೂ ಬದಲಿ ಆಟಗಾರರಾಗಿ ದ್ವಿತೀಯಾರ್ಧದಲ್ಲಿ ಕಣಕ್ಕಿಳಿದವರು ಎಂಬುದು ವಿಶೇಷ.

ಮಿತೊಮಾ, ಮಿನಾಮಿನೊ ಹಾಗೂ ದೊಯಾನ್ (75ನೇ ನಿಮಿಷ) ಮೊದಲ ಗೋಲಿಗೆ ಕಾರಣರಾದರೆ, 2ನೇ ಗೋಲು ಗಳಿಸಿ ಮರೆಯಲಾದಂಥ ಗೆಲುವು ತಂದಿತ್ತ ಅಸಾನೋ (83ನೇ ನಿಮಿಷ) ಬದಲಿ ಆಟಗಾರನಾಗಿ ಮೈದಾನಕ್ಕಿಳಿದಿದ್ದು ಗಮನಾರ್ಹ.

ಪಿಎಸ್‌ಐ ನೇಮಕಾತಿ ಅಕ್ರಮ ಪ್ರಕರಣ

ಅಮೃತ್ ಪೌಲ್ ಜಾಮೀನು ಅರ್ಜಿ ವಜಾ

ಬೆಂಗಳೂರು: 545 ಪಿಎಸ್‌ಐ ನೇಮಕಾತಿ ಅಕ್ರಮ ಪ್ರಕರಣದ ಆರೋಪಿಯಾಗಿರುವ ಎಡಿಜಿಪಿ ಆಗಿದ್ದ ಅಮೃತ್ ಪೌಲ್ ಜಾಮೀನು ಅರ್ಜಿ ಮತ್ತೆ ವಜಾ ಗೊಂಡಿದ್ದು ಅಮೃತ್ ಪೌಲ್‌ಗೆ ಜೈಲೇ ಗತಿಯಾಗಿದೆ.



ಬೆಂಗಳೂರಿನ 24ನೇ ಸಿಸಿಹೆಚ್ ನ್ಯಾಯಾಲಯದ ನ್ಯಾಯಮೂರ್ತಿ ಕೆ. ಲಕ್ಷ್ಮಿ ನಾರಾಯಣ ಭಟ್ ಅವರು ಜಾಮೀನು ತಿರಸ್ಕರಿಸಿ ಆದೇಶ ಹೊರಡಿಸಿದರು. ಪಿಎಸ್‌ಐ ನೇಮಕಾತಿಯ ಉಸ್ತುವಾರಿ ವಹಿಸಿದ್ದ ಅಮೃತ್ ಪೌಲ್ ಬಳಿ ಸೇಫ್ ಲಾಕರ್‌ನ ಕೀ ಇತ್ತು. ಇದನ್ನು ಕಿರಿಯ ಅಧಿಕಾರಿಗಳಿಗೆ ಕೊಟ್ಟು ದುರುಪಯೋಗ ಮಾಡಿಕೊಂಡಿದ್ದಾರೆ ಎಂಬ ಆರೋಪವಿದೆ.

ಇದೇ ಪ್ರಕರಣಕ್ಕೆ ಸಂಬಂಧಿಸಿದಂತೆ ಅಮೃತ್ ಪೌಲ್ ಈ ಹಿಂದೆ ಸಲ್ಲಿಸಿದ್ದ ಜಾಮೀನು ಅರ್ಜಿಯನ್ನು ಬೆಂಗಳೂರಿನ 1ನೇ ಎಸಿಎಂಎಂ ನ್ಯಾಯಾಲಯ ವಜಾಗೊಳಿಸಿತ್ತು. ಇದೀಗ ಬೆಂಗಳೂರಿನ 24ನೇ ಸಿಸಿಹೆಚ್ ಕೋರ್ಟ್ ಸಹ ಜಾಮೀನು ಅರ್ಜಿಯನ್ನು ತಿರಸ್ಕರಿಸಿದೆ.

ಎಡಿಜಿಪಿ ಅಮೃತ್ ಪೌಲ್ ಹಾಗೂ ಆರೋಪಿ ಶಾಂತಕುಮಾರ್ ನಡುವೆ 1.36 ಕೋಟಿ ರೂಪಾಯಿ ಹಣ ವರ್ಗಾವಣೆ ಆಗಿದೆ. ಇನ್ನು ಮೊಬೈಲ್ ದತ್ತಾಂಶವನ್ನು ಅಳಿಸಿ ಹಾಕಲಾಗಿದೆ ಎಂದು ಸಿಐಡಿ ಆರೋಪಿಸಿದೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಸತತ ಮೂರು ಬಾರಿ ವಿಚಾರಣೆ ಎದುರಿಸಿದ್ದ ಅಮೃತ್ ಪೌಲ್‌ರನ್ನು ಕಳೆದ ಜುಲೈ 4ರಂದು ಸಿಐಡಿ ಅಧಿಕೃತವಾಗಿ ಬಂಧಿಸಿತ್ತು.

ಸದ್ಯಕ್ಕೆ ಡಿಕೆ ಶಿವಕುಮಾರ್ ಬಂಧಿಸಲ್ಲ

ನವದೆಹಲಿ: ಅಕ್ರಮ ಹಣ ವರ್ಗಾವಣೆ ಪ್ರಕರಣದಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ ಶಿವಕುಮಾರ್ ಅವರನ್ನು ಸದ್ಯಕ್ಕೆ ಬಂಧಿಸುವುದಿಲ್ಲ ಎಂದು ಜಾರಿ ನಿರ್ದೇಶನಾಲಯದ (ಇಡಿ) ಅಧಿಕಾರಿಗಳು ದೆಹಲಿ ಹೈಕೋರ್ಟ್‌ಗೆ ತಿಳಿಸಿದ್ದಾರೆ. ಡಿ.ಕೆ ಶಿವಕುಮಾರ್ ಸಲ್ಲಿಸಿದ್ದ ಅರ್ಜಿಯೊಂದರ ವಿಚಾರಣೆ ವೇಳೆ ಅಧಿಕಾರಿಗಳು ಈ ಹೇಳಿಕೆ ದಾಖಲಿಸಿದ್ದಾರೆ.



ಜಾರಿ ನಿರ್ದೇಶನಾಲಯದಲ್ಲಿ ತಮ್ಮ ವಿರುದ್ಧ ದಾಖಲಾದ ಎರಡನೇ ಇಸಿಆರ್ (ದೂರು) ರದ್ದುಗೊಳಿಸುವಂತೆ, ಬಂಧನದಿಂದ ರಕ್ಷಣೆ ನೀಡುವಂತೆ ಕೋರಿ ಡಿ.ಕೆ ಶಿವಕುಮಾರ್ ದೆಹಲಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ಡಿ.ಕೆ ಶಿವಕುಮಾರ್ ಪರ ಹಿರಿಯ ವಕೀಲ ಕಪಿಲ್ ಸಿಬಲ್ ವಾದ ಮಂಡಿಸಿದರು. ಅಕ್ರಮ ಹಣ ವರ್ಗಾವಣೆ ಆರೋಪದಲ್ಲಿ ದಾಖಲಾದ ಮೊದಲ ಕೇಸ್‌ನಲ್ಲಿ ಚಾರ್ಜ್‌ಶೀಟ್ ಸಲ್ಲಿಕೆಯಾಗಿದೆ. ಎರಡನೇ ಕೇಸ್ ದಾಖಲಿಸಿ ವಿಚಾರಣೆ ನಡೆಸುವ ಅಗತ್ಯವಿರಲಿಲ್ಲ. ಇದನ್ನು ಈಗಾಗಲೇ ಸಿಬಿಐ ತನಿಖೆ ನಡೆಸುತ್ತಿದೆ. ಈ ಮಧ್ಯೆ ಇಡಿ ಎರಡನೇ ಕೇಸ್ ದಾಖಲಿಸಿ ವಿಚಾರಣೆಗೆ ಕರೆದಿದೆ. ಇಡಿ ದಾಖಲಿಸಿರುವ ಇಸಿಐಆರ್ ರದ್ದು ಮಾಡಬೇಕು, ಬಂಧನದಿಂದ ರಕ್ಷಣೆ ನೀಡಬೇಕು ಎಂದು ಮನವಿ ಮಾಡಿದರು.

ಇದಕ್ಕೆ ಇಡಿ ಪರ ವಾದ ಮಂಡಿಸಿದ ವಕೀಲರು, ಸದ್ಯಕ್ಕೆ ಡಿ.ಕೆ.ಶಿವಕುಮಾರ್ ವಿರುದ್ಧ ಯಾವುದೇ ಕ್ರಮ ತೆಗೆದುಕೊಳ್ಳುವುದಿಲ್ಲ. ಎರಡನೇ ಪ್ರಕರಣದಲ್ಲಿ ಸಿಬಿಐ ಶಿಫಾರಸು ಆಧರಿಸಿ ದಾಖಲೆಗಳ ಪರಿಶೀಲನೆ ನಡೆದಿದೆ. ಅವರನ್ನು ಬಂಧಿಸುವ ಪ್ರಯತ್ನ ಇಡಿ ಮಾಡಿಲ್ಲ ಎಂದು ತಿಳಿಸಿದರು. ವಾದ ಪ್ರತಿವಾದ ಆಲಿಸಿದ ಕೋರ್ಟ್ ಡಿಸೆಂಬರ್ 2ಕ್ಕೆ ವಿಚಾರಣೆ ಮುಂದೂಡಿದೆ.

ಮೈಸೂರಲ್ಲಿ ತ್ರಿಬಲ್ ರೈಡಿಂಗ್‌ಗೆ ಬ್ರೇಕ್; 3 ದಿನದಲ್ಲಿ 145 ವಾಹನ ವಶ

ಈವರೆಗಿನ ಎಲ್ಲಾ ಕೇಸ್‌ಗಳ ದಂಡ ಪಾವತಿಸಿದರಷ್ಟೇ ವಾಹನ ಬಿಡುಗಡೆ, ಮರುಕಳಿಸಿದರೆ ಕ್ರಿಮಿನಲ್ ಕೇಸ್; ಪೊಲೀಸರ ಖಡಕ್ ಎಚ್ಚರಿಕೆ

ಮೈಸೂರು, ನ.23(ಎಸ್‌ಬಿಡಿ)- ಮೈಸೂರು ನಗರದಲ್ಲಿ ಮೂರೇ ದಿನದಲ್ಲಿ ತ್ರಿಬಲ್ ರೈಡಿಂಗ್ ಪ್ರಕರಣದಡಿ 145 ವಾಹನಗಳನ್ನು ವಶಪಡಿಸಿಕೊಳ್ಳಲಾಗಿದೆ.

ನಗರದಲ್ಲಿ ತ್ರಿಬಲ್ ರೈಡಿಂಗ್ ಹಾವಳಿ ಹೆಚ್ಚಾಗಿದ್ದ ಹಿನ್ನೆಲೆಯಲ್ಲಿ ಕಳೆದ ಮೂರು ದಿನಗಳಿಂದ ಸಂಚಾರ ಪೊಲೀಸರು ವಿಶೇಷ ಕಾರ್ಯಾಚರಣೆ ನಡೆಸಿದ್ದು, ದೇವರಾಜ, ಕೃಷ್ಣರಾಜ, ನರಸಿಂಹರಾಜ, ವಿವಿ ಪುರಂ, ಸಿದ್ಧಾರ್ಥ ಹಾಗೂ ಕುವೆಂಪುನಗರ ಸಂಚಾರ ಠಾಣೆ ವ್ಯಾಪ್ತಿಯಲ್ಲಿ ಒಟ್ಟು 145 ವಾಹನಗಳನ್ನು ವಶಪಡಿಸಿಕೊಂಡಿದ್ದಾರೆ.

ಕೆಲ ಕಾಲೇಜು ವಿದ್ಯಾರ್ಥಿಗಳು, ಕೆಲಸವಿಲ್ಲದೆ ಅಲೆದಾಡುವ ಆಸಾಮಿಗಳು, ಹುಚ್ಚು ಸ್ಟಂಟ್ ಮಾಡುವ ಯುವಕರು ತ್ರಿಬಲ್ ರೈಡಿಂಗ್ ನಡೆಸಿ ಅಮಾಯಕರಿಗೆ ತೊಂದರೆ ಮಾಡುತ್ತಿದ್ದರು. ತ್ರಿಬಲ್ ರೈಡಿಂಗ್ ವೇಳೆ ವಾಹನ ನಿಯಂತ್ರಿಸಲಾಗದೆ ಅಡ್ಡಾದಿಡ್ಡಿ ಓಡಿಸುವುದರಿಂದ ಅಕ್ಕಪಕ್ಕದಲ್ಲಿ ಸಂಚರಿಸುವ ವಾಹನ ಸವಾರರು ಆತಂಕಗೊಳ್ಳುತ್ತಿದ್ದರು. ಡಿಕ್ಕಿ ಹೊಡೆಯಬಹುದೆಂಬ ಭಯದಲ್ಲೇ ಕೆಲವರು ಆಯತಪ್ಪಿ ಕೆಳಗೆ ಬಿದ್ದು ಗಾಯಗೊಂಡಿರುವ ಘಟನೆಗಳೂ ನಡೆದಿದ್ದವು. ಈ ಬಗ್ಗೆ ಸಾರ್ವಜನಿಕರಿಂದ ವ್ಯಾಪಕ ದೂರು ಕೇಳಿಬರುತ್ತಿದ್ದ ಕಾರಣ ಮೂರು ದಿನಗಳಿಂದ ತ್ರಿಬಲ್ ರೈಡಿಂಗ್‌ಗೆ ಬ್ರೇಕ್ ಹಾಕಲೆಂದೇ ವಿಶೇಷ ಕಾರ್ಯಾಚರಣೆ ಆರಂಭಿಸಲಾಗಿದೆ.

ಶೇ.100ರಷ್ಟು ದಂಡ ಪಾವತಿಸಬೇಕು: ಈ ಸಂಬಂಧ ಅಪರಾಧ ಮತ್ತು ಸಂಚಾರ ವಿಭಾಗದ ಡಿಸಿಪಿ ಡಾ.ಗೀತ ಪ್ರಸನ್ನ 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯಿಸಿ, 3 ದಿನಗಳಿಂದ ವಶಪಡಿಸಿಕೊಳ್ಳಲಾಗಿರುವ 145 ದ್ವಿಚಕ್ರ ವಾಹನಗಳನ್ನು ಸಿದ್ಧಾರ್ಥ ಸಂಚಾರ ಠಾಣೆ ಆವರಣದಲ್ಲಿ ನಿಲ್ಲಿಸಲಾಗಿದೆ. ವಾಹನಕ್ಕೆ ಸಂಬಂಧಿಸಿದ ದಾಖಲೆ ಸಹಿತ ಗುರುವಾರ ಸಂಬಂಧಪಟ್ಟ ಸಂಚಾರ ಪೊಲೀಸ್ ಠಾಣೆಗೆ ಮಾಲೀಕರು ಭೇಟಿ ನೀಡಬೇಕೆಂದು ಸೂಚಿಸಲಾಗಿದೆ. ತ್ರಿಬಲ್ ರೈಡಿಂಗ್ ಸೇರಿದಂತೆ ಆ ವಾಹನದ ಮೇಲಿನ ಹಿಂದಿನ ಎಲ್ಲಾ ದಂಡವನ್ನು ಶೇ.100ರಷ್ಟು ಪಾವತಿಸಿದರೆ ಮಾತ್ರ ವಾಹನ ಬಿಡುಗಡೆ ಮಾಡಲಾಗುವುದು ಎಂದು ತಿಳಿಸಿದ್ದಾರೆ.

ಮರುಕಳಿಸಿದರೆ ಕ್ರಿಮಿನಲ್ ಕೇಸ್: ತ್ರಿಬಲ್ ರೈಡಿಂಗ್, ಹೆಲ್ಮೆಟ್ ರಹಿತ ಚಾಲನೆ, ಸಿಗ್ನಲ್ ಜಂಪ್, ಅತೀ ವೇಗದ ಚಾಲನೆ ಹೀಗೆ ವಾಹನದ ಮೇಲಿನ ಎಲ್ಲಾ ರೀತಿಯ ನಿಯಮ ಉಲ್ಲಂಘನೆಯ ಶೇ.100ರಷ್ಟು ದಂಡ ಪಾವತಿಸಬೇಕು. ಸಂಬಂಧಪಟ್ಟ ಠಾಣೆಯಲ್ಲಿ ದಂಡ ಪಾವತಿಸಿರುವುದಕ್ಕೆ ನೀಡಲಾಗುವ ದಾಖಲೆ ಹಾಗೂ ವಾಹನದ ದಾಖಲೆಗಳನ್ನು ಸಿದ್ಧಾರ್ಥ ಸಂಚಾರ ಠಾಣೆಯಲ್ಲಿ ಪ್ರಸ್ತುತಪಡಿಸಿ, ತಮ್ಮ ವಾಹನವನ್ನು ಬಿಡಿಸಿಕೊಳ್ಳಬೇಕು. ಈ ಎಲ್ಲಾ ವಾಹನಗಳ ನೋಂದಣಿ ಸಂಖ್ಯೆಯನ್ನು ರಿಜಿಸ್ಟರ್‌ನಲ್ಲಿ ನಮೂದಿಸಿಕೊಳ್ಳಲಾಗಿದ್ದು ಮತ್ತೆ ತ್ರಿಬಲ್ ರೈಡಿಂಗ್ ನಡೆಸಿದರೆ ಯಾವ ಕಾರಣಕ್ಕೂ ಆ ವಾಹನವನ್ನು ಬಿಡುಗಡೆ ಮಾಡುವುದಿಲ್ಲ. ಅಲ್ಲದೆ ಮಾಲೀಕ ಹಾಗೂ ಓಡಿಸುತ್ತಿದ್ದವರ ವಿರುದ್ಧ ಕ್ರಿಮಿನಲ್ ಕೇಸ್ ದಾಖಲಿಸಲಾಗುವುದು. ತ್ರಿಬಲ್ ರೈಡಿಂಗ್ ವಿರುದ್ಧದ ಕಾರ್ಯಾಚರಣೆಯನ್ನು ನಿರಂತರವಾಗಿ ಮುಂದುವರೆಸಲಾಗುವುದು ಎಂದು ಎಚ್ಚರಿಕೆ ನೀಡಿದ್ದಾರೆ.



ಅಧಿಕಾರಿಗಳಿಗೆ ಮಾರ್ಗದರ್ಶನ: ವಾಹನಗಳನ್ನು ನಿಲ್ಲಿಸಲಾಗಿರುವ ಸಿದ್ಧಾರ್ಥ ಸಂಚಾರ ಪೊಲೀಸ್ ಠಾಣೆ ಆವರಣದಲ್ಲಿ ಬುಧವಾರ ಡಿಸಿಪಿ ಗೀತ ಪ್ರಸನ್ನ, ಸಂಚಾರ ವಿಭಾಗದ ಎಸಿಪಿ ಪರಶುರಾಮಪ್ಪನವರು ಎಲ್ಲಾ ಸಂಚಾರ ಠಾಣೆ ಇನ್‌ಸ್ಪೆಕ್ಟರ್‌ಗಳು ಹಾಗೂ ಸಬ್‌ಇನ್‌ಸ್ಪೆಕ್ಟರ್‌ಗಳಿಗೆ ಕಾರ್ಯಾಚರಣೆ ಮುಂದುವರೆಸುವುದು ಹಾಗೂ ಶೇ.100ರಷ್ಟು ದಂಡ ಪಾವತಿಸಿಕೊಂಡ ನಂತರವೇ ವಾಹನ ಬಿಡುಗಡೆ ಮಾಡುವ ಸಂಬಂಧ ಮಾರ್ಗದರ್ಶನ ನೀಡಿದರು.

ಮೈಸೂರು ರಾಜವಂಶಸ್ಥರ ಭೂಮಿಗೆ ಅತಿಕ್ರಮ ಪ್ರವೇಶ; ಅನಧಿಕೃತ ಕಟ್ಟಡ ನಿರ್ಮಾಣ ಸಂಬಂಧ ಪ್ರಕರಣ ದಾಖಲು

ಮೈಸೂರು, ನ.23-ಮೈಸೂರು ರಾಜವಂಶಸ್ಥರ ಭೂಮಿಗೆ ಅತಿಕ್ರಮ ಪ್ರವೇಶ ಮಾಡಿ ಅನಧಿಕೃತವಾಗಿ ಕಟ್ಟಡ ನಿರ್ಮಿಸಲಾಗುತ್ತಿದೆ ಎಂದು ರಾಜವಂಶಸ್ಥೆ ಶ್ರೀಮತಿ ಪ್ರಮೋದಾದೇವಿ ಒಡೆಯರ್ ಅವರ ಕಮ್ಯುನಿಕೇಷನ್ ಅಂಡ್ ಔಟ್‌ರಿಚ್ ಅಧಿಕಾರಿ ಶಿವೇಂದ್ರ ಅರಸ್, ಆಲನಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದಾರೆ.

ಆಲನಹಳ್ಳಿ ಗ್ರಾಮದ ಸರ್ವೆ ನಂ.41ರಲ್ಲಿನ 178 ಎಕರೆ 38 ಗುಂಟೆ ಪೈಕಿ 125 ಎಕರೆ ಭೂಮಿ ಅರಮನೆ ಕಾವಲ್ ಸ್ವಾಧೀನದಲ್ಲಿದೆ ಎಂದು ನ್ಯಾಯಾಲಯದಲ್ಲಿ ಉಲ್ಲೇಖಿಸಿದ್ದು, ಇದು ಖಾಸಗಿ ಆಸ್ತಿ ಎಂದು ಆದೇಶದಲ್ಲಿ ತಿಳಿಸಲಾಗಿದೆ. ಈ ಹಿನ್ನೆಲೆಯಲ್ಲಿ ಶ್ರೀಮತಿ ಪ್ರಮೋದಾದೇವಿ ಒಡೆಯರ್ ಅವರು ಆರ್‌ಟಿಸಿಯಲ್ಲಿ ಅರಮನೆ ಕಾವಲ್ ಎಂದು ಉಲ್ಲೇಖಿಸಿರುವುದನ್ನು ತೆಗೆದು ಹಾಕಿ, ಅದು ಖಾಸಗಿ ಸ್ವತ್ತಾಗಿರುವುದರಿಂದ ತಮ್ಮ ಹೆಸರನ್ನು ನಮೂದಿಸಲು ತಹಶೀಲ್ದಾರರಿಗೆ ಅರ್ಜಿ ಸಲ್ಲಿಸಿದ್ದಾರೆ ಎಂದು ದೂರಿನಲ್ಲಿ ವಿವರಿಸಲಾಗಿದೆ.

ಈ ಮಧ್ಯೆ ಎನ್.ಸೂರ್ಯನಾರಾಯಣ್ ಮತ್ತು ಅವರ ಸಹಚರರು ಮೇಲ್ಕಂಡ ಸ್ವತ್ತಿನ ಪೈಕಿ 55 ಗುಂಟೆ ಜಾಗದಲ್ಲಿ ಅತಿಕ್ರಮ ಪ್ರವೇಶ ಮಾಡಿ ಅನಧಿಕೃತವಾಗಿ ಕಟ್ಟಡ ನಿರ್ಮಿಸುತ್ತಿದ್ದಾರೆ. ಈ ಬಗ್ಗೆ ತಾವು ಹಾಗೂ ಸೆಕ್ಯೂರಿಟಿ ಸೂಪರ್‌ವೈಸರ್ ದೇವಯ್ಯ ಮತ್ತು ವಕೀಲರು ಸ್ಥಳಕ್ಕೆ ಹೋಗಿ ಪ್ರಶ್ನಿಸಿದಾಗ ಸೂರ್ಯನಾರಾಯಣ್ ಮತ್ತಿತರರು ತಮಗೆ ಬೆದರಿಕೆ ಹಾಕಿದ್ದಾರೆ ಎಂದು ನೀಡಿರುವ ದೂರನ್ನು ಭಾರತೀಯ ದಂಡ ಸಂಹಿತೆ 441, 506, 34ರಡಿ ದಾಖಲಿಸಿಕೊಂಡಿರುವ ಆಲನಹಳ್ಳಿ ಠಾಣೆ ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

ಯುಕೆಯ ಆನ್‌ಲೈನ್ ಕಂಪನಿಯಲ್ಲಿ ಹಣ ಹೂಡಿದರೆ ಅಧಿಕ ಲಾಭದ ಆಮಿಷ ತೋರಿ ಅರ್ಚಕರಿಗೆ 5.42 ಲಕ್ಷ ವಂಚನೆ

ಮೈಸೂರು, ನ.23-ಯುನೈಟೆಡ್ ಕಿಂಗ್‌ಡಮ್‌ನಲ್ಲಿರುವ ಆನ್‌ಲೈನ್ ಕಂಪನಿಯಲ್ಲಿ ಹಣ ಹೂಡಿಕೆ ಮಾಡಿದರೆ ಹೆಚ್ಚು ಲಾಭ ಬರುತ್ತದೆ ಎಂದು ನಂಬಿಸಿ ಅರ್ಚಕರೊಬ್ಬರಿಗೆ ಪೋಸ್ಟ್ ಮಾಸ್ಟರ್ ಹಾಗೂ ಅವರ ಸ್ನೇಹಿತರು 5.42 ಲಕ್ಷ ರೂ. ವಂಚಿಸಿರುವ ಬಗ್ಗೆ ಪ್ರಕರಣ ದಾಖಲಾಗಿದೆ.

ತಿ.ನರಸೀಪುರದ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದ ಬಳಿ ಇರುವ ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನದ ಅರ್ಚಕ ಸ್ವಾಮಿ(44) ವಂಚನೆಗೊಳಗಾದವರಾಗಿದ್ದು, ಹ್ಯಾಕನೂರು ಗ್ರಾಮದ ಪೋಸ್ಟ್ ಆಫೀಸ್‌ನಲ್ಲಿ ಪೋಸ್ಟ್ ಮಾಸ್ಟರ್ ಆಗಿರುವ ಪ್ರಕಾಶ್, ನಗರ್ಲೆ ಗ್ರಾಮದಲ್ಲಿ ಪೋಸ್ಟ್ ಮಾಸ್ಟರ್ ಆಗಿರುವ ಸಂಗಪ್ಪ, ಪ್ರಕಾಶ್, ರಾಮಕೃಷ್ಣ, ಶ್ರೀಕಂಠ, ರಾಜಸಿಂಗ್ ಎಂಬುವರು ಆರೋಪಕ್ಕೆ ಗುರಿಯಾಗಿರುವವರು.

ವಿವರ: ಅರ್ಚಕ ಸ್ವಾಮಿ ಅವರಿಗೆ ಪರಿಚಯವಾದ ಪೋಸ್ಟ್ ಮಾಸ್ಟರ್ ಪ್ರಕಾಶ್, ಜುಲೈ 10ರಂದು ಭೇಟಿಯಾಗಿ ಯುನೈಟೆಡ್ ಕಿಂಗ್‌ಡಮ್‌ನಲ್ಲಿರುವ Defiverse online ಕಂಪನಿಯಲ್ಲಿ 1 ಲಕ್ಷ ಹಣ ಹೂಡಿಕೆ ಮಾಡಿದರೆ 525 ದಿನದಲ್ಲಿ 5.25 ಲಕ್ಷ ಬರುತ್ತದೆ. ಅಲ್ಲದೇ ಬೇರೆ ಗ್ರಾಹಕರನ್ನು ಪರಿಚಯಿಸಿದರೆ ಕಮಿಷನ್ ಸಿಗುತ್ತದೆ ಎಂದು ನಂಬಿಸಿದ್ದಾರೆ.

ಇದನ್ನು ನಂಬಿದ ಅರ್ಚಕ ಸ್ವಾಮಿ, 5.42 ಲಕ್ಷ ರೂ.ಗಳನ್ನು ಪೋಸ್ಟ್ ಮಾಸ್ಟರ್ ಪ್ರಕಾಶ್‌ಗೆ ನೀಡಿದ್ದಾರೆ. ಅಲ್ಲದೇ ತನಗೆ ಪರಿಚಯವಿರುವ ಕೆಂಡಗಣ್ಣಸ್ವಾಮಿ, ನಾಗರಾಜು, ಪ್ರೇಮ್‌ಕುಮಾರ್, ಅಪ್ಪುಸ್ವಾಮಿ, ಪ್ರೀತಂ, ಇನಾಯತ್ ಪಾಷಾ ಎಂಬುವರನ್ನು ಪ್ರಕಾಶ್‌ಗೆ ಪರಿಚಯಿಸಿ ಹಣ ಹೂಡಿಕೆ ಮಾಡಿಸಿದ್ದಾರೆ.

ಕ್ರೈಂ ಬಾಕ್ಸ್

ನಂತರ ಈ ಎಲ್ಲಾ ಆರೋಪಿಗಳು ಅ.16ರಂದು ಮೈಸೂರಿನ ಖಾಸಗಿ ಹೋಟೆಲ್‌ವೊಂದರಲ್ಲಿ ಸಭೆ ಕರೆದು ಕಂಪನಿಯಲ್ಲಿ ಹಣ ಹೂಡಿಕೆ ಮಾಡಲು ಮತ್ತಷ್ಟು ಜನರನ್ನು ಕರೆತರುವಂತೆ ತಿಳಿಸಿ ಹೆಚ್ಚಿನ ಕಮಿಷನ್ ಬರುತ್ತದೆ ಎಂದು ಆಮಿಷವೊಡ್ಡಿದ್ದಾರೆ.

ಅರ್ಚಕ ಸ್ವಾಮಿ ಅವರಿಗೆ ನಾಲ್ಕು ತಿಂಗಳು ಮಾತ್ರ ಕಮಿಷನ್ ಬಂದಿದ್ದು, ನಂತರ ಯಾವುದೇ ಹಣ ಬಂದಿಲ್ಲ. ಈ ವ್ಯಕ್ತಿಗಳು ತನಗೆ 5.42 ಲಕ್ಷ ರೂ. ವಂಚಿಸಿದ್ದು, ತಾನು ಪರಿಚಯಿಸಿದ್ದ ವ್ಯಕ್ತಿಗಳಿಗೆ ಎಷ್ಟು ಹಣ ವಂಚಿಸಿದ್ದಾರೆ ಎಂದು ಗೊತ್ತಿಲ್ಲ ಎಂದು ಅರ್ಚಕ ಸ್ವಾಮಿ ನೀಡಿದ ದೂರನ್ನು ದಾಖಲಿಸಿಕೊಂಡಿರುವ ಮೈಸೂರು ಜಿಲ್ಲಾ ಸೆನ್ ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ಮನೆ ಭೋಗ್ಯಕ್ಕೆ ನೀಡುವುದಾಗಿ 3.20 ಲಕ್ಷ ಪಡೆದು ವಂಚನೆ ಸಂಬಂಧ ಕೇಸ್ ದಾಖಲು

ಮೈಸೂರು, ನ.23-ಮನೆ ಭೋಗ್ಯಕ್ಕೆ ನೀಡುವುದಾಗಿ 3.20 ಲಕ್ಷ ರೂ. ಪಡೆದು ವಂಚಿಸಿರುವುದಲ್ಲದೆ, ಜಾತಿ ನಿಂದನೆ ಮಾಡಲಾಗಿದೆ ಎಂದು ಹೆಬ್ಬಾಳ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವಿವರ: ಮೈಸೂರಿನ ಹೆಬ್ಬಾಳದ ನಿವಾಸಿ ಜಿ.ಜಯಲಕ್ಷ್ಮಿ ಸಿಂಗ್ ಅವರು ಸಂಕ್ರಾಂತಿ ಸರ್ಕಲ್‌ನಲ್ಲಿರುವ ತಮ್ಮ ಮನೆ ಭೋಗ್ಯಕ್ಕಿದೆ ಎಂದು ಓಎಲ್‌ಎಕ್ಸ್‌ನಲ್ಲಿ ಜಾಹೀರಾತು ನೀಡಿದ್ದರು. ಇದನ್ನು ಗಮನಿಸಿದ ಬೃಂದಾವನ ಲೇಔಟ್ ನಿವಾಸಿಯಾಗಿರುವ ಇಂಜಿನಿಯರ್ ಎಸ್.ಸಂದೇಶ್ ಅವರು ಜಿ.ಜಯಲಕ್ಷ್ಮಿ ಸಿಂಗ್ ಅವರನ್ನು ಭೇಟಿ ಮಾಡಿ ಜುಲೈ 18 ರಿಂದ 26ರವರೆಗೆ ಹಂತ ಹಂತವಾಗಿ 3.20 ಲಕ್ಷ ರೂ.ಗಳನ್ನು ನೀಡಿದ್ದಾರೆ. ಹಣ ಪಡೆದ ನಂತರ 15 ದಿನದಲ್ಲಿ ಮನೆಯನ್ನು ಭೋಗ್ಯಕ್ಕೆ ನೀಡುವುದಾಗಿ ಜಯಲಕ್ಷ್ಮಿ ಸಿಂಗ್ ಹೇಳಿದ್ದರು ಎಂದು ದೂರಿನಲ್ಲಿ ತಿಳಿಸಲಾಗಿದೆ.

ಅ.5ರಂದು ಸಂಜೆ ತಾವು ಜಯಲಕ್ಷ್ಮಿ ಸಿಂಗ್ ಅವರನ್ನು ಭೇಟಿ ಮಾಡಿದಾಗ ಅವರು ಜಾತಿ ನಿಂದನೆ ಮಾಡಿ ಭೋಗ್ಯಕ್ಕೆ ಮನೆ ನೀಡುವುದಿಲ್ಲ ಎಂದು ಹೇಳಿದ್ದರು. ತಮ್ಮ ಹಣ ವಾಪಸ್ ಕೊಡುವಂತೆ ಕೇಳಿದಾಗ ಚೆಕ್ ನೀಡಿದ್ದು, ಸದರಿ ಚೆಕ್ ಬೌನ್ಸ್ ಆಗಿದೆ. ಇದರ ಬಗ್ಗೆ ಅವರನ್ನು ವಿಚಾರಿಸಲು ಹೋದಾಗ ಮತ್ತೆ ಜಾತಿ ನಿಂದನೆ ಮಾಡಿ ಕೊಲೆ ಬೆದರಿಕೆ ಹಾಕಿದ್ದಾರೆ ಎಂದು ಸಂದೇಶ್ ನೀಡಿರುವ ದೂರನ್ನು ದಾಖಲಿಸಿಕೊಂಡಿರುವ ಹೆಬ್ಬಾಳ ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ಲಾಡ್ಜ್ ಕೊಠಡಿಯಲ್ಲಿ ಜೂಜಾಡುತ್ತಿದ್ದ 7 ಮಂದಿ ಬಂಧನ



ಮೈಸೂರು,ನ.23(ಎಸ್‌ಬಿಡಿ)-ಲಾಡ್ಜ್‌ನಲ್ಲಿ ಜೂಜಾಡುತ್ತಿದ್ದ 7 ಮಂದಿಯನ್ನು ಮೈಸೂರಿನ ವಿಜಯನಗರ ಠಾಣೆ ಪೊಲೀಸರು ಬಂಧಿಸಿ, ಪಣಕ್ಕಿಟ್ಟಿದ್ದ 1.26 ಲಕ್ಷ ರೂ. ಹಣವನ್ನು ವಶಪಡಿಸಿಕೊಂಡಿದ್ದಾರೆ. ವಿಜಯನಗರ 2ನೇ ಹಂತದ ವಿಜಯನಗರ ವಾಟರ್ ಟ್ಯಾಂಕ್‌ನಿಂದ ಸೂರ್ಯಬೇಕರಿ ಮಾರ್ಗದಲ್ಲಿರುವ ಲಾಡ್ಜ್‌ವೊಂದರಲ್ಲಿ ಜೂಜಾಡುವ ಬಗ್ಗೆ ಖಚಿತ ಮಾಹಿತಿ ತಿಳಿದ ಪೊಲೀಸರು ಮಂಗಳವಾರ ರಾತ್ರಿ ದಾಳಿ ನಡೆಸಿದ್ದರು. ಲಾಡ್ಜ್‌ನ 4ನೇ ಮಹಡಿ ಕೊಠಡಿ ಸಂಖ್ಯೆ 401ರಲ್ಲಿ ಜೂಜಾಡುತ್ತಿದ್ದ 7 ಮಂದಿಯನ್ನು ಬಂಧಿಸಿ, ಪಣಕ್ಕಿಟ್ಟಿದ್ದ 1,26,130 ರೂ. ವಶಕ್ಕೆ ಪಡೆದಿದ್ದಾರೆ. ಡಿಸಿಪಿ ಪ್ರದೀಪ್‌ಗುಂಟಿ ಮಾರ್ಗದರ್ಶನ, ನರಸಿಂಹರಾಜ ಉಪವಿಭಾಗದ ಎಸಿಪಿ ಶಿವಶಂಕರ್ ನೇತೃತ್ವದಲ್ಲಿ ನಡೆದ ಕಾರ್ಯಾಚರಣೆಯಲ್ಲಿ ವಿಜಯನಗರ ಇನ್‌ಸ್ಪೆಕ್ಟರ್ ಬಿ.ಎಸ್.ರವಿಶಂಕರ್, ಸಬ್‌ಇನ್‌ಸ್ಪೆಕ್ಟರ್ ಶಬರೀಶ್, ಸಿಬ್ಬಂದಿ ನಾಗರಾಜು, ಪುರುಷೋತ್ತಮ್, ಶ್ರೀನಿವಾಸ ಪ್ರಸಾದ್, ಶಂಕರ್ ಬಂಡಿವಡ್ಡರ್, ಪ್ರಭಾಕರ್, ಸೋಮಾರಾಧ್ಯ, ತಿಲಕ್‌ಕುಮಾರ್, ಶ್ರೀನಿವಾಸ ಮೂರ್ತಿ, ಅಣ್ಣಪ್ಪ ದೇವಾಡಿಗ ಭಾಗಿಯಾಗಿದ್ದರು.

ನಕ್ಕರೆ ಅದೇ ಸ್ವರ್ಗ

ನ್ಯಾಯಾಧೀಶ : ಈತನಿಗೆ ಎರಡೂ ಕಿವಿಗಳನ್ನು ಕತ್ತರಿಸಿ
ಗುಂಡ : ಅಯ್ಯೋ ಬೇಡಾ ಸ್ವಾಮಿ ನಾನು ಕುರುಡ ಆಗೋಗ್ತೀನಿ
ನ್ಯಾಯಾಧೀಶ : ಮೂರ್ಖ ಕಿವಿ ಕತ್ತರಿಸಿದರೆ ಕುರುಡು ಹೇಗೆ ಆಗ್ತಾರೆ?
ಗುಂಡ : ಆಮೇಲೆ ನಾನು ಕನ್ನಡಕ ಎಲ್ಲಿ ಹಾಕಲಿ?

ಮೈಸೂರು ಮಿತ್ರ

ಗುರುವಾರ, 24 ನವೆಂಬರ್ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ.........

ಕೆಲಸವನ್ನು ಆರಂಭಿಸುವಾಗ ಅದರ ಫಲಾಫಲಗಳನ್ನು ಯೋಚಿಸಬೇಕು.
–ರಾಮಾಯಣ

ವೇದ ಸುಳ್ಳಾದರೂ
ಗಾದೆ ಸುಳ್ಳಾಗದು

{ ಕರೆಯೋಕೆ ಎಮ್ಮೆ ತಂದು ಕಡೆಂಯೋ
ಗಡಿಗೆಗೆ ಹೇಗೆ ಅಂದರಂತೆ

ನಿಮ್ಮ ಪತ್ರಗಳು

■ ರಾಜಿಯೋ, ಓಟಿಗಾಗಿಯೋ ಬಹಿರಂಗವಾಗಿ ಹೇಳಿ ಸಂಸದರೆ

ಮಾನ್ಯರೆ,

ಶಾಸಕ ರಾಮದಾಸ್ ಅವರು ತಮ್ಮ ಶಾಸಕರ ನಿಧಿಯಿಂದ ಜೆಎಸ್‌ಎಸ್ ಕಾಲೇಜಿನ ಮುಂಭಾಗ ಮೈಸೂರು ಊಟಿ ರಸ್ತೆಯ ಹೈವೇಯಲ್ಲಿ ನಿರ್ಮಿಸುತ್ತಿರುವ ಬಸ್ ತಂಗು ನಿಲ್ದಾಣದ ಮೇಲೆ ಗುಂಬಜ್ ಆಕಾರದ ನಿರ್ಮಾಣದ ಬಗ್ಗೆ ಸಂಸದ ಪ್ರತಾಪ್ ಸಿಂಹ ಅವರು ತಕರಾರು ತೆಗೆದು ಅದನ್ನು ತೆಗೆಸದಿದ್ದರೆ ತಾವೇ ಒಡೆದು ಹಾಕುವುದಾಗಿ ಎಚ್ಚರಿಕೆ ನೀಡುವ ಮೂಲಕ ರಾಮದಾಸ್ ಅವರ ಬಗ್ಗೆ ಹಲವು ರೀತಿಯಲ್ಲಿ ಮಾತನಾಡಿದ್ದರು. ಮುಂದುವರೆದ ಭಾಗದಂತೆ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ಹೆದ್ದಾರಿಯಲ್ಲಿ ಯಾವುದೇ ರೀತಿಯ ಕಟ್ಟಡ ನಿರ್ಮಾಣ ಮಾಡುವಂತಿಲ್ಲ ಮತ್ತು ಸದರಿ ನಿರ್ಮಾಣಕ್ಕೆ ಪ್ರಾಧಿಕಾರದ ಅನುಮತಿ ಪಡೆದಿಲ್ಲ. ಆದುದರಿಂದ ಅದನ್ನು ತೆರವುಗೊಳಿಸಿ ಎಂದು ಮೈಸೂರು ಮಹಾನಗರ ಪಾಲಿಕೆ ಆಯುಕ್ತರಿಗೆ ತಿಳಿಸಿದ್ದಾರೆಂದು ಮಾಧ್ಯಮಗಳಲ್ಲಿ ಪ್ರಕಟವಾಗಿತ್ತು.

ಅದನ್ನೂ ಕೂಡ ಮಾನ್ಯ ಸಂಸದರು ಹೇಳಿದ್ದರು. ಅವೆಲ್ಲವೂ ಮಾಧ್ಯಮಗಳಲ್ಲಿ ಬಂದಿದ್ದು, ಅದನ್ನು ಎಲ್ಲಾ ನಾಗರಿಕರೂ ಓದಿದ್ದಾರೆ. ಆದರೆ ಇತ್ತೀಚೆಗೆ ನಡೆದ ಬ್ರಾಹ್ಮಣರ ಪ್ರತಿಭಟನಾ ರ್‍ಯಾಲಿಯಲ್ಲಿ ಸಂಸದರು ಭಾಗವಹಿಸುವ ಸಂದರ್ಭದಲ್ಲಿ ಶಾಸಕ ರಾಮದಾಸ್ ಅವರ ಕಾಲಿಗೆ ನಮಸ್ಕರಿಸಿದ್ದನ್ನು ಮಾಧ್ಯಮಗಳು ಪ್ರಕಟಿಸಿದ್ದು, ಮೈಸೂರಿನ ನಾಗರಿಕರು ಹುಬ್ಬೇರಿಸುವಂತೆ ಮಾಡಿವೆ.

ಸಂಸದರ ಈ ನಡೆಯನ್ನು ಏನೆಂದು ಅರ್ಥೈಸಿಕೊಳ್ಳುವುದು. ಆ ಸಮುದಾಯದ ಮುಖಂಡರಾದ ಶಾಸಕರ ಬಗ್ಗೆ ನಿಷ್ಠುರವಾಗಿ ಮಾತನಾಡಿದ್ದರಿಂದ ಸದರಿ ಸಮುದಾಯದವರ ಓಟಿಗೋಸ್ಕರವಾಗಿ ಈ ರೀತಿ ನಡೆದುಕೊಂಡರೋ ಅಥವಾ ಇವರಿಬ್ಬರೂ ರಾಜಿ ಆದರೋ ಎಂಬುದರ ಅರ್ಥವೋ ಎಂಬುದು ತಿಳಿಯದು. ಎಲ್ಲವನ್ನೂ ಬಹಿರಂಗವಾಗಿ ಮಾತನಾಡುವ ಸಂಸದರೇ ಇದಕ್ಕೂ ಉತ್ತರಿಸಬೇಕು.

–ಬ್ಯಾಂಕ್ ಶಿವಕುಮಾರ್, ಜೆ.ಪಿ. ನಗರ, ಮೈಸೂರು.

■ ಪ್ರತಿಭೆ ಅನಾವರಣಕ್ಕೆ ವೇದಿಕೆಯ ಕೊರತೆ!

ಮಾನ್ಯರೆ,

ಸಾಂಸ್ಕೃತಿಕ ಕಲೆಗಳ ತವರೂರು ಎಂದೇ ಖ್ಯಾತಿ ಪಡೆದ ಮೈಸೂರು ಜಿಲ್ಲೆಯ ಕೆಲ ಹೆಸರಾಂತ ಖಾಸಗಿ ಶಾಲಾ – ಕಾಲೇಜಿನಲ್ಲಿ ಪ್ರತಿಭಾವಂತ ವಿದ್ಯಾರ್ಥಿಗಳು ತಮ್ಮ ಕಲಾ ಪ್ರತಿಭೆಯನ್ನು ಅನಾವರಣಗೊಳಿಸಲು ಸಾಧ್ಯವಾಗುತ್ತಿಲ್ಲ. ಶಾಲಾ ಕಾಲೇಜು ಸಾವಿರಾರು ರೂಪಾಯಿಗಳನ್ನು ಪೋಷಕರಿಂದ ಪಡೆದು, ವಿಶ್ವಾಸದ ಬೊಗಳೆ ಮಾತುಗಳನ್ನಾಡಿ ನಂಬಿಸುವುದರ ಜೊತೆಗೆ ಯಾವುದೇ ರೀತಿಯ ವೇದಿಕೆಗಳನ್ನು ಕಲ್ಪಿಸಿಕೊಡದೇ ಪ್ರತಿಭಾವಂತ ವಿದ್ಯಾರ್ಥಿಗಳು ತಮ್ಮಲ್ಲಿರುವ ಕಲೆಗಳನ್ನು ಪ್ರದರ್ಶಿಸಲಾಗದೆ ವಂಚಿತರಾಗಿದ್ದಾರೆ. ಮೈಸೂರಿನಲ್ಲಿ ಹುಟ್ಟಿ ಬೆಳೆದ ಮತ್ತು ವಾಸವಿದ್ದ ಅನೇಕ ಪ್ರತಿಭಾವಂತರು ರಾಷ್ಟ್ರ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ಸಾಧನೆ ಮಾಡಿದ್ದಾರೆ. ಉದಾಹರಣೆಗೆ ನಟ ಯಶ್, ಸಂಗೀತಗಾರ ವಿಜಯ್ ಪ್ರಕಾಶ್, ಸಂಗೀತ ಸಂಯೋಜಕ ಅರ್ಜುನ್ ಜನ್ಯ ಮುಂತಾದವರು ನಮ್ಮೆದುರಿಗಿರುವ ನೈಜ ಸಾಧಕರು.

ಆದ್ದರಿಂದ ಈ ಕೂಡಲೇ ಸರ್ಕಾರ, ಜಿಲ್ಲಾಡಳಿತ ಅಥವಾ ಸಂಬಂಧಪಟ್ಟ ಅಂಗ ಸಂಸ್ಥೆಗಳು ಇಂತಹ ವಿದ್ಯಾರ್ಥಿಗಳನ್ನು ಗುರುತಿಸಿ, ಸಹಕಾರ ನೀಡಿ, ವೇದಿಕೆಯನ್ನು ಕಲ್ಪಿಸಿ ಕೊಡಬೇಕು. ಆಗಲೇ ಮಾತ್ರ "ಸಾಂಸ್ಕೃತಿಕ ನಗರಿ ಮೈಸೂರು" ಎಂಬ ಹೆಸರಿಗೆ ಶೋಭೆ

–ಮಣಿಕಂಠ, ಮೈಸೂರು

■ ನಾಗರಿಕ ಸಮಾಜ ತಲೆ ತಗ್ಗಿಸುವಂತಹ ಕೃತ್ಯ

ಮಾನ್ಯರೆ,

ನಾಗರಿಕರೆಂದು ಕರೆಸಿಕೊಳ್ಳುವವರು ಅನಾಗರಿಕರಂತೆ ವರ್ತಿಸಿದ ಘಟನೆಯೊಂದು ನಮ್ಮದೆ ರಾಜ್ಯದ ಚಾಮರಾಜನಗರ ಜಿಲ್ಲೆಗೆ ಸೇರಿದ ಹೆಗ್ಗೋಠಾರ ಎಂಬ ಗ್ರಾಮ ವೊಂದರಲ್ಲಿ ಘಟಿಸಿ ಹೋಗಿದೆ. "ದಲಿತ ಮಹಿಳೆಯೊಬ್ಬರು" ಸಾರ್ವಜನಿಕ ಟ್ಯಾಂಕಿನ ನಲ್ಲಿಯಲ್ಲಿ ನೀರು ಕುಡಿದರೆಂಬ ಕ್ಷುಲ್ಲಕ ಕಾರಣಕ್ಕೆ ಸವರ್ಣಿಯರು ಆ ಟ್ಯಾಂಕ್‌ನಲ್ಲಿ ಸಂಗ್ರಹವಾಗಿದ್ದ ನೀರನ್ನು ಖಾಲಿ ಮಾಡಿ ಅದನ್ನು ಗೋಮೂತ್ರ ದಿಂದ ಶುದ್ಧೀಕರಣ ಮಾಡುವ ಮೂಲಕ ಬಹಿರಂಗವಾಗಿಯೇ ಅಸ್ಪೃಶ್ಯತೆ ಆಚರಣೆ ಮಾಡಿದ್ದಾರೆ. ಇದು ನಾಗರಿಕ ಸಮಾಜ ಅನಾಗರಿಕರಂತೆ ನಡೆದುಕೊಂಡಿರುವಂತಹ ಒಂದು ಅಮಾನವೀಯವಾದ ಕೃತ್ಯವಾಗಿದ್ದು ಈ ಘಟನೆಯಿಂದ ಇಡೀ ನಾಗರಿಕ ಸಮಾಜವೇ ತಲೆ ತಗ್ಗಿಸುವಂತಾಗಿದೆ.

ನಮ್ಮ ದೇಶದಲ್ಲಿ ಅಸ್ಪೃಶ್ಯತೆ ಆಚರಣೆ ನಿಷೇಧ ಕಾಯ್ದೆ ಜಾರಿ ಇದ್ದಾಗಿಯೂ ಇಂದಿಗೂ ಸಹ ಇಂತಹ ನೂರಾರು ಘಟನೆಗಳು ದೇಶದ ಮೂಲೆ ಮೂಲೆಯಲ್ಲಿ ಯಾವುದೇ ಎಗ್ಗಿಲ್ಲದೆ ನಡೆಯುತ್ತಲೇ ಬಂದಿವೆ. ಇಷ್ಟಾದರೂ ಸಹ ನಮ್ಮನ್ನಾಳುವ ಸರ್ಕಾರಗಳು, ನಮ್ಮ ಜನಪ್ರತಿನಿಧಿಗಳು ಇಂತಹ ಕೃತ್ಯಗಳಿಗೆ ಕಡಿವಾಣ ಹಾಕುವಲ್ಲಿ ಸೋತಿರುವುದು ನಿಜಕ್ಕೂ ನಾಚಿಕೆಗೇಡಿನ ಸಂಗತಿ.

ಈ ದೇಶಕ್ಕೆ "ಸ್ವಾತಂತ್ರ್ಯ" ಬಂದು ಸುಮಾರು ಏಳು ದಶಕಗಳೇ ಕಳೆದಿದ್ದರೂ ನಾವು ಆಧುನಿಕತೆ ಹಾಗೂ ತಂತ್ರಜ್ಞಾನದಲ್ಲಿ ಜಗತ್ತಿನ ಮುಂದೆ ಎಷ್ಟೇ ಸರ್ವಶ್ರೇಷ್ಠರು, ಬುದ್ಧಿವಂತರು, ವಿಶ್ವಗುರು ಎಂದು ಎದೆ ಉಬ್ಬಿಸಿ ಬೀಗಿದರೂ ಮನುಷ್ಯರ ಆತ್ಮ ಗೌರವ ವಿಚಾರದಲ್ಲಿ ಭಾರತೀಯರು ಇಂದಿಗೂ ಸಹ ಅಲ್ಪ ಮಾನವರಾಗಿಯೇ ಉಳಿದು ಹೋಗಿರುವುದು ಈ ದೇಶದ ದೊಡ್ಡ ದುರಂತ. ಜಾತಿ ಧರ್ಮದ ಹೆಸರಲ್ಲಿ ನಾಡಿನಲ್ಲಿ ಶಾಂತಿ ಕದಡಿ, ಹುಸಿ ದೇಶಪ್ರೇಮದ ಹೆಸರಲ್ಲಿ "ಹಿಂದೂ ನಾವೆಲ್ಲ ಒಂದು" ಎಂದು ಬೊಬ್ಬೆ ಹೊಡೆಯುವವರಿಗೆಲ್ಲ ಇಂತಹ ಘಟನೆಗಳು ಸ್ವಲ್ಪವಾದರು ಲಜ್ಜೆ ತರಿಸುವಂತಾಗಬೇಕು.

ಈ ದೇಶದಲ್ಲಿನ "ದಲಿತರ" ಮೇಲೆ ಇಂದಿಗೂ ಸಹ ಯಾವುದೇ ಎಗ್ಗಿಲ್ಲದೆ ನಿರಂತರ ವಾಗಿ, ನಿರಾಯಾಸವಾಗಿ ನಡೆಯುತ್ತಿರುವ ಇಂತಹ ಅಮಾನವೀಯ ಕೃತ್ಯಗಳು "ಮನುಷ್ಯರನ್ನು, ಮನುಷ್ಯರ ಹಾಗೆ ಕಾಣದೆ" ಪ್ರಾಣಿ ಪಕ್ಷಿಗಳಿಗಿಂತಲೂ ಕೀಳಾಗಿ ಕಾಣುವ ಮನಸ್ಥಿತಿ ಹೋಗಲಾಡಿಸಲು ಸರ್ಕಾರಗಳು ಹೀಗಿರುವ ಕಾನೂನುಗಳನ್ನು ಮತ್ತಷ್ಟು ಕಠಿಣಗೊಳಿಸಿ ಇಂತಹ ಕೃತ್ಯಗಳು ಮತ್ತೆಂದು ಮರುಕಳಿಸಿದಂತೆ ನಿಗಾವಹಿಸಬೇಕಾದ್ದು ತುಂಬಾ ಅನಿವಾರ್ಯ. ಇನ್ನೆಷ್ಟು ದಿನ ಈ ದೇಶದ ದಲಿತರು ಇಂತಹ ಅಮಾನವೀಯ ಕೃತ್ಯಗಳನ್ನು ಸಹಿಸಿಕೊಂಡು ಬದುಕಬೇಕು..!? ಹಾಗಾದರೆ ಈ ದೇಶದ ದಲಿತರು ಇವರುಗಳಂತೆ ಮನುಷ್ಯರಲ್ಲವೆ...!?

ನಾಗರಿಕರೆನಿಸಿಕೊಂಡವರು ವಾಸಿಸುವ ಸಮಾಜದಲ್ಲಿ ನಡೆಯುತ್ತಿರುವ ಇಂತಹ ಅನಾಗರಿಕ, ಅಮಾನವೀಯ ಕೃತ್ಯಗಳನ್ನು ಮುಂದಿನ ದಿನಗಳಲ್ಲಾದರೂ ಎಲ್ಲಾ ನಾಗರಿಕರು ಸೇರಿ ಒಕ್ಕೊರಲಿನಿಂದ ಖಂಡಿಸುವ ಮೂಲಕ ನಾಗರಿಕ ಸಮಾಜದ ಘನತೆಯನ್ನು ಎತ್ತಿ ಹಿಡಿಯುವಂತಾಗಲಿ.

–ಅಪುರಾ, ಅಗತಗೌಡನಹಳ್ಳಿ, ಗುಂಡ್ಲುಪೇಟೆ. ತಾ.



ಪ್ರೊ. ಆರ್. ಇಂದಿರಾ
ಸಮಾಜಶಾಸ್ತ್ರಜ್ಞೆ
ramaraoindira@gmail.com

ಸಮಾಜಮುಖಿ

ಮನೆ ಎಂಬ ಭದ್ರಕೋಟೆಯೊಳಗೇ ಮಹಿಳೆಯರ ಮೇಲೆ ಅತೀ ದೌರ್ಜನ್ಯ

> "ಜಾಗತಿಕ ಮಟ್ಟದಲ್ಲಿ ಮಹಿಳೆಯರ ವಿರುದ್ಧದ ದೌರ್ಜನ್ಯವನ್ನು ತಡೆಗಟ್ಟುವ ಈ ದಿನಾಚರಣೆ ಅಸ್ತಿತ್ವಕ್ಕೆ ಬಂದು ಎರಡು ದಶಕಗಳು ಕಳೆದು ಹೋಗಿದ್ದರೂ ದೌರ್ಜನ್ಯದ ಪ್ರಮಾಣ ಮಾತ್ರ ಕಡಿಮೆಯಾಗಿಲ್ಲ. ದೌರ್ಜನ್ಯವನ್ನು ಎಸಗುವವರಲ್ಲಿ ಅತೀ ಹೆಚ್ಚಿನ ಸಂಖ್ಯೆಯವರು ಅವರ ನಿಕಟ ಬಂಧುಗಳೇ ಆಗಿರುತ್ತಾರೆ. ಸುಮಾರು 155 ದೇಶಗಳು ಕೌಟುಂಬಿಕ ದೌರ್ಜನ್ಯ ತಡೆಗಟ್ಟಲು ಈಗಾಗಲೇ ಕಾನೂನುಗಳನ್ನು ರಚಿಸಿವೆ. ಆದರೆ ಮನೆ ಎಂಬ ಭದ್ರಕೋಟೆಯ ಒಳಗೆ ಮಹಿಳೆಯರು ಅತೀ ಹೆಚ್ಚು ಪ್ರಮಾಣದ ದೌರ್ಜನ್ಯವನ್ನು ಎದುರಿಸುತ್ತಾರೆ.

ಪ್ರತಿ ವರ್ಷವೂ ನವೆಂಬರ್ ತಿಂಗಳ 25ನೇ ತಾರೀಖಿನಂದು ವಿಶ್ವಸಂಸ್ಥೆ ಮಹಿಳೆಯರ ವಿರುದ್ಧ ದೌರ್ಜನ್ಯ ನಿವಾರಣೆಯ ಅಂತರರಾಷ್ಟ್ರೀಯ ದಿನಾಚರಣೆಯನ್ನು ಜಗತ್ತಿನಾದ್ಯಂತ ಆಚರಿಸುತ್ತದೆ. ಈ ದಿನಕ್ಕೆ ಮಾರ್ಚ್ ಎಂಟರ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಗೆ ಇರುವಷ್ಟು ದೀರ್ಘ ಇತಿಹಾಸವಾಗಲೀ, ಗೋಚರತೆಯಾಗಲೀ ಇಲ್ಲ. ಲಿಂಗಾಧಾರಿತ ದೌರ್ಜನ್ಯವನ್ನು ಕುರಿತ ಅರಿವನ್ನು ಹೆಚ್ಚಿಸಿ ಅದನ್ನು ತಡೆಗಟ್ಟಲು ಕಠಿಣ ಕ್ರಮಗಳನ್ನು ತೆಗೆದುಕೊಳ್ಳಲು ಎಲ್ಲ ದೇಶಗಳನ್ನು ಪ್ರೇರೇಪಿಸಲು 1999ರಲ್ಲಿ ವಿಶ್ವಸಂಸ್ಥೆಯ ಜನರಲ್ ಅಸೆಂಬ್ಲಿ ನವೆಂಬರ್ 25ರಂದು ಈ ದಿನಾಚರಣೆಯನ್ನು ಆಚರಿಸಬೇಕೆಂದು ಘೋಷಿಸಿತು. ಡಾಮಿನಿಕ್ ರಿಪಬ್ಲಿಕ್‌ನಲ್ಲಿ 1960ರಲ್ಲಿ ಆ ದೇಶದ ದೊರೆಯ ಸರ್ವಾಧಿಕಾರಿ ಧೋರಣೆಗಳನ್ನು ವಿರೋಧಿಸಿದ ಮೂವರು ಸಹೋದರಿಯರನ್ನು ಆತ ಹತ್ಯೆಗೈದ ದಿನವನ್ನು ಮಹಿಳಾ ಪ್ರತಿಭಟನೆಯ ಸಂಕೇತವೆಂದು ಗುರುತಿಸಿ, ಈ ದಿನವನ್ನು ಮಹಿಳೆಯರ ವಿರುದ್ಧ ದೌರ್ಜನ್ಯ ನಿವಾರಣೆಯ ಅಂತರರಾಷ್ಟ್ರೀಯ ದಿನವೆಂದು ಘೋಷಿಸಲಾಯಿತು.

ದೌರ್ಜನ್ಯ ಎನ್ನುವ ಪರಿಕಲ್ಪನೆ ಮಹಿಳೆ ಅಥವಾ ಹೆಣ್ಣು ಮಕ್ಕಳ ದೇಹದ ಮೇಲಾಗುವ ಆಕ್ರಮಣಗಳಿಗೆ ಮಾತ್ರ ಸೀಮಿತವಾಗಿಲ್ಲ. ವಿಶ್ವಸಂಸ್ಥೆ ನೀಡಿರುವ ನಿರೂಪಣೆಯ ಮೇರೆಗೆ 'ಹೆಣ್ಣು ಅನುಭವಿಸುವ ದೈಹಿಕ, ಲೈಂಗಿಕ ಅಥವಾ ಮಾನಸಿಕ ಹಿಂಸೆ, ತನ್ನ ಲಿಂಗದ ಕಾರಣದಿಂದಾಗಿ ಆಕೆ ಎದುರಿಸುವ ಬೆದರಿಕೆ ಅಥವಾ ಬಲಾತ್ಕಾರ ಮತ್ತು ಸಾರ್ವಜನಿಕ ಹಾಗೂ ಖಾಸಗಿ ಬದುಕಿನಲ್ಲಿ ನಡೆಯುವ ಆಕೆಯ ಸ್ವಾತಂತ್ರ್ಯ ಹರಣ–ಇವೆಲ್ಲವನ್ನೂ ಈ ದೌರ್ಜನ್ಯ ಒಳಗೊಳ್ಳುತ್ತದೆ'.

ಪ್ರತಿ ವರ್ಷವೂ ನವೆಂಬರ್ 25ರಂದು ಆರಂಭವಾಗಿ 16 ದಿನಗಳ ಕಾಲ, ಅಂದರೆ ಡಿಸೆಂಬರ್ 10ರಂದು ಆಚರಿಸಲ್ಪಡುವ ಮಾನವ ಹಕ್ಕುಗಳ ದಿನಾಚರಣೆಯವರೆಗೂ ವಿಶ್ವದಾದ್ಯಂತ ಮಹಿಳೆಯರ ವಿರುದ್ಧ ನಿರಂತರವಾಗಿ ನಾನಾ ರೀತಿಗಳಲ್ಲಿ ನಡೆಯುತ್ತಿರುವ ದೌರ್ಜನ್ಯಗಳತ್ತ ಗಮನವನ್ನು ಸೆಳೆದು, ಈ ದೌರ್ಜನ್ಯವನ್ನು ತಡೆಗಟ್ಟಲು ಕ್ರಮಗಳನ್ನು ಕೈಗೊಳ್ಳುವುದಕ್ಕೆ ಸರ್ಕಾರಗಳು ಹಾಗೂ ನಾಗರಿಕ ಸಮಾಜವನ್ನು ಸಿದ್ಧಗೊಳಿಸುವ ಉದ್ದೇಶದಿಂದ ಅನೇಕ ಕಾರ್ಯಕ್ರಮಗಳು ಮತ್ತು ಚಳವಳಿಗಳು ಮಹಿಳೆಯರ ವಿರುದ್ಧ ದೌರ್ಜನ್ಯ ನಿವಾರಣೆಯ ಅಂತರರಾಷ್ಟ್ರೀಯ ದಿನದ ಮುಂದುವರೆದ ಭಾಗವಾಗಿ ನಡೆಯುತ್ತವೆ. ಈ ಪ್ರಯತ್ನಗಳ ಫಲವಾಗಿ 2013ರ ವೇಳೆಗೆ ಯುರೋಪಿಯನ್ ಯೂನಿಯನ್‌ನ 27 ದೇಶಗಳೇ ಅಲ್ಲದೆ ಭಾರತವೂ ಸೇರಿದಂತೆ ಇತರ 63 ದೇಶಗಳು ಮಹಿಳೆಯರು ಮತ್ತು ಹೆಣ್ಣು ಮಕ್ಕಳ ವಿರುದ್ಧ ನಡೆಯುವ ದೌರ್ಜನ್ಯವನ್ನು ತಡೆಗಟ್ಟಲು ನಿರ್ದಿಷ್ಟ ಕಾನೂನಾತ್ಮಕ ಕ್ರಮಗಳೇ ಅಲ್ಲದೆ, ದೌರ್ಜನ್ಯವನ್ನು ಕುರಿತ ಸಾರ್ವಜನಿಕ ಅರಿವನ್ನು ಹೆಚ್ಚಿಸುವ ಕಾರ್ಯಕ್ರಮಗಳಿಗೆ ಉತ್ತೇಜನ ನೀಡಿ, ಅವರು ಸುರಕ್ಷಿತ ಜೀವನವನ್ನು ನಡೆಸಲು ಅವಶ್ಯವಾದ ಪರಿಸರವನ್ನು ಸೃಷ್ಟಿಸಲು ಅನುವು ಮಾಡಿಕೊಡುವುದರತ್ತ ತಮ್ಮ ಬದ್ಧತೆಯನ್ನು ಘೋಷಿಸಿದವು.

ಜಾಗತಿಕ ಮಟ್ಟದಲ್ಲಿ ಮಹಿಳೆಯರ ವಿರುದ್ಧದ ದೌರ್ಜನ್ಯವನ್ನು ತಡೆಗಟ್ಟುವ ಈ ದಿನಾಚರಣೆ ಅಸ್ತಿತ್ವಕ್ಕೆ ಬಂದು ಎರಡು ದಶಕಗಳು ಕಳೆದು ಹೋಗಿದ್ದರೂ ದೌರ್ಜನ್ಯದ ಪ್ರಮಾಣ ಮಾತ್ರ ಕಡಿಮೆಯಾಗಿಲ್ಲ. ದೌರ್ಜನ್ಯವನ್ನು ಎಸಗುವವರಲ್ಲಿ ಅತೀ ಹೆಚ್ಚಿನ ಸಂಖ್ಯೆಯವರು ಅವರ ನಿಕಟ ಬಂಧುಗಳೇ ಆಗಿರುತ್ತಾರೆ. ಸುಮಾರು 155 ದೇಶಗಳು ಕೌಟುಂಬಿಕ ದೌರ್ಜನ್ಯವನ್ನು ತಡೆಗಟ್ಟಲು ಈಗಾಗಲೇ ಕಾನೂನುಗಳನ್ನು ರಚಿಸಿವೆ. ಆದರೆ ಮನೆ ಎಂಬ ಭದ್ರಕೋಟೆಯ ಒಳಗೆ ಮಹಿಳೆಯರು ಅತೀ ಹೆಚ್ಚು ಪ್ರಮಾಣದ ದೌರ್ಜನ್ಯವನ್ನು ಎದುರಿಸುತ್ತಾರೆ.


ಮಹಿಳೆಯರ ವಿರುದ್ಧ ದೌರ್ಜನ್ಯ ನಿವಾರಣೆಯ ಅಂತರರಾಷ್ಟ್ರೀಯ ದಿನಾಚರಣೆ

ನಿಕಟ ಸಂಬಂಧಿಗಳಿಂದ ದೌರ್ಜನ್ಯಕ್ಕೆ ತುತ್ತಾಗುವ ಮಹಿಳೆಯರ ಸಂಖ್ಯೆ ವಿಶೇಷವಾಗಿ 15–49ರ ವಯೋಗುಂಪಿನಲ್ಲಿ ಹೆಚ್ಚಾಗಿದೆ ಎಂಬುದು ವಿಶ್ವ ಆರೋಗ್ಯ ಸಂಸ್ಥೆಯ ದಾಖಲೆಗಳಿಂದ ತಿಳಿದು ಬರುತ್ತದೆ. ಇತ್ತೀಚಿನ ವರ್ಷಗಳಲ್ಲಿ ದೌರ್ಜನ್ಯದ ಚರ್ಚೆಯಲ್ಲಿ ನಿಕಟ ಸಂಬಂಧಿಗಳಿಂದ ನಡೆಯುವ ಹಿಂಸೆ ಹೆಚ್ಚು ಹೆಚ್ಚಾಗಿ ಗಮನ ಸೆಳೆಯುತ್ತಿದೆ. ಕೋವಿಡ್–19ರ ಸಂದರ್ಭದಲ್ಲಂತೂ ಇದರ ಪ್ರಮಾಣದಲ್ಲಿ ಗಮನಾರ್ಹವಾಗಿ ಏರಿಕೆಯಾಯಿತು. ಭಾರತದಲ್ಲೇ ದೇಶದಾದ್ಯಂತ 2020ರಲ್ಲಿ ಜಾರಿಗೆ ಬಂದ ಲಾಕ್‌ಡೌನ್ ಕಾರಣದಿಂದಾಗಿ ಗೃಹ ಬಂಧಿಗಳಾದ ಲಕ್ಷಾಂತರ ಮಹಿಳೆಯರು ಎದುರಿಸಲಾರಂಭಿಸಿದ ಕೌಟುಂಬಿಕ ದೌರ್ಜನ್ಯವನ್ನು ಕುರಿತ ದೂರುಗಳಲ್ಲಿ ಶೇಕಡಾ 100ರಷ್ಟು ಏರಿಕೆ ಆಯಿತು ಎಂದು ರಾಷ್ಟ್ರೀಯ ಮಹಿಳಾ ಆಯೋಗ ತಿಳಿಸಿತ್ತು.

ಇದನ್ನು ತಡೆಗಟ್ಟಲು ರಾಷ್ಟ್ರ ವ್ಯಾಪಿ ಚಾಲ್ತಿಯಲ್ಲಿ ಇದ್ದ ವಾಟ್ಸಾಪ್ ಸಂಖ್ಯೆಯನ್ನು ಆಯೋಗ ಜಾರಿಗೆ ತಂದರೂ ಅದರ ಪ್ರಯೋಜನವನ್ನು ಪಡೆಯಲು ಶೇಕಡಾ 60ರಷ್ಟು ಮಹಿಳೆಯರಿಗೆ ಆಗಲಿಲ್ಲ. ಏಕೆಂದರೆ ಅವರ ಬಳಿ ಪೂರಕ ತಂತ್ರಜ್ಞಾನವನ್ನು ಹೊಂದಿದ್ದ ಮೊಬೈಲ್ ದೂರವಾಣಿ ಇರಲಿಲ್ಲ. ಇಂದಿಗೂ ತಂತ್ರಜ್ಞಾನದ ಅಲಭ್ಯತೆಯಿಂದ ಅನೇಕ ಮಹಿಳೆಯರಿಗೆ ತಮ್ಮ ವಿರುದ್ಧ ನಡೆಯುವ ಕೌಟುಂಬಿಕ ದೌರ್ಜನ್ಯವನ್ನು ವರದಿ ಮಾಡಲಾಗಲಿ ಸಹಾಯವಾಣಿಗಳ ನೆರವನ್ನು ಪಡೆಯಲಾಗಲಿ ಸಾಧ್ಯವಾಗುತ್ತಿಲ್ಲ. ಈ ವಿಷಯದತ್ತ ವಿಶೇಷ ಗಮನಹರಿಸುವುದು ಅಗತ್ಯ.

ಜಗತ್ತಿನಾದ್ಯಂತ ಮಹಿಳೆಯರ ವಿರುದ್ಧ ದೌರ್ಜನ್ಯ ನಿವಾರಣೆಯ ಅಂತರರಾಷ್ಟ್ರೀಯ ದಿನಾಚರಣೆ ಹೆಚ್ಚು–ಕಡಿಮೆ ಕಾಲು ಶತಮಾನವನ್ನೇ ಪೂರೈಸುವ ಹಂತವನ್ನು ತಲುಪಿರುವ ಈ ಹೊತ್ತಿನಲ್ಲಿ ಭಾರತದಲ್ಲಿ ಮಹಿಳೆಯರು ಎದುರಿಸುತ್ತಿರುವ ದೌರ್ಜನ್ಯದ ಪ್ರಮಾಣದಲ್ಲಿ ಏರಿಕೆಯಾಗುತ್ತಿರುವುದು ವಿಪರ್ಯಾಸವೇ ಸರಿ. 2020ನೇ ವರ್ಷಕ್ಕೆ ಹೋಲಿಸಿದರೆ 2021ರ ವೇಳೆಗೆ ಈ ದೌರ್ಜನ್ಯಗಳ ಸಂಖ್ಯೆಯಲ್ಲಿ ಶೇ.15.3ರಷ್ಟು ಏರಿಕೆಯಾಗಿತ್ತು, ದೇಶದಾದ್ಯಂತ ಪ್ರತಿ 1 ಲಕ್ಷ ಜನಸಂಖ್ಯೆಗೆ ಮಹಿಳಾ ವಿರೋಧಿ ದೌರ್ಜನ್ಯ ಪ್ರಕರಣಗಳು ಶೇಕಡಾ 8ರಷ್ಟು ಏರಿಕೆಯನ್ನು ಕಂಡಿದ್ದವು ಎಂಬ ಭಯ ಹುಟ್ಟಿಸುವ ಮಾಹಿತಿಯನ್ನು ರಾಷ್ಟ್ರೀಯ ಅಪರಾಧ ದಾಖಲಾತಿ ಪ್ರಾಧಿಕಾರ ಇತ್ತೀಚೆಗೆ ನೀಡಿದೆ. ಈ ಅಂಕಿ–ಅಂಶಗಳ ಅನ್ವಯ 2020ರಲ್ಲಿ 3,71,503 ಪ್ರಕರಣಗಳು ದಾಖಲಾದರೆ 2021ರಲ್ಲಿ ಈ ಸಂಖ್ಯೆ 4, 28, 278ಕ್ಕೆ ಏರಿತ್ತು. ಈ ಸಂಖ್ಯೆ ಕೇವಲ ವರದಿಯಾದ ಪ್ರಕರಣಗಳಿಗೆ ಸೀಮಿತವಾಗಿದ್ದು ಹೊರ ಪ್ರಪಂಚದ ಗಮನಕ್ಕೆ ಬಾರದ ದೌರ್ಜನ್ಯದ ಘಟನೆಗಳು ಸಾಕಷ್ಟಿವೆ ಎಂಬುದನ್ನು ಪ್ರತ್ಯೇಕವಾಗಿ ಹೇಳಬೇಕಿಲ್ಲ.

ಮಹಿಳೆಯರ ವಿರುದ್ಧ ನಡೆಯುತ್ತಿರುವ ದೌರ್ಜನ್ಯ ಯಾವುದೇ ಒಂದು ದೇಶಕ್ಕೆ ಅಥವಾ ಕಾಲ ಘಟ್ಟಕ್ಕೆ ಸೀಮಿತವಾಗಿಲ್ಲ. ಒಂದೆಡೆ ಕಾನೂನುಗಳು ಬಿಗಿಯಾಗುತ್ತಿವೆ, ಜಾಗೃತಿಯ ಮಟ್ಟವೂ ಹೆಚ್ಚುತ್ತಿದೆ, ಮತ್ತೊಂದೆಡೆ ದೌರ್ಜನ್ಯದ ಪ್ರಮಾಣವೂ ಹೆಚ್ಚುತ್ತಿದೆ. ಇದು ಮಾನವ ಸಮಾಜದ ವಿಪರ್ಯಾಸಗಳಲ್ಲಿ ಒಂದು. ಲೀಗಲ್ ಸರ್ವಿಸಸ್ ಇಂಡಿಯಾ ನಿಯತಕಾಲಿಕೆ ಪ್ರಕಾರ ಮಹಿಳೆಯರ ವಿರುದ್ಧ ನಡೆಯುತ್ತಿರುವ ದೌರ್ಜನ್ಯದ ಜಾಗತಿಕ ಚಿತ್ರಣ ಹೀಗಿದೆ–ಶೇಕಡಾ 35ರಷ್ಟು ಮಹಿಳೆಯರು ತಮ್ಮ ಸಂಗಾತಿಗಳಲ್ಲದವರಿಂದ ತಮ್ಮ ಜೀವನದ ಯಾವುದಾದರೂ ಒಂದು ಹಂತದಲ್ಲಿ ಲೈಂಗಿಕ ಹಿಂಸೆಗೆ ಒಳಗಾಗಿರುತ್ತಾರೆ. ಈ ಲೈಂಗಿಕ ಹಿಂಸೆ ಹೆಣ್ಣು ಮಕ್ಕಳು



ವಯಸ್ಕರಾಗುವ ಮೊದಲೇ ಆರಂಭವಾಗುತ್ತದೆ.

15–19ರ ವಯೋಗುಂಪಿನಲ್ಲಿರುವ 15 ಮಿಲಿಯನ್ ಹೆಣ್ಣು ಮಕ್ಕಳು ಬಲಾತ್ಕಾರದಿಂದ ಲೈಂಗಿಕ ದೌರ್ಜನ್ಯ ಅಥವಾ ಅತ್ಯಾಚಾರಕ್ಕೆ ಒಳಗಾಗಿರುತ್ತಾರೆ. ಅಮೆರಿಕದಲ್ಲಿ ಪದವಿ ಮಟ್ಟದ ಕೋರ್ಸುಗಳಲ್ಲಿ ದಾಖಲಾಗಿರುವ ಶೇಕಡಾ 23ರಷ್ಟು ಹೆಣ್ಣು ಮಕ್ಕಳು ತಾವು ಲೈಂಗಿಕ ಆಕ್ರಮಣಕ್ಕೆ ಒಳಗಾಗಿದ್ದೇವೆ ಎಂದರೆ ಯೂರೋಪಿಯನ್ ಯೂನಿಯನ್‌ನ ದೇಶಗಳಲ್ಲಿ 10ರಲ್ಲಿ ಒಬ್ಬರು ಅಂತರ್ಜಾಲದ ಮೂಲಕ ಅಥವಾ ನೇರ ಬೆದರಿಕೆಗಳ ರೂಪದಲ್ಲಿ ದೌರ್ಜನ್ಯವನ್ನು ಎದುರಿಸಿದ್ದೇವೆ ಎಂದು ತಿಳಿಸಿದ್ದಾರೆ. ಆಫ್ರಿಕಾದಲ್ಲಿ ಶೇಕಡಾ 44ರಷ್ಟು ಮಹಿಳೆಯರು ಲಿಂಗಾಧಾರಿತ ದೌರ್ಜನ್ಯವನ್ನು ಎದುರಿಸುತ್ತಾರೆ ಎಂದು ಇತರ ಅಧ್ಯಯನಗಳು ತಿಳಿಸುತ್ತವೆ. ಆಸ್ಟ್ರೇಲಿಯಾದ ಮಹಿಳೆಯರನ್ನು ಕುರಿತ ಅಧ್ಯಯನವೊಂದರ ಪ್ರಕಾರ 40% ಮಹಿಳೆಯರು ತಮ್ಮ 15ನೇ ವಯಸ್ಸಿನಿಂದಲೇ ಉದ್ಯೋಗ ಸ್ಥಳಗಳಲ್ಲಿ ಲೈಂಗಿಕ ದೌರ್ಜನ್ಯಕ್ಕೆ ಒಳಗಾಗಿದ್ದಾರೆ.

ಜಾಗತಿಕ ಮಟ್ಟದಲ್ಲಿ ಮಹಿಳೆಯರ ವಿರುದ್ಧ ನಡೆಯುತ್ತಿರುವ ದೌರ್ಜನ್ಯದ ಪರಿ ಹಾಗೂ ಪ್ರಮಾಣಗಳನ್ನು ಗಮನಿಸಿದಾಗ ಇದರ ವಿರುದ್ಧದ ಹೋರಾಟ ಯಾವುದೇ ಒಂದು ದಿನಕ್ಕೆ ಅಥವಾ ಕೆಲ ದಿನಗಳಿಗೆ ಸೀಮಿತವಾದರೆ ಸಾಲದು, ಅದು ಪ್ರತಿ ದಿನವೂ ಎಲ್ಲ ಸಮಾಜಗಳಲ್ಲೂ ನಡೆಯಬೇಕು ಎಂಬ ಗಂಭೀರ ಸತ್ಯ ನಮ್ಮ ಮುಂದೆ ಎದ್ದು ನಿಲ್ಲುತ್ತದೆ. ಮಹಿಳಾ ವಿರೋಧಿ ದೌರ್ಜನ್ಯ ಜಾತಿ, ಧರ್ಮ, ವರ್ಗ, ದೇಶ, ಜನಾಂಗ–ಇವೆಲ್ಲವನ್ನೂ ಮೀರಿ ನಿಂತಿದೆ. ಆದ್ದರಿಂದ ಇದನ್ನು ಎದುರಿಸುತ್ತಿರು ವವರ ಜೊತೆ ನಿಂತು ಅವರವರ ಸಾಮಾಜಿಕ–ಆರ್ಥಿಕ–ಸಾಂಸ್ಕೃತಿಕ–ಭೌತಿಕ ಪರಿಸ್ಥಿತಿಗಳನ್ನು ಗಣನೆಗೆ ತೆಗೆದುಕೊಂಡು ಆ ದೌರ್ಜನ್ಯ ಸ್ಥಾನಗಳಿಂದ ಹೊರಬಂದು ಸುರಕ್ಷಿತ ಸ್ಥಳಗಳಲ್ಲಿ ಬದುಕುವಂಥ ಪರಿಸರವನ್ನು ಸೃಷ್ಟಿಸುವಂಥ, ಎಲ್ಲ ಮಹಿಳೆಯರ ತಾಂತ್ರಿಕ ಬಲವರ್ಧನೆ ಮಾಡುವಂಥ ವ್ಯವಸ್ಥೆಯನ್ನು ಸೃಷ್ಟಿಸುವತ್ತ ರಾಜ್ಯಗಳು ಮತ್ತು ನಾಗರಿಕ ಸಮಾಜ ಗಮನ ಹರಿಸಬೇಕು, ಕಾರ್ಯಪ್ರವೃತ್ತವಾಗಬೇಕು.

ಸಬ್ ಜೂನಿಯರ್ ಕಬಡ್ಡಿ ಚಾಂಪಿಯನ್‌ಶಿಪ್‌ಗೆ ಕ್ರೀಡಾಪಟುಗಳ ಆಯ್ಕೆ


ಮೈಸೂರು,ನ.23–ಉಡುಪಿ ಜಿಲ್ಲೆ ಹೆಬ್ರಿ ತಾಲೂಕಿನ ಶಿವಪುರದಲ್ಲಿ ಡಿ.9ರಿಂದ 12ರವರೆಗೂ ನಡೆಯುವ ರಾಜ್ಯ ಸಬ್ ಜೂನಿಯರ್ ಕಬಡ್ಡಿ ಚಾಂಪಿಯನ್‌ಶಿಪ್‌ಗೆ ಮೈಸೂರು ವಿವಿ ಒಳ ಕ್ರೀಡಾಂಗಣದಲ್ಲಿ ಭಾನುವಾರ(ನ.27) ಕ್ರೀಡಾ ಪಟುಗಳ ಆಯ್ಕೆ ಪ್ರಕ್ರಿಯೆ ನಡೆಯಲಿದೆ ಎಂದು ಮೈಸೂರು ಜಿಲ್ಲಾ ಅಮೆಚೂರ್ ಕಬ್ಬಡಿ ಅಸೋಸಿಯೇಷನ್ ತಿಳಿಸಿದೆ. ಮಾಹಿತಿಗಾಗಿ 9591933699, 9945508888.

ನ.27, ಉದ್ಯೋಗ ಮೇಳ

ಮೈಸೂರು, ನ.23–ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಸೋಷಿಯಲ್ ವೆಲ್ಫೇರ್ ವತಿಯಿಂದ ಭಾನುವಾರ(ನ.27) ನಗರದ ಮರಿಮಲ್ಲಪ್ಪ ಪಿಯು ಕಾಲೇಜಿನಲ್ಲಿ ಉದ್ಯೋಗ ಮೇಳ ಆಯೋಜಿಸಲಾಗಿದೆ. ಹೆಚ್ಚಿನ ಮಾಹಿತಿಗೆ 9449923880, 9448628480 ಸಂಪರ್ಕಿಸಿ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಬಿಜೆಪಿಯಲ್ಲಿ ಭಿನ್ನಮತವಿಲ್ಲ: ಸಿಎಂ

ಬೆಂಗಳೂರು,ನ.23(ಕೆಎಂಶಿ)–ಬಿಜೆಪಿಯಲ್ಲಿ ಭಿನ್ನಮತವಿಲ್ಲ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸ್ಪಷ್ಟಪಡಿಸಿದ್ದಾರೆ.



ವರಿಷ್ಠರ ಮಾರ್ಗದರ್ಶನ, ರಾಜ್ಯ ನಾಯಕರಲ್ಲಿರುವ ಒಗ್ಗಟ್ಟಿನಿಂದ 2023ರ ವಿಧಾನಸಭಾ ಚುನಾವಣೆಯಲ್ಲಿ ಮತ್ತೆ ನಾವೇ ಅಧಿಕಾರದ ಚುಕ್ಕಾಣಿ ಹಿಡಿಯುತ್ತೇವೆ ಎಂಬ ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಾಂಗ್ರೆಸ್ ನಾಯಕರು ಹಣ, ಹೆಂಡ ಕೊಟ್ಟು ಅಧಿಕಾರಕ್ಕೆ ಬರಬಹುದೆಂಬ ಭ್ರಮೆಯಲ್ಲಿದ್ದಾರೆ. ಇದೇ ಭ್ರಮೆಯಲ್ಲಿ ಸರ್ಕಾರದ ವಿರುದ್ಧ ಆರೋಪಗಳ ಸುರಿಮಳೆಗೈದು ಜನರ ದಿಕ್ಕುತಪ್ಪಿಸುವ ಕೆಲಸ ಮಾಡುತ್ತಿದ್ದಾರೆ. ಕಾಂಗ್ರೆಸ್‌ನವರ ತಂತ್ರಗಾರಿಕೆ ಚುನಾವಣೆಯಲ್ಲಿ ನಡೆಯುವುದಿಲ್ಲ. ನಾವು ಮತ್ತೆ 140ಕ್ಕೂ ಹೆಚ್ಚು ಸ್ಥಾನ ಗಳಿಸಿ ಅಧಿಕಾರದ ಚುಕ್ಕಾಣಿ ಹಿಡಿಯುತ್ತೇವೆ. ನಮ್ಮಲ್ಲಿ ಆಂತರಿಕ ಕಲಹ ಇದೆ ಎಂದು ಬಿಂಬಿಸುವ ಕೆಲಸ ನಡೆದಿದೆ. ನಮ್ಮಲ್ಲಿ ಏನಿದ್ದರೂ ಮುಕ್ತ ಚರ್ಚೆ, ಹಿಂದೆ ಮುಂದೆ ಹೇಳುವ ಅಭ್ಯಾಸವಿಲ್ಲ. ದೆಹಲಿ ನಾಯಕರ ಮಾರ್ಗದರ್ಶನದಿಂದ ನಮ್ಮ ಸಂಘಟನೆ ಒಗ್ಗಟ್ಟಿನಿಂದ ನಡೆಯುತ್ತಿದೆ. ಇದೇ ನಮಗೆ ಬಲ. ನಮ್ಮ ನಾಯಕ ಮಾಜಿ ಸಿಎಂ ಯಡಿಯೂರಪ್ಪ ಜೊತೆ ಗೂಡಿ ಸಂಕಲ್ಪಯಾತ್ರೆ ಯಶಸ್ವಿಯಾಗಿ ನಡೆಸುತ್ತಿದ್ದೇವೆ. ಇದರಲ್ಲಿ ಎಲ್ಲ ನಾಯಕರು ಸ್ಥಳೀಯವಾಗಿ ಭಾಗವಹಿಸುತ್ತಿದ್ದಾರೆ. ಸಣ್ಣಪುಟ್ಟ ಸಮಸ್ಯೆಗಳಿದ್ದರೂ, ಅದನ್ನು ಬದಿಗಿರಿಸಿ, ಪಕ್ಷಕ್ಕಾಗಿ ಹಗಲು ಇರುಳು ಎನ್ನದೇ ದುಡಿಯುತ್ತಿದ್ದಾರೆ.

ಕೇಂದ್ರ ಮತ್ತು ರಾಜ್ಯ ಸರ್ಕಾರದ ಸಾಧನೆಗಳನ್ನು ಜನತೆಯ ಮುಂದಿಡುವ ಕೆಲಸ ನಮ್ಮ ಕಾರ್ಯಕರ್ತರಿಂದಲೇ ನಡೆಯುತ್ತಿದೆ. ಕಾಂಗ್ರೆಸ್‌ನಲ್ಲಿ ಎಲ್ಲ ನಾಯಕರು ಒಗ್ಗಟ್ಟಾಗಿರುವಂತೆ ಕಾಣುತ್ತಿದೆ. ಆದರೆ ಒಬ್ಬರ ಹಿಂದೆ ಒಬ್ಬರು ಅಧಿಕಾರಕ್ಕಾಗಿ ಕಾಲೆಳೆಯುವ ಕೆಲಸ ನಿರಂತರವಾಗಿ ನಡೆದಿದೆ. ಅಧಿಕಾರಕ್ಕೆ ಬರದೇ ಸಿಎಂ ಸ್ಥಾನಕ್ಕೆ ಈಗಲೇ ಕಚ್ಚಾಟ ಆರಂಭಿಸಿದ್ದಾರೆ. ಆದರೆ ನಮ್ಮಲ್ಲಿ ಅಂತಹ ಯಾವುದೇ ಪ್ರಸಂಗಗಳಿಲ್ಲ ನಮಗೆ ಗಟ್ಟಿತನದ ವರಿಷ್ಠರಿದ್ದಾರೆ ಎಂದರು.

ಇಂದು ಕುಂಬಾರಕೊಪ್ಪಲಲ್ಲಿ ಶಾಸಕ ನಾಗೇಂದ್ರ ಪಾದಯಾತ್ರೆ

ಮೈಸೂರು, ನ.23– ಮೈಸೂರಿನ ಚಾಮರಾಜ ಕ್ಷೇತ್ರದ ಶಾಸಕ ಎಲ್.ನಾಗೇಂದ್ರ ನಾಳೆ(ನ.24) ಕುಂಬಾರಕೊಪ್ಪಲು ವಾರ್ಡ್(ಸಂ.5)ನಲ್ಲಿ ಪಾದಯಾತ್ರೆ ಹಮ್ಮಿಕೊಂಡಿದ್ದಾರೆ. ಶ್ರೀ ಆದಿಶಕ್ತಿ ದೇವಸ್ಥಾನದ ಬಳಿಯಿಂದ ಬೆಳಗ್ಗೆ 7ಕ್ಕೆ ಸ್ಥಳೀಯ ಕಾರ್ಪೋರೇಟರ್ ಉಷಾ ಕುಮಾರ್ ಅವರೊಂದಿಗೆ ಪಾದಯಾತ್ರೆ ಆರಂಭಿಸಿ, ಮಾರಿಗುಡಿ ರಸ್ತೆ, ಮೊದಲ ಬಸ್ ನಿಲ್ದಾಣ, 2ನೇ ಮುಖ್ಯ ರಸ್ತೆ, 60 ಅಡಿ ರಸ್ತೆ, ಮೇಗಲ ರಾಮಮಂದಿರ, ಕಾವೇರಿ ಬಡಾವಣೆ, ಮಹದೇಶ್ವರ ದೇವಸ್ಥಾನದ ರಸ್ತೆಯಲ್ಲಿ ಸಂಚರಿಸಿ ಸಾರ್ವಜನಿಕರ ಕುಂದು ಕೊರತೆ ಆಲಿಸಿ, ಸಮಸ್ಯೆ ಪರಿಹಾರಕ್ಕೆ ಸ್ಥಳದಲ್ಲೇ ಕ್ರಮ ವಹಿಸಲಿದ್ದಾರೆ. ಸ್ಥಳೀಯ ಮುಖಂಡರು, ನಗರ ಪಾಲಿಕೆ ಸೇರಿದಂತೆ ವಿವಿಧ ಇಲಾಖೆ ಅಧಿಕಾರಿಗಳು ಪಾದಯಾತ್ರೆಯಲ್ಲಿ ಭಾಗಿಯಾಗಲಿದ್ದಾರೆ ಎಂದು ಶಾಸಕ ಎಲ್.ನಾಗೇಂದ್ರ ಅವರ ಆಪ್ತ ಸಹಾಯಕ ಎಂ.ಎಸ್. ಪ್ರವೀಣ್‌ಕುಮಾರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಶಾಂತವೇರಿ ಗೋಪಾಲಗೌಡರು ರಾಜಕಾರಣಿ ಮಾತ್ರವಲ್ಲ, ರಾಜಕೀಯ ಮುತ್ಸದ್ದಿ

● ವಿಶ್ರಾಂತ ಕುಲಪತಿ ಪ್ರೊ.ಚಿದಾನಂದಗೌಡ ಅಭಿಮತ ● ಶಾಂತವೇರಿ ಗೋಪಾಲಗೌಡರ ಶತಮಾನೋತ್ಸವ ಸಮಾರಂಭ

ಮೈಸೂರು, ನ.23(ಎಂಟಿವೈ)– ನಾಡುಕಂಡ ಧೀಮಂತ ನಾಯಕರಲ್ಲಿ ಶಾಂತವೇರಿ ಗೋಪಾಲ ಗೌಡರು ಮುಂಚೂಣಿಯಲ್ಲಿದ್ದು, ಅವರು ಕೇವಲ ರಾಜಕಾರಣಿಯಾಗದೆ ರಾಜಕೀಯ ಮುತ್ಸದ್ದಿಯಾಗಿದ್ದರು ಎಂದು ವಿಶ್ರಾಂತ ಕುಲಪತಿ ಪ್ರೊ.ಕೆ. ಚಿದಾನಂದಗೌಡ ಅಭಿಪ್ರಾಯಪಟ್ಟಿದ್ದಾರೆ..

ಮೈಸೂರಿನ ಅಗ್ರಹಾರ ನಟರಾಜ ಸಭಾ ಭವನದಲ್ಲಿ ಬುಧವಾರ ಶ್ರೀನಟರಾಜ ಪ್ರತಿಷ್ಠಾನ, ಕನ್ನಡ ಸಾಹಿತ್ಯ ಪರಿಷತ್ ನಗರ ಘಟಕ, ಕನ್ನಡ ಸಾಹಿತ್ಯ ಕಲಾಕೂಟ ಸಂಯುಕ್ತಾಶ್ರಯದಲ್ಲಿ ನಡೆದ ಹಿರಿಯ ಸಮಾಜವಾದಿ ಶಾಂತವೇರಿ ಗೋಪಾಲಗೌಡ ಶತಮಾನೋತ್ಸವ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ರಾಜಕಾರಣದಲ್ಲಿ ರಾಜಕಾರಣಿ ಮತ್ತು ರಾಷ್ಟ್ರಕಾರಣಿ ಎಂಬ ಎರಡು ವಿಧಗಳಿವೆ. ರಾಜಕಾರಣಿ ಮುಂದಿನ ಚುನಾವಣೆ ಬಗ್ಗೆ ಮಾತ್ರ ಚಿಂತಿಸುತ್ತಾರೆ. ರಾಷ್ಟ್ರಕಾರಣಿ ಮುಂದಿನ ಜನಾಂಗ, ದೇಶದ ಬಗ್ಗೆ ಆಲೋಚಿಸುತ್ತಾರೆ. ಈ ಸಾಲಿನ ಅಗ್ರಪಂಕ್ತಿಯ ನಾಯಕ ಗೋಪಾಲಗೌಡರಾಗಿದ್ದರು. ಒಮ್ಮೊಮ್ಮೆ ಹೂವಿನಂತೆ ಮೃದು ಸ್ವಭಾವ ಮತ್ತೊಮ್ಮೆ ವಜ್ರದಂತೆ ಕಠಿಣ ಸ್ವರೂಪ ತಾಳುತ್ತಿದ್ದರು ಎಂದರು.

ಕೆಂಗಲ್ ಹನುಮಂತಯ್ಯ ಅವರು ವಿಧಾನಸೌಧ ದ್ವಾರದಲ್ಲಿ ಸರ್ಕಾರಿ ಕೆಲಸ ದೇವರ ಕೆಲಸ ಎಂದು ಬರೆಸಿದ್ದಾರೆ. ಇದಕ್ಕೆ ಆಕ್ಷೇಪ ಎತ್ತಿದ ಗೋಪಾಲಗೌಡ ಅವರು, ಸರ್ಕಾರಿ ಕೆಲಸ ಶ್ರೀಸಾಮಾನ್ಯರ ಕೆಲಸ ಎಂದಾಗಬೇಕೆಂದು ಸಲಹೆ ನೀಡಿದ್ದರು. ಬದುಕಿನುದ್ದಕ್ಕೂ ಬಡವರು, ರೈತರು, ಕಾರ್ಮಿಕರ ಏಳ್ಗೆಗಾಗಿ ದುಡಿದರು. ಅಖಂಡ ಕರ್ನಾಟಕದ ಕನಸು ಕಂಡರು. ಹರಿದು ಹಂಚಿಹೋಗಿರುವ ಪ್ರದೇಶಗಳನ್ನು ಒಗ್ಗೂಡಿಸಿದಾಗ ಮಾತ್ರ ಕರ್ನಾಟಕ ಬೆಳೆಯಲು ಸಾಧ್ಯ ಎನ್ನುತ್ತಿದ್ದರು. ಆಡಳಿತದಲ್ಲಿ ಕನ್ನಡ ಭಾಷೆ ಜಾರಿಗೆ ತಂದಾಗ ಅದರಲ್ಲಿ ಲೋಪಗಳನ್ನು ವಿವರಿಸಿದ್ದರು. ಶಾಂತವೇರಿ ಗೋಪಾಲಗೌಡರು ಸ್ಟೇಟ್ಸ್‌ಮನ್. ಮೌಲ್ಯಧಾರಿತ ರಾಜಕೀಯ ಪ್ರಜ್ಞೆಗೆ ಹೆಸರಾದವರು. ಇವರ ಹಾದಿಯಲ್ಲಿ ಇಂದಿನ ರಾಜಕಾರಣಿಗಳು ಮುನ್ನಡೆಯಬೇಕು. ಅನಾರೋಗ್ಯದಿಂದ ಗೌಡರು 49ನೇ ವಯಸ್ಸಿಗೆ ನಿಧನರಾದರು. ಇನ್ನಷ್ಟು ಕಾಲ ಬದುಕಿದ್ದರೆ ನಾಡಿನ ಅಭಿವೃದ್ಧಿಗೆ ಬಹು ಅಮೂಲ್ಯ ಕಾಣಿಕೆ ನೀಡುತ್ತಿದ್ದರು ಎಂದು ಅಭಿಪ್ರಾಯಪಟ್ಟರು.



ಮೈಸೂರಲ್ಲೇ ಕನ್ನಡ ಚಳವಳಿ ಆರಂಭ: ಸನ್ಮಾನ ಸ್ವೀಕರಿಸಿದ ಮಾತನಾಡಿದ ಹಿರಿಯ ಸಮಾಜವಾದಿ, ಮಾಜಿ ಶಾಸಕ ಕೋಣಂದೂರು ಲಿಂಗಪ್ಪ, ಕನ್ನಡದ ಚಳವಳಿ ಆರಂಭವಾಗಿದ್ದು ಮೈಸೂರಲ್ಲಿ. ಗೋಪಾಲ ಗೌಡರನ್ನು ಭೇಟಿ ಮಾಡಲು ಮೊದಲ ಬಾರಿಗೆ ಬೆಂಗಳೂರಿಗೆ ಹೋಗಿದ್ದೆ. ನಮ್ಮ ರಾಜಧಾನಿಯಲ್ಲಿ ಕನ್ನಡಿಗರಿಗಿಂತ ತಮಿಳರ ಪ್ರಭಾವ ಹೆಚ್ಚಾಗಿತ್ತು. ವಿಳಾಸ ಕೇಳಿದರೆ ಹೇಳುವವರಿಲ್ಲದಂತಾಗಿತ್ತು. ಈ ವಿಚಾರವನ್ನು ಗುರುಗಳಾದ ಗೋಪಾಲಗೌಡರ ಮುಂದೆ ಪ್ರಸ್ತಾಪಿಸಿ ಚಳವಳಿ ನಡೆಸಲು ಚಿಂತನೆ ನಡೆಸಿದ್ದೆವು. ಇದರ ಫಲವಾಗಿ ಮೈಸೂರಲ್ಲಿ ಪೂರ್ಣಚಂದ್ರ ತೇಜಸ್ವಿ, ಸುಂದರೇಶ್, ಕಡಿದಾಳ ಶಾಮಣ್ಣ, ಐತಾಳ್ ಮುಂತಾದವರು ಸೇರಿಕೊಂಡು ಕನ್ನಡ ಯುವ ಜನ ಸಭಾ ಆರಂಭಿಸಿದೆವು. ಅಂಗಡಿಗಳಲ್ಲಿ ಅಳವಡಿಸಿದ್ದ ಇಂಗ್ಲಿಷ್ ಬೋರ್ಡ್ ತೆರವು ಮಾಡಿ ಕನ್ನಡದ ಫಲಕ ಅಳವಡಿಸುವಂತೆ ಒತ್ತಾಯಿಸಿದೆವು.

ಇಂಗ್ಲಿಷ್ ಬದಲು ರಾಜ್ಯಭಾಷೆಗೆ ಆದ್ಯತೆ: ಮಹಾರಾಜ ಕಾಲೇಜಿನಲ್ಲಿ ಅಖಿಲ ಭಾರತ ಇಂಗ್ಲಿಷ್ ಪ್ರಾಧ್ಯಾಪಕರ ಸಮ್ಮೇಳನ ಇತ್ತು. ದೇಶಕ್ಕೆ ಇಂಗ್ಲಿಷ್ ಬೇಡ ರಾಜ್ಯ ಭಾಷೆಬೇಕು ಎಂದು ಕರಪತ್ರ ಹಂಚಿದೆವು. ಕುವೆಂಪು ಕರಪತ್ರ ಹಂಚಲು ದುಡ್ಡು ಕೊಟ್ಟರು. ಈ ವಿಚಾರವನ್ನು ಗುರುಗಳಾದ ಪ್ರಭುಶಂಕರ ಅವರಿಗೆ ತಿಳಿಸಿದಾಗ ಸ್ಟಾಫ್ ರೂಂಗೆ ಕರೆದೊಯ್ದು ಲಿಂಗಪ್ಪನಿಗೆ ಕುವೆಂಪು ದುಡ್ಡು ಕೊಟ್ಟಿದ್ದಾರೆಂದು ಜೋರಾಗಿ ಕೂಗಿದರು. ದುಂದುವೆಚ್ಚ ಮಾಡದ ಕುವೆಂಪು ಅವರ ದುಡ್ಡು ಕೊಟ್ಟಿದ್ದು ದೊಡ್ಡ ವಿಷಯವಾಗಿತ್ತು. ರಾಜ್ಯಭಾಷೆ ಬೇಕೆಂಬ ತಮ್ಮ ಅಭಿಪ್ರಾಯವನ್ನು ಸಮ್ಮೇಳನದ ಅಧ್ಯಕ್ಷರು ಒಪ್ಪಿಕೊಂಡರು ಎಂದು ಸ್ಮರಿಸಿದರು

ಹೊಸಮಠದ ಚಿದಾನಂದ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಹಿರಿಯ ಸಮಾಜವಾದಿ ಕೋಣಂದೂರು ಲಿಂಗಪ್ಪ ಅವರನ್ನು ಸನ್ಮಾನಿಸಲಾಯಿತು. ಶ್ರೀನಟರಾಜ ಪ್ರತಿಷ್ಠಾನದ ವಿಶೇಷಾಧಿಕಾರಿ ಡಾ.ಎಸ್.ಶಿವರಾಜಪ್ಪ ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಶಾಂತವೇರಿ ಗೋಪಾಲಗೌಡ ಸಮಾಜವಾದಿ ಪ್ರತಿಷ್ಠಾನದ ರಾಮಮನೋಹರ ಶಾಂತವೇರಿ, ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ.ಹೆಳವರಹುಂಡಿ ಸಿದ್ದಪ್ಪ, ಕಸಾಪ ನಗರ ಅಧ್ಯಕ್ಷ ಕೆ.ಎಸ್.ಶಿವರಾಮು ಇದ್ದರು. ಎಂ.ಚಂದ್ರಶೇಖರ್ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಗಾಯಕಿ ಚೂಡಾಮಣಿ ವಚನ ಹಾಡಿದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ತಕ್ಷಣ ಬೇಕಾಗಿದ್ದಾರೆ

ಸದ್ವಿದ್ಯಾ ಕಾಲೇಜು ಸರಸ್ವತಿಪುರಂ, ಕೆ.ಜಿ.ಕೊಪ್ಪಲು ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ: SSLC, ಸಂಬಳ: 15,500/–, ಊಟ, ESI ಮತ್ತು PF ಸೌಲಭ್ಯ ಇರುತ್ತದೆ. ಸಂಪರ್ಕಿಸಬೇಕಾದ ಸಂಖ್ಯೆಗಳು:

9620777819 / 9620667819

LAND FOR SALE

6.5 acres of Land Situated at Indval Village, Near Garqeshwari, 50 Meters from Main Road, Mysore - T.Narasipura Road, Near Irrigation Cannel, Contact:

9880068630
7406666286

ಬೇಕಾಗಿದ್ದಾರೆ

ಬೆಂಗಳೂರಿನಲ್ಲಿರುವ ಸೌಂಡ್ ಸಿಸ್ಟಮ್ ಮತ್ತು ಲೈಟಿಂಗ್ ಕಂಪನಿಯಲ್ಲಿ ಕೆಲಸ ಮಾಡಲು ಈ ಕೆಳಕಂಡ ಅನುಭವವಿರುವ ಕೆಲಸಗಾರರು ಬೇಕಾಗಿದ್ದಾರೆ. 1) ಡ್ರೈವರ್‌ಗಳು (HMV ಬ್ಯಾಡ್ಜ್) Ashok Layland (Tata Ace) 15,000/-, 2) ನೆಲಮಂಗಲ ಹತ್ತಿರ ತೋಟದಲ್ಲಿ ಕೆಲಸ ಮಾಡಲು ಚಿಕ್ಕ ಸಂಸಾರ (ದಂಪತಿ) ಬೇಕಾಗಿದ್ದಾರೆ. ಸಂಬಳ: 13,000/– (ಉಚಿತ ವಸತಿ)

9845026220

ಮನೆ ಕೆಲಸಕ್ಕೆ ಬೇಕಾಗಿದ್ದಾರೆ

ಸ್ಥಳ: ವಿಜಯನಗರ 4ನೇ ಹಂತ

9731149010

ಮಂಟಪ ಮನೆ



ನಮ್ಮಲ್ಲಿ ಬೀಟೆ, ಹಲಸು ಮರಗಳಿಂದ ತಯಾರಾದ ಮಂದಾಸನ, ಪೂಜಾ ಮಂಟಪಗಳು ಸುಲಭ ಕಂತುಗಳಲ್ಲಿ ದೊರೆಯುತ್ತದೆ. ಶ್ರೀನಗರ, ಮೈಸೂರು

9448207634
9036742526

ರೈಲಿನಲ್ಲಿ ಕಾಶಿ ಯಾತ್ರೆ

10–03–2023 ರಿಂದ ರೈಲಿನಲ್ಲಿ 10 ದಿನಗಳ ಪ್ರವಾಸ. ಸ್ಥಳಗಳು: ಕಾಶಿ, ಸಾರನಾಥ್, ಅಯೋಧ್ಯೆ, ಅಲಹಾಬಾದ್, ಸೀತಾಮುಡಿ, ಗಯಾ, ಬುದ್ಧಗಯಾ ಇತ್ಯಾದಿ. ಊಟ, ರೂಂ, ರೈಲಿನ ಟಿಕೆಟ್, ಬಸ್ ಎಲ್ಲಾ ಸೇರಿರುತ್ತದೆ. ಒಂದು ಸೀಟಿಗೆ ರೂ. 11,000. ಕರ್ನಾಟಕ ಸರ್ಕಾರದಿಂದ ಕಾಶಿ ಯಾತ್ರೆಗೆ ರೂ. 5000 ಅನುದಾನ ದೊರೆಯುತ್ತದೆ. ಸಂಪರ್ಕಿಸಿ: ಮಾರ್ವೆಲ್ ಟೂರ್ಸ್ & ಟ್ರಾವೆಲ್ಸ್, ನಜರ್‌ಬಾದ್, ಮೈಸೂರು

9342118682, 9449128682

Walk in for TELECALLER & SUPERVISOR

HONDA POINT
Lakshmi Arcade Contour Road, Gokulam, Mysore-02
Contact: 97399-49491

ಬೇಕಾಗಿದ್ದಾರೆ

ನೇಗಿಲಯೋಗಿ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿಯಮಿತ (ರಿ), ನಂ.122, ಆದಿಚುಂಚನಗಿರಿ ರಸ್ತೆ, 3ನೇ ತಿರುವು, ಜಯನಗರ ರೈಲ್ವೆ ಗೇಟ್ ರಸ್ತೆ, ಕೆ.ಜಿ.ಕೊಪ್ಪಲು, ಮೈಸೂರು – 570014

ಆಫೀಸ್ ಅಸಿಸ್ಟೆಂಟ್ –1
ವಿದ್ಯಾರ್ಹತೆ : ಎಸ್.ಎಸ್.ಎಲ್.ಸಿ. ಪಾಸ್ / ಫೇಲ್

9845621391
9900629393

ಬೇಕಾಗಿದ್ದಾರೆ

ನೇಗಿಲಯೋಗಿ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿಯಮಿತ (ರಿ), ನಂ.122, ಆದಿಚುಂಚನಗಿರಿ ರಸ್ತೆ, 3ನೇ ತಿರುವು, ಜಯನಗರ ರೈಲ್ವೆ ಗೇಟ್ ರಸ್ತೆ, ಕೆ.ಜಿ.ಕೊಪ್ಪಲು, ಮೈಸೂರು – 570014

ಮುಖ್ಯ ಕಾರ್ಯನಿರ್ವಹಣಾಧಿಕಾರಿ,
ವಿದ್ಯಾರ್ಹತೆ: ಬಿಕಾಂ / M.Com, ಟ್ಯಾಲಿ, DTP, 3 ವರ್ಷಗಳ ಅನುಭವ. ಸಂಪರ್ಕಿಸಿ:

9845621391
9900629393

ಉದ್ಯೋಗ ಅವಕಾಶ

ಬಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th, SSLC, PUC, ITI, Any Degree Pass / Fail ಆದ ಯುವಕ / ಯುವತಿಯರು ಇಂದೇ ಬೇಕಾಗಿದ್ದಾರೆ. ESI/PF ನೊಂದಿಗೆ ಊಟ, ವಸತಿಯಿರುತ್ತದೆ. ಸಂಬಳ+ಓಟಿ, 15,200–86000.

9740733021 / 9535028750

ಶ್ರೀ ಗೌರಿಶಂಕರ (S.G.S) ಟ್ರಾವೆಲ್ಸ್

10–12–22 (4 ದಿನ) ಶಿರಡಿ, ಬಾಂಬೆ, ತ್ರ್ಯಂಬಕೇಶ್ವರ, ಘೃಶ್ಣೇಶ್ವರ, ಭೀಮಶಂಕರ ಇತ್ಯಾದಿ
18–12–22 (1 ದಿನ) : ಕೋಟಿಲಿಂಗ, ಘಾಟಿ ಸುಬ್ರಹ್ಮಣ್ಯ, ಚಿಕ್ಕ ತಿರುಪತಿ
24–12–22 (6 ದಿನ) : ಗುರುವಾಯೂರು, ಮುನಾರ್ ತ್ರಿವೇಂಡಂ, ಕೊಚ್ಚಿನ್ ಇತ್ಯಾದಿ
ವಿಮಾನ / ಬಸ್ / ರೂಂ / ಊಟ

9620002114

ನಿರುದ್ಯೋಗಿಗಳಿಗೊಂದು ಸುವರ್ಣಾವಕಾಶ

ಮನೆಯಲ್ಲೇ ಕುಳಿತು ಟಾರ್ಗೆಟ್ ಇಲ್ಲದೆ ಬರವಣಿಗೆ ಮೂಲಕ 9 ರಿಂದ 30 ಸಾವಿರದವರೆಗೆ ಹಣಗಳಿಸುವ ಸುವರ್ಣಾವಕಾಶ. ಆಸಕ್ತರು ಸಂಪರ್ಕಿಸಿ:

7676844160
6361056646

ATTENTION

Running Boutique is for (Sale) Takeover in main Road of Kuvempunagar area, Interested may Contact:

9901239437

HOME APPLIANCES SERVICE

ಫ್ರಿಡ್ಜ್, ವಾಷಿಂಗ್ ಮೆಶೀನ್, ಮೈಕ್ರೋ ವೋವೆನ್, LED, LCD, AC Sales & Service

Contact: Srinivas
9379699229

ಕೆಲಸ ಮಾಡಿಕೊಡಲಾಗುತ್ತದೆ

ವಾಸ್ತು ಪ್ರಕಾರ ಮನೆ ಕಟ್ಟಿಕೊಡಲಾಗುತ್ತದೆ ಮತ್ತು ಹಳೆ ಮನೆ ಆಲ್ಟ್ರೇಷನ್ ಮಾಡಿಕೊಡಲಾಗುತ್ತದೆ. ಸಿವಿಲ್ ವರ್ಕ್ A to Z ಮಾಡಿಕೊಡಲಾಗುತ್ತದೆ

9880813586

WANTED

R.K. Novelties Fancy Store Wholesale Shop Need Salesman only for Mysore

7259752180

ತಕ್ಷಣ ಬೇಕಾಗಿದ್ದಾರೆ

ಮೈಸೂರಿನ ಮೇಟಗಳ್ಳಿ ಕೈಗಾರಿಕಾ ಪ್ರದೇಶದಲ್ಲಿರುವ ಕಾರ್ಖಾನೆಯೊಂದಕ್ಕೆ ತಕ್ಷಣ ಪುರುಷ ಕಾರ್ಮಿಕರು ಬೇಕಾಗಿದ್ದಾರೆ. ವಯೋಮಿತಿ 18 ರಿಂದ 40 ರವರೆಗೆ, ವಿದ್ಯಾರ್ಹತೆ:– ಕನಿಷ್ಟ ಓದು / ಬರಹ ಗೊತ್ತಿರಬೇಕು. ವೇತನ:– 12,818 + ESI & PF ಮತ್ತು ಉಚಿತ ಊಟದ ವ್ಯವಸ್ಥೆ. ಅಗತ್ಯ ದಾಖಲಾತಿಗಳು: ಆಧಾರ್‌ಕಾರ್ಡ್, ಬ್ಯಾಂಕ್ ಪಾಸ್ ಬುಕ್, ಫೋಟೋ–06, ಟಿಸಿ ಅಥವಾ ಮಾರ್ಕ್ಸ್ ಕಾರ್ಡ್ ಕಡ್ಡಾಯ.

8453408502 / 9108100117

ಸುವರ್ಣ ಯಾತ್ರ

2 ಜ್ಯೋತಿರ್ಲಿಂಗ ದರ್ಶನದೊಂದಿಗೆ ಮಧ್ಯಪ್ರದೇಶ ಪ್ರವಾಸ 4 ದಿನಗಳು 12/12/22, ಓಂಕಾರೇಶ್ವರ, ಮಹಾಕಾಳೇಶ್ವರ, ಮಂಡೋವ್ ಕೋಟೆ, ರಾಣಿ ಅಹಲ್ಯದೇವಿ ಕೋಟೆ, ಇಂದೋರ ಹಾಗೂ ಉಜ್ಜಯಿನಿ ಇತರೆ ಸ್ಥಳಗಳು.
4 ದಿನಗಳ ಪುರಿ ಭುವನೇಶ್ವರ ಹಾಗೂ ಕೊನಾರ್ಕ್ ಪ್ರವಾಸ 13/12/22. ಮಾ ಬಿರಾಜ ಶಕ್ತಿ ಪೀಠ, ಸೂರ್ಯ ದೇವಸ್ಥಾನ, ಸಾಕ್ಷಿ ಗೋಪಾಲ್ ಹಾಗೂ ಇತರೆ ಸ್ಥಳಗಳು 4 ದಿನಗಳು

9019462508

TV ಕೆಟ್ಟಿದೆಯೇ? LCD, LED TV

ಫ್ರಿಡ್ಜ್, ವಾಷಿಂಗ್ ಮೆಷಿನ್, Micro Oven Doorstep ಸರ್ವೀಸ್ ಮಾಡಿಕೊಡಲಾಗುತ್ತದೆ
ನುರಿತ ಸರ್ವೀಸ್ ಇಂಜಿನಿಯರ್‌ಗಳಿಂದ ಅತ್ಯಾಧುನಿಕ ಯಂತ್ರ ಬಳಸಿ LCD, LED ಪ್ಯಾನಲ್ ಬಾಂಡಿಂಗ್ ಕಡಿಮೆ ದರದಲ್ಲಿ ಮಾಡಿಕೊಡಲಾಗುತ್ತದೆ
ತೇಜು ಎಲೆಕ್ಟ್ರಾನಿಕ್ಸ್ ತ್ಯಾಗರಾಜ ರಸ್ತೆ, ಅಗ್ರಹಾರ

9342114069

ತಕ್ಷಣ ಬೇಕಾಗಿದ್ದಾರೆ


PART TIME /FULL TIME/ HOME -BASED
ecode GAS SAFE | All Taluk & Dist

EDUCATION ವಿದ್ಯಾರ್ಹತೆ	WORK TIME ಕೆಲಸದ ಸಮಯ	SALARY ಸಂಬಳ
SSLC,PUC any DEEGREE	4 HOURS 8 HOURS	8000/- UP TO 19000/-

ಮೊದಲು ಬಂದವರಿಗೆ ಆದ್ಯತೆ — ಗ್ಯಾಸ್ ಸೇಫ್ ಬಗ್ಗೆ ಮನೆಯಲ್ಲಿ ಕುಳಿತು ಗ್ರಾಹಕರಿಗೆ ಮಾಹಿತಿ ನೀಡುವ ಕೆಲಸ
Android ಸ್ಮಾರ್ಟ್ ಫೋನ್ ಹೊಂದಿರಬೇಕು

9986621226 / 7676779932

ಹೋಲ್‌ಸೇಲ್ ದರದಲ್ಲಿ



ಜೀವಂತ ನಾಟಿ ಕೋಳಿ ಕೆ.ಜಿ. ರೂ.230/–
ಕ್ಲೀನಿಂಗ್ 1 ಕೋಳಿಗೆ ರೂ.20/–
ಗೌಡ್ರು ನಾಟಿಕೋಳಿ ಅಂಗಡಿ
ನಂ.5/1, ಎನ್.ಆರ್. ಮೊಹಲ್ಲಾ, ಉದಯಗಿರಿ ಮುಖ್ಯ ರಸ್ತೆ, ದೊಡ್ಡಮ್ಮತಾಯಿ ಕಲ್ಯಾಣ ಮಂಟಪ ಪಕ್ಕ, ಬಿ.ಬ್ಲಾಕ್, ಗಣೇಶ್‌ನಗರ, ಮೈಸೂರು
ಸಮಯ: ಬೆಳಿಗ್ಗೆ 6 ರಿಂದ ರಾತ್ರಿ 9ರವರೆಗೆ

9448048576 / 9632378020

SITE FOR SALE

40x60 South Site Sale Old RT Nagar (ಶಾರದಾ ಸ್ಕೂಲ್ ಹಿಂಭಾಗ) (Call Only Buyers)

9880273834

SITE FOR SALE

40x60 South Face Site Sale Ravishankar Layout (ಕ್ರಿಸ್ಟ್ ಪಬ್ಲಿಕ್ ಸ್ಕೂಲ್ ಹಿಂಭಾಗ)

9880273834

SITES FOR SALE

30x40 Sites
Bank Loan upto 80%, Near Gurur Bus Stop, Ramabainagar, Mysore. DTCP approved (Corporation limits) 1.5 kms from J P Nagar Ring Road.

8660105902

SB GOLD COMPANY

ಗಿರವಿ ಚಿನ್ನಾಭರಣ ಖರೀದಿ
ನೀವು ಗಿರವಿ ಇಟ್ಟು ಬಿಡಿಸಿಕೊಳ್ಳಲಾಗದ ಚಿನ್ನ ಆಭರಣಗಳನ್ನು ನಾವೇ ಬಿಡಿಸಿ ಇಂದಿನ ಬೆಲೆಗೆ ತೆಗೆದುಕೊಂಡು ಉಳಿದ ಹಣ ತಕ್ಷಣಕೊಡುತ್ತೇವೆ. ಕೂಡಲೇ ಸಂಪರ್ಕಿಸಿ–(T&C) ಒಂದು ಗ್ರಾಂ ಚಿನ್ನಕ್ಕೆ 5100

9964522225

ಬೇಕಾಗಿದ್ದಾರೆ

ಮೈಸೂರಿನ ಪೆಟ್ರೋಲ್ ಬಂಕ್‌ನಲ್ಲಿ ಕೆಲಸಕ್ಕಾಗಿ ಪುರುಷರು / ಮಹಿಳೆಯರು ಬೇಕಾಗಿದ್ದಾರೆ. ಸಂಬಳ: 12,000/–

8892258814

ಹೊಸ ಚೀಟಿಗಳ ಪ್ರಾರಂಭ

ಸಿಐಐ ನರಸಿಂಹಸ್ವಾಮಿ ಚಿಟ್ಸ್ (ಕಂ) ಪ್ರೈಲಿ., ಮೈಸೂರು / ಹಾಸನ.

ಚೀಟಿ ಮೊತ್ತ	ತಿಂಗಳು	ತಿಂಗಳ ಕಂತು	3ನೇ ತಿಂಗಳಿಂದ
1 ಲಕ್ಷ	25	4000/–	3000/–
2 ಲಕ್ಷ	25	8000/–	6000/–
5 ಲಕ್ಷ	25	20,000/–	15,000/–
10 ಲಕ್ಷ	50	20,000/–	15,000/–
10 ಲಕ್ಷ	100	10,000/–	7,500/–
25 ಲಕ್ಷ	100	25,000/–	18,750/–

7892303484 / 8749077453

ಬೇಕಾಗಿದ್ದಾರೆ

ಪುರುಷರು ಮತ್ತು ಮಹಿಳೆಯರು ಹೆಲ್ಪರ್ ಕೆಲಸಕ್ಕೆ ಬೇಕಾಗಿದ್ದಾರೆ. ವಯೋಮಿತಿ: 18 – 40. ಇಲವಾಲ ಸುತ್ತಲಿನವರಿಗೆ ಮೊದಲ ಆದ್ಯತೆ.

Mob: 7829501760

WANTED

Service Engineer
B.E/ Diploma / ITI / Mechanical KENT RO Water Purifier Authorised Service Center / Home Appliances. Telecaller / Office Work - Female. Contact:

9900237315
9845963421

ತಕ್ಷಣ ಬೇಕಾಗಿದ್ದಾರೆ

ಮೈಸೂರು, ನಂಜನಗೂಡು, ಕಡಕೊಳ, ಹೆಬ್ಬಾಳ್, ಹೂಟಗಳ್ಳಿ, ಮೇಟಗಳ್ಳಿ ಮುಂತಾದ ಸ್ಥಳದಲ್ಲಿರುವ ಪ್ರಸಿದ್ಧ ಕಂಪನಿ, ಆಫೀಸ್ ಮತ್ತು ಶೋರೂಂಗಳಿಗೆ 7th, SSLC, PUC, ITI, Diploma, Any Degree Pass / Fail ಆದವರಿಗೆ Packing, Helper, Checking, Billing, Front Office, Telephone Attender ಮುಂತಾದ ಕೆಲಸಗಳಿಗೆ ಬೇಕಾಗಿದ್ದಾರೆ. ಸಂಬಳ: 14,000 – 39,000 (ESI+PF+OT) ಸೇರಿ. ಸಂಪರ್ಕಿಸಿ:

9353753194 / 9980630131

ಬೋಳು ತಲೆಯ ಸಮಸ್ಯೆಯೇ?



ಕಿಮೊತೆರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಸ್ವಾಭಾವಿಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.
SMART HAIR FIXING
574, 9th Cross, Anikethana Road, kuvempunagar, Mysuru
MYSURU 9611028523 MANGALORE 9343142258

ಉಚಿತ ತರಬೇತಿ

ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ. ತರಬೇತಿಗಾಗಿ:

7406375196, 9880548596

Sudarshan Saur



SOLAR WATER HEATER
ATTRACTIVE OFFER
ಸೇಲ್ಸ್&ಸರ್ವೀಸ್
10 ವರ್ಷಗಳ ಗ್ಯಾರಂಟಿ
Bajaj Finserv Available
SUNZONE SOLAR SYSTEM
Vishwamanava Double Road, Kuvempunagar, Mysuru

9845175443

COMPUTER PLAZA

DELL hp acer EPSON ASUS Canon Printers lenovo Brother Printer
* CONDITIONS APPLY

Call: 94480 49735
70222 57073

ಮನೆ ಮಾರಾಟಕ್ಕಿದೆ

ಶ್ರೀರಾಂಪುರ 2ನೇ ಹಂತ, 6 ವರ್ಷ ಹಳೆಯ Duplex House, 3 BHK, ಹುಣಸೇಮರ ಹತ್ತಿರ, ಕಾರ್ಪೋರೇಷನ್ ಖಾತಾ. Price: Rs. 1.15 Cr.

Mob: 9606347129

ಕೆಲಸಕ್ಕೆ ಬೇಕಾಗಿದ್ದಾರೆ

ಹೂಟಗಳ್ಳಿ ಕಾರ್ಖಾನೆಗಳಲ್ಲಿ ಕೆಲಸ ಮಾಡಲು ಪುರುಷ & ಮಹಿಳೆಯರು ಬೇಕಾಗಿದ್ದಾರೆ. ವಿದ್ಯಾರ್ಹತೆ ಬೇಕಾಗಿರುವುದಿಲ್ಲ. ಜೆ.ಪಿ.ನಗರ ಬಿಗ್ ಬಾಸ್ಕಟ್‌ನಲ್ಲಿ ಕೆಲಸ ಮಾಡಲು ಪುರುಷರು ಬೇಕಾಗಿದ್ದಾರೆ. ವಿದ್ಯಾರ್ಹತೆ: SSLC, ದ್ವಿಚಕ್ರ & ವಾಹನದ ದಾಖಲಾತಿಗಳು ಹೊಂದಿರಬೇಕು.

9036461347
8296280922

DOCUMENTS LOST

Sharath Kumar M.N., #4559, Sri Janardana Nilaya, Neelakantanagar, Nanjangud Town, Mysuru District, on 21-11-2022, I lost documents 1) SSLC Marks Card, (2) Diploma Marks Cards 1st, 2nd and 3rd year, (3) Diploma Certificates, (4) Bachelor Electrical Engineering marks cards of 2nd, 3rd and 4th year, (5) Bachelor Electrical Engineering certificates, (6) Brakes India IMS Certificate, (7) Brakes India ENMS Certificate, (8) Brakes India TS 16949 certificate, (9) Pan Card, (10) Aadhar Card, (11) Passport, (12) Boiler attendant certificate, (13) Election ID Card, (14) Electrical Supervisor Certificate, (15) Brakes India releiving letter. Finders contact:

Mob: 9880424686

ನೇಗಿಲಯೋಗಿ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿಯಮಿತ (ರಿ)

ನಂ. 122, ಆದಿಚುಂಚನಗಿರಿ ರಸ್ತೆ, 3ನೇ ತಿರುವು, ಜಯನಗರ ರೈಲ್ವೆ ಗೇಟ್ ರಸ್ತೆ, ಕೆ.ಜಿ. ಕೊಪ್ಪಲು, ಮೈಸೂರು–570 014

ಬೇಕಾಗಿದ್ದಾರೆ

1) ಕಂಪ್ಯೂಟರ್ ಆಪರೇಟರ್ ಕಂ ಡಿಸೈನರ್ – 1 ಹುದ್ದೆ
ವಿದ್ಯಾರ್ಹತೆ: ಪಿಯುಸಿ, ಕೋರಲ್ ಡ್ರಾ ಅಂಡ್ ಡಿಸೈನ್.

9845621391, 9900629393

HOUSE FOR SALE

20x30, ground floor & first floor, Chamundeshwari Railway Layout, near Vikranth Tyre Factory, KRS Road, Mysore.
Contact:

Mob: 9738884777

ನೇಗಿಲಯೋಗಿ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿಯಮಿತ (ರಿ)

ನಂ. 122, ಆದಿಚುಂಚನಗಿರಿ ರಸ್ತೆ, 3ನೇ ತಿರುವು, ಜಯನಗರ ರೈಲ್ವೆ ಗೇಟ್ ರಸ್ತೆ, ಕೆ.ಜಿ. ಕೊಪ್ಪಲು, ಮೈಸೂರು–570 014

ಬೇಕಾಗಿದ್ದಾರೆ

1) ಕಛೇರಿ ಸಹಾಯಕ – 1 ಹುದ್ದೆ
ವಿದ್ಯಾರ್ಹತೆ: SSLC PASS / FAIL

9845621391, 9900629393

WANTED

FEMALE FRONT OFFICE EXECUTIVE
Graduate with computer knowledge. Office timings: 9.30 am to 5.30 pm.

Mob: 8550002555
Email: frontofficemys@gmail.com

Wanted Teachers

Ideal School, Yelwala English Medium
PUC, D.Ed., B.A., B.Ed. B.Sc., B.Ed., MA in Kannada

9900593211, 9845353761

ಮನೆ ಭೋಗ್ಯಕ್ಕೆ ಬೇಕಾಗಿದೆ

ಸರಸ್ವತಿಪುರಂ, ಜಯನಗರ, ಚಾಮರಾಜಪುರಂ, ಕೃಷ್ಣಮೂರ್ತಿಪುರಂ ಹಾಗೂ ಲಕ್ಷ್ಮೀಪುರಂ ಸುತ್ತಮುತ್ತ ಮನೆ ಬೋಗ್ಯಕ್ಕೆ ಬೇಕಾಗಿದೆ. ಬ್ರೋಕರ್ ಎಕ್ಸ್‌ಕ್ಯೂಸ್.

9740976850

ತಕ್ಷಣ ಬೇಕಾಗಿದ್ದಾರೆ

ಮೈಸೂರು, ನಂಜನಗೂಡು, ಕಡಕೊಳ, ಹೆಬ್ಬಾಳ್, ಹೂಟಗಳ್ಳಿ, ಮೇಟಗಳ್ಳಿ ಮುಂತಾದ ಸ್ಥಳದಲ್ಲಿರುವ ಪ್ರಸಿದ್ಧ ಕಂಪನಿ, ಆಫೀಸ್ ಮತ್ತು ಶೋರೂಂಗಳಿಗೆ 7th, SSLC, PUC, ITI, Diploma, Any Degree Pass / Fail ಆದವರಿಗೆ Packing, Helper, Checking, Billing, Front Office, Telephone Attender ಮುಂತಾದ ಕೆಲಸಗಳಿಗೆ ಬೇಕಾಗಿದ್ದಾರೆ. ಸಂಬಳ: 14,000 – 38,000 (ESI+PF+OT) ಸೇರಿ. ಸಂಪರ್ಕಿಸಿ:

9663704915 / 7892878915

ಹೋಂ ನರ್ಸಿಂಗ್ ಕೆಲಸ

ಅನುಭವ ಇರುವ / ಇಲ್ಲದಿರುವ ಯುವಕರು, ಯುವತಿಯರು, ಮಹಿಳೆಯರು, ವಿಧವೆ, ವಿಚ್ಛೇದಿತೆಯರು 8 hr ಹಾಗೂ 24 hr ಕೆಲಸ ಮಾಡುವವರು ತಕ್ಷಣವೇ ಸಂಪರ್ಕಿಸಿ ಊಟ, ವಸತಿ ಉಚಿತದೊಂದಿಗೆ ಸಂಬಳ 12000 – 23000 ರವರೆಗೆ. (ಆಧಾರ್ ಕಾರ್ಡ್ & ಫೋಟೋ ಕಡ್ಡಾಯ).

Mob: 9035113222

ಸುವರ್ಣಾವಕಾಶ

ಕನ್ನಡ ಮತ್ತು ಇಂಗ್ಲೀಷ್ ಓದಲು, ಬರೆಯಲು ಬರುವ ಯುವಕ / ಯುವತಿಯರಿಗೆ ವಿದ್ಯಾರ್ಥಿಗಳಿಗೆ, ಗೃಹಿಣಿಯರಿಗೆ ಮನೆಯಲ್ಲಿಯೇ ಕುಳಿತು ಫಾರಂನಲ್ಲಿ ಅಂಕಿ ತುಂಬುವ ಹಾಗೂ ಬುಕ್ ಬರೆಯುವ ಕೆಲಸ. ತಿಂಗಳಿಗೆ 16000 ರಿಂದ 18000 ಸಂಪಾದಿಸಿ. (ಕೊರಿಯರ್ ಸೌಲಭ್ಯವಿದೆ).

Mob: 9148733213

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ

NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.

8884439666

ಮನೆ ಬಾಡಿಗೆಗೆ

20x30 Duplex ಮನೆ, 3 ಬೆಡ್ ರೂಂ, 2 ಹಾಲ್, ಪೂಜಾ ರೂಂ, ಕಿಚನ್ ಒಟ್ಟು 9 ಚದರ @ ದಟ್ಟಗಳ್ಳಿ 3ನೇ ಹಂತ, ಕೌಟಿಲ್ಯ ಸ್ಕೂಲ್ ಹತ್ತಿರ.

9845987827

ಸುವರ್ಣಾವಕಾಶ

ನಿವೃತ್ತಿ, ಸ್ವಯಂನಿವೃತ್ತಿ, ಗೃಹಿಣಿಯರಿಗೆ, ಸ್ವಯಂ ಉದ್ಯಮದಾರರಿಗೆ, ಪ್ರಖ್ಯಾತ ಬ್ಯಾಂಕ್ ಸಮೂಹದಿಂದ Part time - Full time ಕೆಲಸಕ್ಕೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ. Fixed salary / PF-ESI. Age: Above 30 years.

Mob: 9008799156

WANTED

For Pharma Distributor
Male Staff - 5 (Full / Part)
Lady Staff - 3
SSLC / PUC Pass/ Fail with or without Experience

9986108208 / 9739377827

ಸೈಟ್ ಫಾರ್ ಸೇಲ್

ಜೆ.ಪಿ.ನಗರ ರಿಂಗ್ ರೋಡ್ ನಿಂದ 5 ಕಿ.ಮೀ. ದೂರದ ದಡದಹಳ್ಳಿ, ಜ್ಞಾನಭಾರತಿ ಲೇಔಟ್ 2ನೇ ಸ್ಟೇಜ್, ಮುಡಾ ಖಾತೆ, 30x40 ಅಳತೆ ಈಸ್ಟ್ ಫೇಸಿಂಗ್ ಸೈಟ್ 22 ಲಕ್ಷ, ಸೌತ್ ಈಸ್ಟ್ ಕಾರ್ನರ್ ಸೈಟ್ 23 ಲಕ್ಷ

9342123373

ಬೇಕಾಗಿದ್ದಾರೆ

ಮೈಸೂರಿನ ಮೇಟಗಳ್ಳಿ ಕೈಗಾರಿಕ ಪ್ರದೇಶ ದಲ್ಲಿರುವ ಪ್ರತಿಷ್ಠಿತ ಕಾರ್ಖಾನೆಗಳಿಗೆ ಹುಡುಗರು ಬೇಕಾಗಿದ್ದಾರೆ. ವಯಸ್ಸು: 18 ರಿಂದ 40 ವರ್ಷ. ವಿದ್ಯಾರ್ಹತೆ: 7 ರಿಂದ PUC ಮತ್ತು ITI. ಉಚಿತ ಊಟ ಮತ್ತು ರಿಯಾಯಿತಿ ದರದಲ್ಲಿ ರೂಮುಗಳನ್ನು ನೀಡಲಾಗುತ್ತದೆ. ಸಂಪರ್ಕಿಸಿ:

Mob: 9480404036

AFFIDAVIT

I, Rudraswami, residing at D.No. 241/2, Halasahalli, Malavalli Taluk, Mandya District, declare that, my correct name is Rudraswami (in my New Aadhaar Card 2188 0724 2155) it is mentioned correctly as Rudraswami. But at the time of issuing PF (No. 101202843452) records my name was mentioend as Swamy S.R. Hence I make this affidavit, in front of Notary C. Mangala on 19-11-2022, that Rudraswami and Swamy S.R. both names belong to my name and same one person.

Sd/- Rudraswami

ಬೇಕಾಗಿದ್ದಾರೆ

ಹೌಸ್‌ಕೀಪಿಂಗ್ ಸಿಬ್ಬಂದಿ – ಪುರುಷ / ಮಹಿಳೆ
ರಿಸೆಪ್ಷನಿಸ್ಟ್ – ಪುರುಷ
ಹೌಸ್‌ಕೀಪಿಂಗ್ ಮೇಲ್ವಿಚಾರಕ – ಪುರುಷ
ಮೈಸೂರಿನಲ್ಲಿರುವ 2 ಸ್ಟಾರ್ ಹೋಟೆಲ್ ಗಾಗಿ ಬೇಕಾಗಿದ್ದಾರೆ. ಸಂಪರ್ಕಿಸಿ:

9845682777, 9739633535

ಬೇಕಾಗಿದ್ದಾರೆ

ಡಿ.ಜಿ.ಎಫ್ ಗೋಲ್ಡ್ ಮತ್ತು ಡೈಮಂಡ್ ಜ್ಯುಯಲ್ಲರಿಗೆ, ಕೆಲಸಕ್ಕೆ ಹುಡುಗರು ಮತ್ತು ಹುಡುಗಿಯರು ಬೇಕಾಗಿದ್ದಾರೆ.
10,000/- Basic Salary + 10,000/- Incentive

8884171888

FOR RENT COMMERCIAL SPACE

2500sq ft.
2nd & 3rd Floor, Suitable for Bank, Office, Clinic, Labs, Boutique with Lift Facility
Near Gopala Gowda Hospital, Nazarbad

90087 01144

ಕೆಲಸಕ್ಕೆ ಬೇಕಾಗಿದ್ದಾರೆ

ಕೈಗಾರಿಕ ಘಟಕದ ಕ್ಯಾಂಟೀನ್ ಕೆಲಸಕ್ಕೆ 18 ರಿಂದ 35 ವಯಸ್ಸಿನ ಹುಡುಗರು ಬೇಕಾಗಿದ್ದಾರೆ. ಸಪ್ಲೇಯರ್ಸ್, ಹೆಲ್ಪರ್ಸ್, ಕೌಂಟರ್ಸ್ ಬೇಕಾಗಿದ್ದಾರೆ. ಆಸಕ್ತಿಯುಳ್ಳವರು. ಸಂಪರ್ಕಿಸಿ:

9844900510

ಬೇಕಾಗಿದ್ದಾರೆ

ಜಿಲ್ಲೆಯಲ್ಲಿ ಹೊಸದಾಗಿ ಪ್ರಾರಂಭವಾಗಿರುವ ಕಂಪನಿಗಳಿಗೆ ಹಾಗೂ ಆಫೀಸ್ ಕೆಲಸಕ್ಕೆ ಯುವಕ – ಯುವತಿಯರು ಬೇಕಾಗಿದ್ದಾರೆ. Salary: 13,000 - 21,000+ESI, PF, ವಿದ್ಯಾರ್ಹತೆ 10th, PUC, ITI, Diploma and Any Degree ಇಂದೇ ಸಂಪರ್ಕಿಸಿ:

9035734821
6360353848

ಬರವಣಿಗೆ ಕೆಲಸ

ಮನೆಯಿಂದಲೇ ಫಾರಂ ಭರ್ತಿಮಾಡುವ ಉದ್ಯೋಗ ಮಾಡಿ ಪ್ರತಿ 1 ಫಾರಂಗೆ 30 ರೂ.ಗಳನ್ನು ಪಡೆಯಿರಿ

9731891409

Star Solar



Renewable Energy
ಕೇವಲ Easy EMI 19,499/- 200 Ltr
5/15 Years Guaranty
ಎಲ್ಲಾ ಕಂಪನಿಯ ಹಳೆಯ ಸೋಲಾರ್‌ಗಳನ್ನು ಸರ್ವೀಸ್ ಮಾಡಿಕೊಡಲಾಗುವುದು.
Old system Exchange offer available
Manufacturing : Belawadi Industrial Sub, Mysore

9945616293 / 9449966293

ಮನೆಯಿಂದಲೇ ಸಂಪಾದಿಸಿ

ಮನೆಯಿಂದಲೇ ಮೊಬೈಲ್, ಕಂಪ್ಯೂಟರ್ ಅಥವಾ ಕೈ ಬರವಣಿಗೆ ಮೂಲಕ ಉದ್ಯೋಗ ಮಾಡಿ 10,000 ರಿಂದ 30,000 ಸಂಪಾದಿಸಿ.

7795560970

ಮಾಂತ್ರಿಕ ಕೇರಳ ಶ್ರೀ ಭಗವತಿ ಜ್ಯೋತಿಷ್ಯರು ಶ್ರೀ ಎಸ್.ಎಸ್.ಪ್ರಸಾದ್ ಪೊದುವಾಳ್

ಮೊ.: 9731839596

ಇವರು ಕುಟ್ಟಿಚೇತನ್ ರುದ್ರಿಮಾರ್ತಾಂಡ ದೇವಿ ಭಗವತಿ ಮಳಯಾಲಿ ಮಾಂತ್ರಿಕ ಶಕ್ತಿಯಿಂದ ಸ್ತ್ರೀ ಪುರುಷ, ಪ್ರೇಮ, ದಾಂಪತ್ಯ ಸಮಸ್ಯೆ, ಸಂತಾನ, ದುಷ್ಟಶಕ್ತಿ, ಶತ್ರುಭಾಧೇ, ವ್ಯಾಪಾರ, ಅತ್ತೆ ಸೊಸೆ ಕಿರಿಕಿರಿ, ಸಾಲಭಾಧೇ, ಆರೋಗ್ಯ, ಮಾನಸಿಕ ಚಿಂತೆ, ನಿಮ್ಮ ಯಾವುದೇ ಗುಪ್ತ ಸಮಸ್ಯೆಗಳಿಗೆ ತಕ್ಷಣದಲ್ಲಿ ಪರಿಹಾರ ಶತಸಿದ್ಧ. ಖಾಯಂ ಮನೆ ವಿಳಾಸ– ಮನೆ ನಂ.68, ಸತ್ಯ ಮಾರ್ಗ ಗೀತಾ ಸ್ಕೂಲ್ ಹಿಂಭಾಗ, ಹೊಸ ಡಿಸಿ ಆಫೀಸ್ ಎದುರು, ಸಿದ್ಧಾರ್ಥನಗರ, ಮೈಸೂರು.

WANTED

Office Assistant (Female only)
Marketing Executive (Male)
Qualification: Any Degree with the knowledge of MS Excel, Word. *Contact:*

9606539394, 0821-2953294

S.K.CONSTRUCTION

ನಿಮ್ಮ ಕೈಗೆಟುಕುವ ಬೆಲೆಯಲ್ಲಿ ಅತಿ ಉತ್ತಮ ಗುಣಮಟ್ಟದಲ್ಲಿ Plan ಮತ್ತು Loan ಮಾಡಿಸಿ 3D Elivation ಸಹಿತ ಹೊಸ ಮನೆ Construction ಮಾಡಿಕೊಡುತ್ತೇವೆ.

9620528490

ಮೈಸೂರು ಮ್ಯಾರೇಜ್ ಬ್ಯೂರೋ

ಎಲ್ಲಾ ಜಾತಿಯ ವಧು ವರರ ವಿಧುರರು ವಿಧವೆಯರು, ವಿಚ್ಛೇದಿತರಿಗೆ ಶೀಘ್ರ ಕಂಕಣ ಭಾಗ್ಯ ಹಾಗೂ ಉತ್ತಮ ಸಂಬಂಧಕ್ಕೆ ಕೂಡಲೇ ಸಂಪರ್ಕಿಸಿ:
www.bhandhana.com
ಡಾ.ಗುರೂಜಿ ಮೈಸೂರು

6361740552 / 9448229184
7899625268

ಮಾಂತ್ರಿಕ ಕೊಳ್ಳೇಗಾಲದ ಜ್ಯೋತಿಷ್ಯರು ಪಂ. ಎಸ್. ಕುಮಾರಸ್ವಾಮಿ

MOB: 9880583804

ಕೊಳ್ಳೇಗಾಲದ ಮೋಡಿ ಮಾಂತ್ರಿಕ ಅಘೋರ ಶಕ್ತಿಯಿಂದ ಸ್ತ್ರೀ, ಪುರುಷ, ಪ್ರೇಮ, ಸಂತಾನ, ಶತ್ರುದೋಷ, ಸಾಲಭಾದೆ, ಆರೋಗ್ಯ, ಭೂಮಿ, ಕೋರ್ಟು, ವ್ಯಾಪಾರ, ನಂಬಿದ ಜನರಿಂದ ಮೋಸ ನಿಮ್ಮ ಯಾವುದೇ ಜಟಿಲವಾದ ಸಮಸ್ಯೆಗಳಿಗೆ 2 ದಿನದಲ್ಲಿ ಪರಿಹಾರ ಶತಸಿದ್ಧ. ಕರೆಮಾಡಿ ಬನ್ನಿ.
ಖಾಯಂ ವಿಳಾಸ: ಎಟಿಎಂ ಪಕ್ಕ, ಟಿಕೆಟ್ ಬುಕ್ಕಿಂಗ್ ಕೌಂಟರ್ ಹತ್ತಿರ (ರಿಲಾಯನ್ಸ್ ಮಾಲ್) (ಕೆ.ಎಸ್.ಆರ್.ಟಿ.ಸಿ) ಸಬರ್ಬ್ ಬಸ್ ಸ್ಟ್ಯಾಂಡ್, ಮೈಸೂರು.

ಕೇರಳ ಶ್ರೀ ಪ್ರಸಿದ್ಧ ಜ್ಯೋತಿಷ್ಯರು

Famous Astrologer
ಪಂಡಿತ್ ಸಂತೋಷ್. 9741250896

ಕಾಣತೂರ್ ನಾಲ್ವರ ದೈವ, ಕಲ್ಲುಟಿ ಭಗವತಿ ಶಕ್ತಿಯಿಂದ ದಾಂಪತ್ಯ ಸಮಸ್ಯೆ, ಲೈಂಗಿಕ ಸಮಸ್ಯೆ, ಸ್ತ್ರೀ ಪುರುಷ ಪ್ರೇಮ ವಿಚಾರ, ಶತ್ರು ಬಾಧೆ, ಹಣಕಾಸಿನ ತೊಂದರೆ, ಮಾನಸಿಕ ಚಿಂತೆ, ಪ್ರೇತ ಬಾಧೆ, ವಿದೇಶ ಪ್ರಯಾಣ ಇನ್ನೂ ಮುಂತಾದ ಯಾವುದೇ ಕಠಿಣ ಸಮಸ್ಯೆಗಳಿಗೆ 3 ದಿನದಲ್ಲಿ ಶಾಶ್ವತ ಪರಿಹಾರ ಮಾಡಿಕೊಡುತ್ತಾರೆ.
ಖಾಯಂ ವಿಳಾಸ: ವಿನಯ ಮಾರ್ಗ, ಶ್ರೀ ಸಿದ್ಧಿವಿನಾಯಕ ದೇವಸ್ಥಾನದ ಎದುರು, ಬ್ಯಾಂಕ್ ಆಫ್ ಬರೋಡ ಪಕ್ಕ, ಸಿದ್ಧಾರ್ಥ ನಗರ, ಮೈಸೂರು

ಕೇರಳ ಕೊಳ್ಳೇಗಾಲ ಜ್ಯೋತಿಷ್ಯರು

ಪಂ॥ ಮೋಹನ್ ಪೊದುವಾಳ್ (ಕೇರಳ)
ಪಂ॥ ಮೋಡಿ ಕೃಷ್ಣಪ್ಪ ಮಾಂತ್ರಿಕರು (ಕೊಳ್ಳೇಗಾಲ)
ಮೊ.: 9036984793

ಇವರು ಕೇರಳ ಮಾಂತ್ರಿಕ ಶಕ್ತಿ ಮತ್ತು ಕೊಳ್ಳೇಗಾಲದ ಮೋಡಿ ಮಾಂತ್ರಿಕ ವಿದ್ಯೆಯಿಂದ ಸ್ತ್ರೀ–ಪುರುಷ ಪ್ರೇಮ, ದಾಂಪತ್ಯ ಸಮಸ್ಯೆ, ಶತ್ರು ಬಾಧೇ, ಪ್ರೇತ ಬಾಧೇ ಇನ್ನೂ ಅನೇಕ ಗುಪ್ತ ಜಟಿಲವಾದ ಘೋರ ನಿಗೂಢ ಸಮಸ್ಯೆಗಳಿಗೆ ಸ್ಥಳದಲ್ಲಿಯೇ ಪರಿಹಾರ ಶತಃಸಿದ್ಧ. ಖಾಯಂ ವಿಳಾಸ– #1140, ವಿಹಾರ ಮಾರ್ಗ, ಹಳೆ ಹಾಲಿನ ಡೈರಿ ಎದುರು, ಟೆಂಪಲ್ ಟ್ರೀಸ್ ಅಪಾರ್ಟ್‌ಮೆಂಟ್ ಪಕ್ಕ, ಸಿದ್ಧಾರ್ಥನಗರ, ಮೈಸೂರು – 11.

ಕೇರಳ ಶ್ರೀ ಪ್ರಸಿದ್ಧ ಮಹಾ ಮಾಂತ್ರಿಕ ಜ್ಯೋತಿಷ್ಯರು, ನಂ.1 ಮೋಡಿ ತಜ್ಞರು

ಪಂಡಿತ್ ಕೆ.ಎಸ್.ಕೃಷ್ಣಮೂರ್ತಿ
ಮೊ.: 9741806990

ತಾಯಿ ಚಾಮುಂಡೇಶ್ವರಿ ಕಾಣತೂರೆ ನಾಲ್ವರ ದೈವ ಚೌಡನ್ ಕರೆ ಭಗವತಿ ಮಹಾ ಮಾಂತ್ರಿಕ ಶಕ್ತಿಯಿಂದ ಲೈಂಗಿಕ, ದಾಂಪತ್ಯ, ಸ್ತ್ರೀ ಪುರುಷ ಪ್ರೇಮ ವಿಚಾರ, ಕೋರ್ಟ್ ಕಚೇರಿ, ಹಣಕಾಸಿನ ತೊಂದರೆ, ವಿವಾದ, ಮನೆಯಲ್ಲಿ ಅಶಾಂತಿ, ಮಾನಸಿಕ ಚಿಂತೆ, ಇನ್ನೂ ಮುಂತಾದ ಸಮಸ್ಯೆಗಳಿಗೆ 3 ದಿನದಲ್ಲಿ ಪರಿಹಾರ ಶತಃಸಿದ್ಧ. ಖಾಯಂ ವಿಳಾಸ: ಸುಬರ್ಬ್ ಬಸ್‌ಸ್ಟ್ಯಾಂಡ್ ಪಕ್ಕ, ಇರ್ವಿನ್ ರೋಡ್, ಆಂಧ್ರ ಶೈಲಿ ನಂದಿನಿ ಹೋಟೆಲ್ ಹಿಂಭಾಗ, ಮಾರುತಿ ಸುಜುಕಿ ಆಟೋ ಮೊಬೈಲ್ ಪಕ್ಕ ಮನೆಯಲ್ಲಿ ನೆಲೆಸಿದ್ದಾರೆ. ಹಳ್ಳೇರಿ, ಮೈಸೂರು ಇಲ್ಲಿ ಹೇಳುವ ವಿಚಾರಗಳನ್ನು ಗುಪ್ತವಾಗಿ ಇಡಲಾಗುತ್ತದೆ.

FOR SALE

1) 30x40 - 12 Lakhs. 30x50 - 15 L sites available attach Brahmins E blk layout.
2) 12x36 G+2 house Kuvempunagar 28 Guntas Land in Varkodu.
3) 35x55 S/W C, R.K. Nagar 'I' Block.
4) 30x40 - 12 Lakhs Hunsur Road.
5) 30x40 - 20 lakhs Dadadahalli (JP Nagar)

Prakruthi Properties
90359 90359, 95386 90359

ಮನೆ ಭೋಗ್ಯಕ್ಕಿದೆ

ಮೈಸೂರು ಸಿಟಿ, ಜೆ.ಎಲ್.ಬಿ ರಸ್ತೆ, ಚಾಮುಂಡಿಪುರಂ, 1ನೇ ಮಹಡಿ, ಪೂರ್ವಾಭಿಮುಖಿ, ಗ್ರಾನೈಟ್, ಟೈಲ್ಸ್, 2 ರೂಂ, ಇತರ ಎಲ್ಲಾ ಸೌಕರ್ಯಗಳೊಡನೆ. 6 ಲಕ್ಷ

9591408008
8105087957

SITE FOR SALE

Site no-59, Muda Site Bandyapalya Grama Uttanahalli Heritage Nagara Behind RMC Near Servey Training Office Varuna Hubali Mysore.
Contact:

9611426923

ಬೇಕಾಗಿದ್ದಾರೆ

ಶಾಲೆಯಲ್ಲಿ ಕಸ ಗುಡಿಸಲು ಮತ್ತು ಮನೆ ಕೆಲಸಗಳಲ್ಲಿ ಸಹಾಯ ಮಾಡಲು ಮಹಿಳೆ ಬೇಕಾಗಿದ್ದಾರೆ. ಸಮಯ ಬೆಳಗ್ಗೆ 9 ರಿಂದ ಸಂಜೆ 5, ಸಂಬಳ 300/– ಪ್ರತಿ ದಿನಕ್ಕೆ. (ಶಾಲೆಗೆ ಹತ್ತಿರವಾಗಿ ವಾಸಿಸುವವರಿಗೆ ಆದ್ಯತೆ) ಜ್ಞಾನ ಗಂಗೋತ್ರಿ ಕಾನ್ವೆಂಟ್ ಇಂಗ್ಲೀಷ್ ಮಿಡಿಯಮ್, ರಾಜೇಂದ್ರ ನಗರ, ಮೈಸೂರು – 570007.

9243580672
9113980741

HOUSE FOR SALE

20X30 EAST FACING
G.F. - Car & 2 Wheeler Parking and 1 Room with attach bath F.F & S.F - Duplex with 3 BHK with good & Quality interiors. Location: Mathrushri Layout, Near Maramma Temple, Adjacent to Ring Road.
Rs. 72 Lakhs, Nego. *Contact:*

9739703467 / 9686895205

ಮೈಸೂರು ಮಿತ್ರ — ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

ಸೋಮವಾರ ಗುರುವಾರ ಶನಿವಾರ
ಪ್ರತಿ ಜಾಹೀರಾತಿಗೆ ರೂ. 630 ಮಾತ್ರ

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 6 ರಲ್ಲಿ

ಜೆಡಿಎಸ್‌ಗೆ ಸ್ಪಷ್ಟ ಬಹುಮತ ಬಂದರಲ್ವ ದಲಿತರಿಗೆ ಡಿಸಿಎಂ ಪಟ್ಟ

ಮಾಜಿ ಸಚಿವ ಎನ್.ಚಲುವರಾಯಸ್ವಾಮಿ



ಮಂಡ್ಯ, ನ.23– ಜೆಡಿಎಸ್‌ಗೆ ಸ್ಪಷ್ಟ ಬಹುಮತ ಬಂದರೆ ತಾನೇ ದಲಿತರಿಗೆ ಉಪಮುಖ್ಯ ಮಂತ್ರಿ ಸ್ಥಾನ ನೀಡುವುದು ಎಂದು ಮಾಜಿ ಸಚಿವ ಎನ್.ಚಲುವರಾಯಸ್ವಾಮಿ ಲೇವಡಿ ಮಾಡಿದರು.

ಬುಧವಾರ ನಗರದ ಪ್ರವಾಸಿ ಮಂದಿರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕುಮಾರಸ್ವಾಮಿ ಹೇಳಿಕೆಯಲ್ಲಿ ಗಹನವಾದ ಅಂಶವಿದೆ. ಅವರ ಪಕ್ಷ ಪೂರ್ಣ ಪ್ರಮಾಣದಲ್ಲಿ ಅಧಿಕಾರಕ್ಕೆ ಬಂದರೆ ತಾನೇ ದಲಿತರು, ಮುಸ್ಲಿಮರಿಗೆ ಇವರು ಉಪಮುಖ್ಯ ಮಂತ್ರಿ ಸ್ಥಾನ ನೀಡುವುದು ಎಂದರು.

ಕಳೆದ ಬಾರಿ ಅವರ ಪಕ್ಷಕ್ಕೆ 120 ಸ್ಥಾನ ಬರಲಿಲ್ಲ. ಆದರೂ ಮುಖ್ಯಮಂತ್ರಿ ಗಾದಿ ಕುಮಾರಸ್ವಾಮಿಗೆ ಒಲಿಯಿತು. ಕೇವಲ ಸಿಎಂ ಆದರೂ ಅವರಿಂದ ಮಂಡ್ಯ ಸಕ್ಕರೆ ಕಾರ್ಖಾನೆ ಆರಂಭಿಸಲು ಸಾಧ್ಯವಾಗಲಿಲ್ಲ. ಇದು ಜಿಲ್ಲೆಯ ಜನರಿಗೆ ತಿಳಿದಿಲ್ಲವೇ? ಎಂದರು.

ಸಮ್ಮಿಶ್ರ ಸರ್ಕಾರದ ಅವಧಿಯಲ್ಲಿ ಮಂಡ್ಯ ಜಿಲ್ಲೆಗೆ 8 ಸಾವಿರ ಕೋಟಿ ಅನುದಾನ ನೀಡಲಾಗಿದೆ ಎಂದು ಹೇಳಿಕೊಳ್ಳುತ್ತಾರೆ. ಇಂತಹ ಹೇಳಿಕೆಯಿಂದ ಯಾವುದೇ ಪ್ರಯೋಜನವಿಲ್ಲ ಎಂದರು. ಅಧಿಕಾರಕ್ಕೆ ಬಂದಾಗ ಪಿಡಬ್ಲ್ಯೂಡಿ, ಹಣಕಾಸು, ಇಂಧನ, ನೀರಾವರಿ ಇಲಾಖೆ ಹಾಗೂ ಮುಖ್ಯಮಂತ್ರಿ ಸ್ಥಾನವನ್ನು ಯಾರಿಗೂ ನೀಡುವುದಿಲ್ಲ. ಇವೆಲ್ಲವೂ ಕುಟುಂಬದ ಪಾಲೇ ಆಗಿರುತ್ತವೆ. ಇಂತಹ ಸನ್ನಿವೇಶನದಲ್ಲಿ ಉಪ ಮುಖ್ಯಮಂತ್ರಿ ಹುದ್ದೆ ವಿಚಾರ ಅಪ್ರಸ್ತುತವಲ್ಲವೇ ಎಂದು ಪ್ರಶ್ನಿಸಿದರು.

ಮುಂದಿನ ವಿಧಾನಸಭೆ ಚುನಾವಣೆಯಲ್ಲಿ ಜೆಡಿಎಸ್ ಎಷ್ಟು ಸ್ಥಾನಗಳಲ್ಲಿ ಜಯಗಳಿಸಲಿದೆ ಎಂಬುದನ್ನು ಮತದಾರರು ನಿರ್ಧರಿಸುತ್ತಾರೆ. ಜಿಲ್ಲೆಯ ಏಳು ಕ್ಷೇತ್ರಗಳಲ್ಲೂ ಗೆಲುವು ಕಂಡು ತಮ್ಮದೇ ಸರ್ಕಾರದ ಆಳ್ವಿಕೆಯನ್ನು ಕಂಡಿರುವ ಜೆಡಿಎಸ್‌ನವರ ಪ್ರಸ್ತುತ ಅವಧಿಯ ಅಭಿವೃದ್ಧಿಯನ್ನು ಅವಲೋಕಿಸಿ ಜಿಲ್ಲೆಯ ಮತದಾರರು ಸೂಕ್ತ ನಿರ್ಧಾರ ಕೈಗೊಳ್ಳುವ ಜಾಣ್ಮೆ ಹೊಂದಿದ್ದಾರೆ ಎಂದರು.

ಬಿಜೆಪಿಯವರು ಎರಡ್ಮೂರು ಬಾರಿ ಅಧಿಕಾರಕ್ಕೆ ಬಂದರೂ ಆಪರೇಷನ್ ಕಮಲದ ಮೂಲಕ ಅಧಿಕಾರಕ್ಕೆ ಬಂದಿದ್ದಾರೆ. ಜನರಿಂದ ಬಹುಮತ ಪಡೆದು ಅಧಿಕಾರ ನಡೆಸಿದವರು ರಾಮಕೃಷ್ಣ ಹೆಗ್ಗಡೆ ಹಾಗೂ ದೇವೇಗೌಡರು ಮಾತ್ರ ಪ್ರಸ್ತುತ ಆ ಪರಿಸ್ಥಿತಿ ಇಲ್ಲ ಎಂಬುದು ಕುಮಾರಸ್ವಾಮಿ ಅವರಿಗೂ ತಿಳಿದಿದೆ ಎಂದರು.

ಜೆಡಿಎಸ್‌ಗೆ ಹಾಸನದಲ್ಲಿ ಏಳು ಸೀಟು ಗೆಲ್ಲಲಿಲ್ಲ. ರಾಮನಗರದಲ್ಲಿ ನಾಲ್ಕು ಸೀಟು ಗೆಲ್ಲಿಸಲಿಲ್ಲ. ಹಾಸನದಲ್ಲಿ ಅಪ್ಪ, ಅಣ್ಣ ಪೂರ್ಣ ಪ್ರಮಾಣದಲ್ಲಿ ಪ್ರತಿನಿಧಿಸುತ್ತಾರೆ. ರಾಮನಗರವನ್ನು ಕುಮಾರಸ್ವಾಮಿ ನಂದು ಅಂತ ಹೇಳುತ್ತಾರೆ. ಮಂಡ್ಯ ನನ್ನ ಹೃದಯ ಅಂತ ಹೇಳುತ್ತಾರೆ. ಆದರೆ ಮಂಡ್ಯಕ್ಕೆ ಏನು ಮಾಡಿದ್ದಾರೆ ಎಂದು ವ್ಯಂಗ್ಯವಾಡಿದರು.

ಅರ್ಜಿ ಹಾಕುವುದು ಪಕ್ಷದ ಸಿದ್ಧಾಂತ. ಮಂಡ್ಯ ಕಾಂಗ್ರೆಸ್ಸಿನ ಭದ್ರಕೋಟೆ. ಮಧ್ಯ ಸ್ವಲ್ಪ ವ್ಯತ್ಯಾಸ ಆಗಿದೆ. ಮತ್ತೆ ಮಂಡ್ಯದಲ್ಲಿ ಕಾಂಗ್ರೆಸ್‌ಗೆ ಒಳ್ಳೆಯ ಫಲಿತಾಂಶ ಬರಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಮಂಡ್ಯದಲ್ಲಿ ಅತಿ ಹೆಚ್ಚು ಆಕಾಂಕ್ಷಿತರು ಇದ್ದಾರೆ ಎಂದರೆ ಸಂತೋಷ ಪಡಬೇಕು. ಬೇಸರ ಯಾಕೆ ಮಾಡಿಕೊಳ್ಳಬೇಕು. ಅರ್ಜಿ ಹಾಕಿರುವ 16 ಜನ ಆಕಾಂಕ್ಷಿತರು ಪಕ್ಷದ ತೀರ್ಮಾನಕ್ಕೆ ಬದ್ಧರಾಗಿರುತ್ತಾರೆ. ಮಂಡ್ಯ ಜಿಲ್ಲೆಯಲ್ಲಿ ಎಷ್ಟು ಜನ ಆಕಾಂಕ್ಷಿತರು ಇದ್ದರೂ ಒಗ್ಗಟ್ಟಿನಿಂದ ಚುನಾವಣೆ ಮಾಡುತ್ತೇವೆ ಎಂದರು.

ಈ ಸಂದರ್ಭದಲ್ಲಿ ಮನ್‌ಮುಲ್ ನಿರ್ದೇಶಕ ಉಮ್ಮಡಹಳ್ಳಿ ಶಿವಪ್ಪ, ಸಿಟಿ ಕೋಪರೇಟಿವ್ ಬ್ಯಾಂಕ್ ನಿರ್ದೇಶಕ ಅಶೋಕ್, ತಾ.ಪಂ. ಮಾಜಿ ಸದಸ್ಯ ತ್ಯಾಗರಾಜು, ಕಾಂಗ್ರೆಸ್ ಮುಖಂಡ ರುದ್ರಪ್ಪ, ನಗರಸಭಾ ಸದಸ್ಯರಾದ ನಹೀಂ, ಶ್ರೀಧರ್ ಇತರರಿದ್ದರು.

ಎನ್‌ಎಸ್‌ಎಸ್‌ನಿಂದ 759 ಗ್ರಾಮ ದತ್ತು

ರಾಜ್ಯ ಸಂಯೋಜನಾಧಿಕಾರಿ ಗುಬ್ಬಿಗೂಡು ರಮೇಶ್



ಮದ್ದೂರು, ನ.23– ರಾಜ್ಯಾದ್ಯಾಂತ ರಾಷ್ಟ್ರೀಯ ಸೇವಾ ಯೋಜನೆಯಿಂದ 759 ಗ್ರಾಮಗಳನ್ನು ದತ್ತು ಪಡೆದುಕೊಂಡು ಸ್ವಯಂ ಸೇವಕರುಗಳಿಂದ ಅಭಿವೃದ್ಧಿ ಪಡಿಸಲಾಗುತ್ತಿದೆ ಎಂದು ಪದವಿಪೂರ್ವ ಶಿಕ್ಷಣ ಇಲಾಖೆಯಲ್ಲಿ ರಾಷ್ಟ್ರೀಯ ಸೇವಾ ಯೋಜನೆಯ ರಾಜ್ಯ ಸಂಯೋಜನಾಧಿಕಾರಿ ಗುಬ್ಬಿಗೂಡು ರಮೇಶ್ ಹೇಳಿದರು.

ತಾಲೂಕಿನ ತೂಬಿನಕೆರೆ ಗ್ರಾಮದಲ್ಲಿ ಎಚ್.ಕೆ.ವೀರಣ್ಣಗೌಡ ಪದವಿಪೂರ್ವ ಕಾಲೇಜಿನ ರಾಷ್ಟ್ರೀಯ ಸೇವಾಯೋಜನೆಯ ವಾರ್ಷಿಕ ವಿಶೇಷ ಶಿಬಿರಕ್ಕೆ ಭೇಟಿ ನೀಡಿ ಶಿಬಿರಾರ್ಥಿಗಳಿಗೆ ಆಯೋಜಿಸಿದ್ದ ಉಪನ್ಯಾಸ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ವಿದ್ಯಾರ್ಥಿಗಳಿಗೆ ಪದವಿಪೂರ್ವ ಹಂತದಲ್ಲೇ ಮಾನವೀಯ ಮೌಲ್ಯಗಳನ್ನು ಬೆಳೆಸುವ ಸದುದ್ದೇಶದಿಂದ ಕೇಂದ್ರ ಸರ್ಕಾರ ರಾಷ್ಟ್ರೀಯ ಸೇವಾ ಯೋಜನೆಯನ್ನು ಪ್ರಾರಂಭಿಸಿದ್ದು ಇಂದು 800 ಘಟಕಗಳಲ್ಲಿ 80 ಸಾವಿರ ಪದವಿಪೂರ್ವ ವಿದ್ಯಾರ್ಥಿಗಳು ಸ್ವಯಂ ಸೇವಕರಾಗಿ ಸೇವಾ ಕಾರ್ಯಗಳಲ್ಲಿ ತೊಡಗಿಸಿಕೊಂಡಿದ್ದಾರೆ ಎಂದರು.

ರಾಷ್ಟ್ರೀಯ ಸೇವಾಯೋಜನೆಯು ದತ್ತು ಪಡೆದುಕೊಂಡಿರುವ 759 ಗ್ರಾಮಗಳಲ್ಲಿ ಎನ್.ಎಸ್.ಎಸ್ ವಿದ್ಯಾರ್ಥಿಗಳು ಗ್ರಾಮಗಳಲ್ಲಿ ಸರ್ಕಾರದ 64 ಇಲಾಖೆಯ ಸವಲತ್ತುಗಳನ್ನು ಗ್ರಾಮಸ್ಥರಿಗೆ ಪರಿಚಯಿಸಿ ಹಾಗೂ ಕೊಡಿಸುವಲ್ಲಿ ಯಶಸ್ವಿಯಾಗಿದ್ದಾರೆ ಎಂದ ಅವರು, ಸ್ವಯಂಸೇವಕರುಗಳಲ್ಲಿ ಉನ್ನತ ವಿದ್ಯಾಭ್ಯಾಸ ಹಾಗೂ ಸರ್ಕಾರಿ ಕೆಲಸಗಳಲ್ಲಿ ಕೃಪಾಂಕ ಕೊಡುವ ಸಂಬಂಧ ಸರ್ಕಾರದ ಹಂತದಲ್ಲಿ ಪತ್ರ ವ್ಯವಹಾರ ನಡೆಸಲಾಗುತ್ತಿದೆ ಎಂದರು.

1969ರಲ್ಲಿ ಪ್ರಾರಂಭವಾದ ರಾಷ್ಟ್ರೀಯ ಸೇವಾಯೋಜನೆಯು ಕಾಶ್ಮೀರದಿಂದ ಕನ್ಯಾಕುಮಾರಿವರೆಗೂ ವಿಸ್ತರಿಸಲ್ಪಟ್ಟಿದ್ದು ರಾಜ್ಯದ ಚಿತ್ರದುರ್ಗ ಜಿಲ್ಲೆಯ ದೊಡ್ಡೇರಿ ಗ್ರಾಮ ಸೇರಿದಂತೆ ದೇಶದಲ್ಲಿ 250 ಗ್ರಾಮಗಳನ್ನು ಸಂಪೂರ್ಣ ಮುಕ್ತ ಗ್ರಾಮಗಳಾಗಿ ಅಭಿವೃದ್ಧಿ ಪಡಿಸಿದ್ದು, ಇದಲ್ಲದೇ ಕಾಲೇಜು ಶಿಕ್ಷಣದಲ್ಲಿ ಎನ್.ಎಸ್.ಎಸ್., ಎನ್.ಸಿ.ಸಿ., ಸ್ಕೌಟ್ ಮತ್ತು ಗೈಡ್ ಮತ್ತು ಸೇವಾದಳಗಳನ್ನು ಸ್ಥಾಪಿಸಿ ಅದರ ಮೂಲಕ ವಿದ್ಯಾರ್ಥಿಗಳನ್ನು ತೊಡಗಿಸಿಕೊಳ್ಳುವಂತೆ ಉತ್ತೇಜನ ನೀಡುತ್ತಾ ಸಮಾಜವನ್ನು ಅಭಿವೃದ್ಧಿ ಪಡಿಸಲಾಗುತ್ತಿದೆ ಎಂದರು.

ಎಂ.ಎಚ್.ಚನ್ನೇಗೌಡ ವಿದ್ಯಾಸಂಸ್ಥೆಯ ಕಾರ್ಯದರ್ಶಿ ಸಿ.ಅಪೂರ್ವಚಂದ್ರ, ಪ್ರಾಂಶುಪಾಲ ಯು.ಎಸ್.ಶಿವಕುಮಾರ್, ಕ.ಸಾ.ಪ ತಾಲೂಕು ಅಧ್ಯಕ್ಷ ಸುನೀಲ್ ಕುಮಾರ್, ಮಾಜಿ ಅಧ್ಯಕ್ಷ ಹರ್ಷ, ದೇವ ಸುರೇಂದ್ರಬಾಬು, ವೀರಭದ್ರಸ್ವಾಮಿ, ಗ್ರಾಪಂ ಸದಸ್ಯ ಅಶೋಕ್, ಶಿಬಿರಾಧಿಕಾರಿಗಳಾದ ಎಚ್.ಎಸ್.ಪಂಚಲಿಂಗೇಗೌಡ ಹಾಗೂ ಸಹ ಶಿಬಿರಾಧಿಗಳಾದ ಸುರೇಂದ್ರ.ಜಿ, ರೇವಣ್ಣ ಎನ್, ಮೋಹನ್‌ಕುಮಾರ್, ಜಯವರ್ಧನ್ ಸಿ, ಉಪನ್ಯಾಸಕರುಗಳಾದ ಕೌಶಲ್ಯ, ಶೃತಿ, ರಕ್ಷಿತ್, ಇತರರು ಹಾಜರಿದ್ದರು.

ಪಾಂಡವಪುರ ರೋಲರ್ ಸ್ಕೇಟಿಂಗ್ ಕ್ಲಬ್‌ನ 16 ಮಕ್ಕಳು ರಾಷ್ಟ್ರಮಟ್ಟಕ್ಕೆ ಆಯ್ಕೆ



ಪಾಂಡವಪುರ, ನ.23– ರಾಜ್ಯಮಟ್ಟದ ಸ್ಕೇಟಿಂಗ್ ಸ್ಪರ್ಧೆಯಲ್ಲಿ ಭಾಗವಹಿಸಿದ್ದ ಪಾಂಡವಪುರ ರೋಲರ್ ಸ್ಕೇಟಿಂಗ್ ಕ್ಲಬ್‌ನ ಮಕ್ಕಳು ಪದಕಗಳನ್ನು ಗಳಿಸಿ ರಾಷ್ಟ್ರಮಟ್ಟಕ್ಕೆ ಆಯ್ಕೆಯಾಗುವ ಮೂಲಕ ತಾಲೂಕಿಗೆ ಕೀರ್ತಿ ತಂದಿದ್ದಾರೆ.

ನ.16ರಿಂದ 19ರವರೆಗೆ ಬೆಂಗಳೂರಿನಲ್ಲಿ ನಡೆದ 39ನೇ ರಾಜ್ಯಮಟ್ಟದ ಸ್ಕೇಟಿಂಗ್ ಸ್ಪರ್ಧೆಯಲ್ಲಿ ಪಾಂಡವಪುರ ರೋಲರ್ ಸ್ಕೇಟಿಂಗ್ ಕ್ಲಬ್ ವತಿಯಿಂದ ಮಂಡ್ಯ ಜಿಲ್ಲೆಯನ್ನು ಸುಮಾರು 16 ಮಕ್ಕಳು ಪ್ರತಿನಿಧಿಸಿದ್ದು, ಅದರಲ್ಲಿ ಉತ್ತಮ ಪ್ರದರ್ಶನ ನೀಡಿ ಪದಕಗಳನ್ನು ಪಡೆದು ರಾಷ್ಟ್ರಮಟ್ಟಕ್ಕೆ ಆಯ್ಕೆಯಾಗಿ ಗಮನಸೆಳೆದಿದ್ದಾರೆ.

ಕೆನ್ನಾಳು ಚಿನ್ಮಯ್, ದರಸಗುಪ್ಪೆ ತ್ರಿಭುವನ್, ಪಾಂಡವಪುರ ಪವನ್‌ಕುಮಾರ್, ವನವಿತ್, ಹಿರೇಮರಳಿ ವನ್ಯ, ಪಾಂಡವಪುರ ದೀಕ್ಷಿತ್, ಕಿರಂಗೂರು ಯಶ್ವಂತ್, ಸ್ವನಿತ್, ಗಾನವಿ, ಐತಾಖಾನ್, ಹನೀಷ್, ರೂಪಲ, ಶ್ರೀರಂಗಪಟ್ಟಣ ಲಹರಿ, ಮಹದೇಶ್ವರಪುರ ವಿಸ್ಮತ್, ಹಿರೇಮರಳಿ ದುವನ್‌ಗೌಡ, ಬೆಳ್ಳಿ ಪದಕ, ಹಿರೇಮರಳಿ ವನ್ಯ ಕಂಚು, ಪಾಂಡವಪುರ ಮೋನಿಷಾ ಎರಡು ಬೆಳ್ಳಿ ಪದಕವನ್ನು ಪಡೆದು 60ನೇ ರಾಷ್ಟ್ರಮಟ್ಟದ ಸ್ಕೇಟಿಂಗ್ ಸ್ಪರ್ಧೆಗೆ ಆಯ್ಕೆಯಾಗಿದ್ದಾರೆ. ಪಾಂಡವಪುರ ರೋಲರ್ ಸ್ಕೇಟಿಂಗ್ ಕ್ಲಬ್ ಕಳೆದ 5 ವರ್ಷಗಳಿಂದಲೂ ದರಸಗುಪ್ಪೆ ಮುರಳಿ ಅವರ ನಾಯಕತ್ವದಲ್ಲಿ ನಡೆಯುತ್ತಿದ್ದ ನೂರಾರು ಮಕ್ಕಳು ಸ್ಕೇಟಿಂಗ್ ಸ್ಪರ್ಧೆಗಳಲ್ಲಿ ಭಾಗವಹಿಸಿ ತಾಲೂಕಿಗೆ ಕೀರ್ತಿ ತಂದಿದ್ದಾರೆ.

ವಿದ್ಯುತ್ ವ್ಯತ್ಯಯ

ಮಂಡ್ಯ, ನ.23– ವಿ.ಸಿ.ಫಾರಂ ವಿದ್ಯುತ್ ವಿತರಣಾ ಕೇಂದ್ರದಲ್ಲಿ ತುರ್ತು ಕಾರ್ಯ ಹಮ್ಮಿಕೊಂಡಿರುವುದರಿಂದ ವಿ.ಸಿ.ಫಾರಂ, ಶಿವಳ್ಳಿ, ದುದ್ದ, ಬಿ.ಹಟ್ನ, ಬೇವಕಲ್ಲು, ಹುಲಿಕೆರೆ, ಚಂದಗಾಲು, ಹುಲ್ಲೇನಹಳ್ಳಿ, ಹೊಳಲು ಸೇರಿದಂತೆ ಸುತ್ತಮುತ್ತಲ ಗ್ರಾಮಗಳಲ್ಲಿ ನ.27ರವರೆಗೆ ಬೆಳಗ್ಗೆ 9 ರಿಂದ ಸಂಜೆ 5 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ಚಾಮನಹಳ್ಳಿ ಗ್ರಾಪಂ ಉಪಾಧ್ಯಕ್ಷರಾಗಿ ಬೋರಯ್ಯ



ಮದ್ದೂರು, ನ.23– ತಾಲೂಕಿನ ಚಾಮನಹಳ್ಳಿ ಗ್ರಾಪಂ ಉಪಾಧ್ಯಕ್ಷರಾಗಿ ಬಿ.ಬೋರಯ್ಯ ಅವಿರೋಧವಾಗಿ ಆಯ್ಕೆಗೊಂಡರು. ಅರುಣ್‌ಕುಮಾರ್ ಅವರು ಉಪಾಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿದ ಹಿನ್ನೆಲೆಯಲ್ಲಿ ಮಂಗಳವಾರ ನಡೆದ ಚುನಾವಣೆಯಲ್ಲಿ ಬಿ.ಬೋರಯ್ಯ ಅವರನ್ನು ಹೊರತುಪಡಿಸಿ ಬೇರಾರು ನಾಮಪತ್ರ ಸಲ್ಲಿಸದ ಕಾರಣ ಬಿ.ಬೋರಯ್ಯ ಅವರ ಆಯ್ಕೆಯನ್ನು ಚುನಾವಣಾಧಿಕಾರಿ ಕೆ.ಎಂ.ರೇಖಾ ಘೋಷಿಸಿದರು.

ಗ್ರಾಪಂ ಅಧ್ಯಕ್ಷೆ ಸೌಮ್ಯ ಪ್ರಕಾಶ್, ಸದಸ್ಯರಾದ ಎಸ್.ಎಂ.ಗೌಡ, ಅನಂತಕುಮಾರ್, ಸತೀಶ್, ಸುಬ್ರಮಣಿ, ಜಗದೀಶ, ಮೋಹನ್, ಲತಾಮಂಜು, ಪುಷ್ಪ, ಗೀತಾ, ದಿವ್ಯ, ಸವಿತಾ, ಗೌರಮ್ಮ, ಇಂದಿರಮ್ಮ, ಪದ್ಮಮ್ಮ, ಸಿದ್ದರಾಜು, ಅರುಣ್‌ಕುಮಾರ್, ಜೆಡಿಎಸ್ ರಾಜ್ಯ ಪ್ರಧಾನ ಕಾರ್ಯದರ್ಶಿ ಸಿ.ಕೆ.ಸ್ವಾಮಿಗೌಡ, ಮುಖಂಡರಾದ ವಿರೂಪಾಕ್ಷ ಗೌಡ, ರಾಕೇಶ್, ಕೃಷ್ಣ, ತ್ಯಾಗರಾಜು, ಕಾಡಪ್ಪ, ಚಾಮನಹಳ್ಳಿ ಮಂಜು ಇದ್ದರು.

ಶತಾಯುಷಿ ಸಣ್ಣಮ್ಮ ನಿಧನ



ಕಿಕ್ಕೇರಿ, ನ.23– ಹೋಬಳಿಯ ಸೊಳ್ಳೇಪುರ ಗ್ರಾಮದ ಶತಾಯುಷಿ ಸಣ್ಣಮ್ಮ(108) ಮಂಗಳವಾರ ನಿಧನರಾದರು.

ದಿವಂಗತ ದೊಡ್ಡಕರಿಯಪ್ಪನವರ ಪತ್ನಿಯಾದ ಮೃತರು ಗ್ರಾಮದ ಮಕ್ಕಳಿಗೆ ನೀತಿಕಥೆ ಹೇಳುತ್ತಾ ಉತ್ತಮವಾಗಿ ಬದುಕು ತಿಳಿಸುವ ಅತ್ಯುಮೆಚ್ಚಿನ ಅಜ್ಜಿಯಾಗಿದ್ದರು. ಮೊಮ್ಮಕ್ಕಳ ಸಹಾಯದಿಂದ ಎಲ್ಲಾ ಚುನಾವಣೆಗಳಲ್ಲೂ ತಪ್ಪದೆ ಮತದಾನ ಮಾಡುತ್ತ ಹಿರಿಯರಿಗೆ ಮಾರ್ಗದರ್ಶಕರಾಗಿ ತಮ್ಮ ಹಕ್ಕು ಚಲಾಯಿಸುತ್ತಿದ್ದರು. ಮೃತರು ಇಬ್ಬರು ಪುತ್ರರು, ಆರು ಪುತ್ರಿಯರು ಹಾಗೂ ಅಪಾರ ಬಂಧುವರ್ಗವನ್ನು ಅಗಲಿದ್ದಾರೆ. ಮೃತರ ತೋಟದಲ್ಲಿ ಅಂತ್ಯಕ್ರಿಯೆ ಜರುಗಿತು.

ಶಂಭುಲಿಂಗೇಶ್ವರ ಸ್ವಾಮಿ ಜಾತ್ರೆ



ಪಾಲಹಳ್ಳಿ, ನ.23– ಶ್ರೀರಂಗಪಟ್ಟಣ ತಾಲೂಕು ಪಾಲಹಳ್ಳಿ ಗ್ರಾಮದಲ್ಲಿ ಶ್ರೀಶಂಭುಲಿಂಗೇಶ್ವರ ಸ್ವಾಮಿಯ ಜಾತ್ರಾ ಮಹೋತ್ಸವ ಸಂಭ್ರಮದಿಂದ ನಡೆಯಿತು.

ಶಂಭುಲಿಂಗೇಶ್ವರ ಸ್ವಾಮಿಯ ಉತ್ಸವವು ಗ್ರಾಮದ ಪ್ರಮುಖ ಬೀದಿಗಳಲ್ಲಿ ಆಗಮಿಸುತ್ತಿದಂತೆ ಗ್ರಾಮದ ಭಕ್ತರು ಅವರ ಮನೆಗಳ ಮುಂದೆ ಭಕ್ತಿಯಿಂದ ಪೂಜೆಯನ್ನು ಸಲ್ಲಿಸಿದರು. ವಾದ್ಯಗೋಷ್ಠಿಯೊಂದಿಗೆ ದೇವರ ಮೆರವಣಿಗೆ ಸಾಗಿ ಮುಂಜಾನೆ ದೇವಸ್ಥಾನದ ಆವರಣದಲ್ಲಿ ಕೊಂಡೋತ್ಸವ ನಡೆಯಿತು.

ಗ್ರಾಮದ ಪ್ರಮುಖ ಬೀದಿಗಳಲ್ಲಿ ಆಕರ್ಷಕ ದೀಪಾಲಂಕಾರ ಮಾಡಲಾಗಿತ್ತು ಹಾಗೂ ಗ್ರಾಮಸ್ಥರು ಪಟಾಕಿ ಸಿಡಿಸಿ ಸಂಭ್ರಮಿಸಿದರು. ಪ್ರಸಾದ ವಿನಿಯೋಗವಾಯಿತು. ಮುಂಜಾಗ್ರತಾ ಕ್ರಮವಾಗಿ ಪೊಲೀಸ್ ಸಿಬ್ಬಂದಿ ನಿಯೋಜಿಸಲಾಗಿತ್ತು.

ಒಂದನೇ ಪುಟದಿಂದ

ಡಿಪಿಆರ್ ತಯಾರಿಸಲು 10 ದಿನದಲ್ಲಿ ಟೆಂಡರ್

ಆಯುಕ್ತ ಜಿ.ಟಿ.ದಿನೇಶ್‌ಕುಮಾರ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು. ಸಂಸದ ಪ್ರತಾಪ್ ಸಿಂಹ ಅವರು ಆಸಕ್ತಿ ವಹಿಸಿ ಮುಖ್ಯಮಂತ್ರಿಗಳೊಂದಿಗೆ ಮಾತನಾಡಿ, ಪೆರಿಪೆರಲ್ ರಿಂಗ್ ರಸ್ತೆಗೆ ಡಿಪಿಆರ್ ತಯಾರಿಸಲು ಟೆಂಡರ್ ಕರೆಯುವ ಪ್ರಸ್ತಾ ವನೆಗೆ ಶೀಘ್ರ ಅನುಮೋದನೆ ಕೊಡಿಸು ವಂತೆ ಮನವಿ ಮಾಡಿರುವ ಹಿನ್ನೆಲೆಯಲ್ಲಿ ಈಗಾಗಲೇ ನಗರಾಭಿವೃದ್ಧಿ ಇಲಾಖೆಯಲ್ಲಿ ತಾಂತ್ರಿಕ ಒಪ್ಪಿಗೆ ಸಿಕ್ಕಿದ್ದು, ಆಡಳಿತಾತ್ಮಕ ಅನುಮೋದನೆಯಾಗಬೇಕಾಗಿದ್ದು, ನಮ್ಮ ಅಧಿಕಾರಿಗಳು ಈ ಪ್ರಕ್ರಿಯೆ ಹಿಂದೆ ಬಿದ್ದಿದ್ದಾರೆ ಎಂದು ಜಿ.ಟಿ.ದಿನೇಶ್ ಕುಮಾರ್ ತಿಳಿಸಿದರು. ಮೈಸೂರು ನಗರ ವಿಸ್ತಾರವಾಗಿ ಬೆಳೆಯುತ್ತಿರುವುದರಿಂದ ಇಲ್ಲಿನ ಜನಸಂಖ್ಯೆ, ವಾಹನ ದಟ್ಟಣೆ, ವಾಣಿಜ್ಯ ವಹಿವಾಟುಗಳು ಹೆಚ್ಚಾಗುತ್ತಿರುವುದರಿಂದ ಮುಂದಿನ 25–30 ವರ್ಷಗಳನ್ನು ಗಮನದಲ್ಲಿರಿಸಿಕೊಂಡು ಪ್ರಸ್ತುತ ಇರುವ ಹೊರ ವರ್ತುಲ ರಸ್ತೆಯಲ್ಲಿ ವಾಹನ ಸಂಚಾರ ದಟ್ಟಣೆ ಇರುವ ಕಾರಣ ಪೆರಿಪೆರಲ್ ರಿಂಗ್ ರೋಡ್ (ಪಿಆರ್‌ಆರ್) ನಿರ್ಮಿಸಲು ಮುಡಾ ಸಿದ್ಧತೆ ಮಾಡಿಕೊಂಡಿದೆ ಎಂದು ಆಯುಕ್ತರು ತಿಳಿಸಿದರು. 45 ಮೀಟರ್ ಅಗಲ ಹಾಗೂ 73.25 ಕಿ.ಮೀ. ಉದ್ದ (120 ಕಿ.ಮೀ.ವರೆಗೆ)ದ ಪೆರಿಪೆರಲ್ ರಿಂಗ್ ರಸ್ತೆಗೆ 824 ಎಕರೆ ಭೂಮಿ ಅಗತ್ಯವಿದೆ. ಈ ಉದ್ದೇಶಕ್ಕಾಗಿ ಭೂ ಸ್ವಾಧೀನ ಮಾಡಿಕೊಂಡು ನಂತರ ರಸ್ತೆ ಕಾಮಗಾರಿ ಕೈಗೆತ್ತಿಕೊಳ್ಳಬೇಕು. ಮುಖ್ಯ ರಸ್ತೆಯಲ್ಲಿ 6 ಪಥ ಹಾಗೂ ಸರ್ವಿಸ್ ರಸ್ತೆಯಲ್ಲಿ 4 ಪಥದ ರಸ್ತೆಗಳಿರುತ್ತವೆ ಎಂದು ಅವರು ತಿಳಿಸಿದ್ದಾರೆ.

ಪ್ರಸ್ತುತ ಇರುವ 45.5 ಕಿ.ಮೀ. ಉದ್ದದ ರಿಂಗ್ ರಸ್ತೆಯು ಮೈಸೂರು–ಬೆಂಗಳೂರು ಹೆದ್ದಾರಿ, ಕೆಆರ್‌ಎಸ್ ರಸ್ತೆ, ಹುಣಸೂರು ರಸ್ತೆ, ಬೋಗಾದಿ ರಸ್ತೆ, ಹೆಚ್.ಡಿ.ಕೋಟೆ ರಸ್ತೆ, ತಿ.ನರಸೀಪುರ ರಸ್ತೆ, ಬನ್ನೂರು ರಸ್ತೆಗಳಿಗೂ ಸಂಪರ್ಕ ಕಲ್ಪಿಸುತ್ತಿದೆ. ಆದರೆ ಪೆರಿಪೆರಲ್ ರಸ್ತೆಯು ಮೈಸೂರು–ಬೆಂಗಳೂರು ದಶಪಥ ಎಕ್ಸ್‌ಪ್ರೆಸ್ ವೇ, ಮೋಸಂಬಾಯನಹಳ್ಳಿ ರಸ್ತೆ, ದ್ಯಾವಲಾಪುರ ರಸ್ತೆ, ಮೈಸೂರು–ಊಟಿ ರೋಡ್, ಕಡಕೊಳ–ಜಯಪುರ ರಸ್ತೆ, ಮೈಸೂರು ಮಾನಂದವಾಡಿ ರಸ್ತೆ, ಕೆಹೆಚ್‌ಬಿ ಪ್ರೈವೇಟ್ ಲೇಔಟ್ ರೋಡ್, ಜ್ಞಾನಗಂಗಾ ಲೇಔಟ್, ಬಲ್ಲಹಳ್ಳಿ ಬಡಾವಣೆ, ಹುಯಿಲಾಳು–ಇಲವಾಲ ರೋಡ್, ನಾಗವಾಲ–ಇಲವಾಲ ರಸ್ತೆ ಮತ್ತು ಇಲವಾಲ–ಪಶ್ಚಿಮವಾಹಿನಿಗಳಲ್ಲಿ ಹಾದು ಹೋಗಲಿದೆ.

ಪೆರಿಪೆರಲ್ ರಸ್ತೆ ನಿರ್ಮಾಣವಾದರೆ ಗ್ರಾಮೀಣ ಪ್ರದೇಶದ ಸುಮಾರು 40 ಗ್ರಾಮಗಳು ಸಂಪರ್ಕ ಪಡೆಯಲಿವೆ. ನಗರಾಭಿವೃದ್ಧಿ ಇಲಾಖೆಗೆ ಮುಡಾ ಸಲ್ಲಿಸಿರುವ ಪ್ರಸ್ತಾವನೆ ಪ್ರಕಾರ, ಭೂ ಸ್ವಾಧೀನ ಮತ್ತು ರಸ್ತೆ ನಿರ್ಮಾಣದ ವೆಚ್ಚ 1,971 ಕೋಟಿ ರೂ.ಗಳಾಗಬಹುದೆಂದು ಅಂದಾಜಿಸಲಾಗಿದೆ. ಮೈಸೂರು–ಬೆಂಗಳೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ (ಬಿಎಂಐಸಿ), ನೈಸ್ ರಸ್ತೆಗಳಂತಹ ಬೃಹತ್ ಯೋಜನೆಗಳಿಗೆ ಡಿಪಿಆರ್ ಸಿದ್ಧಪಡಿಸಿ ಅನುಭವವಿರುವ ಏಜೆನ್ಸಿಗಳಿಗೆ ಟೆಂಡರ್ ಮೂಲಕ ಪೆರಿಪೆರಲ್ ರಿಂಗ್ ರಸ್ತೆ ನಿರ್ಮಾಣಕ್ಕೆ ಡಿಪಿಆರ್ ತಯಾರಿಸಲು ಜವಾಬ್ದಾರಿ ವಹಿಸಲಾಗುತ್ತದೆ ಎಂದು ಜಿ.ಟಿ.ದಿನೇಶ್ ಕುಮಾರ್ ತಿಳಿಸಿದ್ದಾರೆ. ಇತ್ತೀಚೆಗೆ ಮೈಸೂರಿಗೆ ಭೇಟಿ ನೀಡಿದ್ದ ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವ ನಿತಿನ್ ಗಡ್ಕರಿ ಅವರನ್ನು ಸಂಸದ ಪ್ರತಾಪ್ ಸಿಂಹ ಭೇಟಿ ಮಾಡಿ ಪೆರಿಪೆರಲ್ ರಿಂಗ್ ರಸ್ತೆ ನಿರ್ಮಾಣ ಸಂಬಂಧ ಮನವಿ ಮಾಡಿದಾಗ ಭಾರತ ಮೂಲ ಪರಿಯೋಜನೆ 2ನೇ ಹಂತದ ಯೋಜನೆಯಡಿ ಪ್ರಸ್ತಾವನೆ ಸಲ್ಲಿಸುವಂತೆ ಸಲಹೆ ನೀಡಿದ್ದನ್ನು ಇಲ್ಲಿ ಗಮನಿಸಬಹುದು. ನಂತರ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಅವರನ್ನೂ ಭೇಟಿ ಮಾಡಿ ಮನವಿ ಸಲ್ಲಿಸಿದ್ದ ಪ್ರತಾಪ್ ಸಿಂಹ, ಡಿಪಿಆರ್ ತಯಾರಿಸಲು ಸರ್ಕಾರದಿಂದ ಅನುಮೋದನೆ ಕೊಡಿಸುವಂತೆ ಕೋರಿಕೊಂಡಿದ್ದನ್ನು ಇಲ್ಲಿ ಸ್ಮರಿಸಬಹುದಾಗಿದೆ.

ಪುನರುಜ್ಜೀವನ ಕಾಮಗಾರಿ ಆರಂಭ

ಕೆರೆ ಏರಿ ಅಭಿವೃದ್ಧಿಪಡಿಸಿ ಕೆರೆಯ ಸೌಂದರ್ಯ ವೃದ್ಧಿಸಲು ಡಿಪಿಆರ್ ಸಿದ್ಧಪಡಿಸಿರುವಂತೆ ಪುನರುಜ್ಜೀವನಗೊಳಿಸಿದಲ್ಲಿ ಅಂತರ್ಜಲ ವೃದ್ಧಿಯಾಗಿ ಬೋರ್‌ವೆಲ್‌ನಿಂದಲೂ ಶುದ್ಧ ನೀರು ಬರುತ್ತದೆ ಎಂದು ಅವರು ತಿಳಿಸಿದರು. ದಾಖಲೆ ಗಳ ಪ್ರಕಾರ ಕೆರೆಯು 12.37 ಎಕರೆ ಪ್ರದೇಶವಾಗಿದ್ದು, ಈಗ ಕೆಲವರು ಒತ್ತುವರಿ ಮಾಡಿಕೊಂಡಿದ್ದಾರೆ.

ಸರ್ವೆ ಮಾಡಿಸಿ ಒತ್ತುವರಿಯಾ ಗಿರುವ ಪ್ರದೇಶವನ್ನು ತೆರವು ಮಾಡಿಸಿ, ಅಭಿವೃದ್ಧಿ ಪಡಿಸುತ್ತೇವೆ ಎಂದು ಮುಡಾ ಆಯುಕ್ತರು ಸಂಸದ ಪ್ರತಾಪ್ ಸಿಂಹರಿಗೆ ಭರವಸೆ ನೀಡಿದರು. ಕೆಲವರು ಅನಧಿಕೃತವಾಗಿ ಕೆರೆ ಜಾಗದಲ್ಲಿ ಮನೆ ಕಟ್ಟಿದ್ದಾರೆ. ಖಾಸಗಿ ಬಡಾವಣೆಗೆ ಸಂಪರ್ಕ ಕಲ್ಪಿಸಲು ಕೆರೆ ಮಧ್ಯೆ ರಸ್ತೆ ನಿರ್ಮಿಸಲಾಗಿದೆ. ಕಲುಷಿತ ಒಳಚರಂಡಿ ನೀರನ್ನು ಕೆಲ ನಿವಾಸಿಗಳು ದೇವನೂರು ಕೆರೆಗೆ ಬಿಡುತ್ತಿದ್ದಾರೆ ಎಂದು ಆರೋಪಿಸಿ ಬಿಜೆಪಿ ಮುಖಂಡರು ಸ್ಥಳಕ್ಕೆ ತೆರಳಿ ಆರೋಪಿ ಸಿದ್ದಲ್ಲದೇ, ಒತ್ತುವರಿ ತೆರವುಗೊಳಿಸುವಂತೆ ಒತ್ತಾಯಿಸಿದರು. ಇದೇ ವೇಳೆ ಕೆರೆ ಮಧ್ಯೆ ರಸ್ತೆ ನಿರ್ಮಿಸುವ ಕಾಮಗಾರಿಯಲ್ಲಿ ತೊಡಗಿದ್ದ ಜೆಸಿಬಿಯನ್ನು ವಶಕ್ಕೆ ಪಡೆದರು. ಮುಡಾ ಸೂಪರಿಂಟೆಂಡಿಂಗ್ ಇಂಜಿನಿಯರ್ ಚೆನ್ನಕೇಶವ, ವಿಶೇಷ ಭೂ ಸ್ವಾಧೀನಾಧಿಕಾರಿ ವಿಷ್ಣುವರ್ಧನ್ ರೆಡ್ಡಿ, ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್ ಶಿವಣ್ಣ, ರಾಜಶೇಖರ್ ಹಾಗೂ ಇತರರು ಈ ಸಂದರ್ಭ ಉಪಸ್ಥಿತರಿದ್ದರು.

ಐವರು ಆಯುರ್ವೇದ ವೈದ್ಯರಿಗೆ ಸ್ವಾಸ್ಥ್ಯಮಿತ್ರ ಪ್ರಶಸ್ತಿ ಪ್ರದಾನ



ಮೈಸೂರು, ನ.23(ಎಸ್‌ಪಿಎನ್)– ಆಯುರ್ವೇದದಲ್ಲಿ ಹಲವು ವರ್ಷಗಳಿಂದ ಉತ್ತಮ ಸಾಧನೆ ಮಾಡಿದ ಐದು ಮಂದಿ ವೈದ್ಯರಿಗೆ ರಾಮಕೃಷ್ಣ ವಿದ್ಯಾಸಂಸ್ಥೆಯ ಶ್ರೀ ಶಿವಕಾಂತಾನಂದ ಜೀ ಅವರು 'ಸ್ವಾಸ್ಥ್ಯಮಿತ್ರ' ಪ್ರಶಸ್ತಿಯನ್ನು ಬುಧವಾರ ಪ್ರದಾನ ಮಾಡಿದರು.

ಮೈಸೂರು ಸಯ್ಯಾಜಿರಾವ್ ರಸ್ತೆಯಲ್ಲಿರುವ ಆಯುರ್ವೇದ ಕಾಲೇಜು ಆವರಣದಲ್ಲಿ ಆಯುರ್ವೇದ ಕಾಲೇಜು ಹಾಗೂ ಆರೋಗ್ಯ ಭಾರತಿ ಸಂಸ್ಥೆ ಸಹಯೋಗದೊಂದಿಗೆ ಧನ್ವಂತರಿ ಜಯಂತಿ ಕಾರ್ಯಕ್ರಮದ ಅಂಗವಾಗಿ ಆಯುರ್ವೇದ ಕ್ಷೇತ್ರದಲ್ಲಿ ಉತ್ತಮ ಸಾಧನೆ ಮಾಡಿರುವ ಡಾ.ಬಿ.ಎನ್.ಶಶಿಧರ, ಡಾ.ಕೆ.ವಿ.ಮಮತ, ಡಾ.ಗೌರಿಶಂಕರ, ಡಾ.ಪದ್ಮಾನ ಸುಬ್ರಹ್ಮಣ್ಯ ಭಟ್, ಡಾ.ಬಿ.ಎಸ್.ಶ್ರೀಧರ್ ಅವರಿಗೆ 'ಸ್ವಾಸ್ಥ್ಯಮಿತ್ರ' ಪ್ರಶಸ್ತಿಯನ್ನು ಪ್ರದಾನ ಮಾಡಿ, ಅವರು ಮಾತನಾಡಿದರು.

ವಿದ್ಯೆ ಮತ್ತು ಸಾಧನೆ ಸಾಧಕರ ಸ್ವತ್ತು. ನಾಟಿ ವೈದ್ಯನಾಗಬೇಕಾದರೂ ಐದಾರು ವರ್ಷ ತನ್ನ ಗುರುವಿನ ಜೊತೆ ಅಲೆದಾಡಬೇಕು. ಆಗ ಮಾತ್ರ ಗುರುವಿನಿಂದ ನಾಟಿ ವೈದ್ಯ ಪದ್ಧತಿ ಕಲಿಯಲು ಸಾಧ್ಯ. ಹಾಗಾಗಿ ವೈದ್ಯಕೀಯ ವಿದ್ಯಾರ್ಥಿಗಳು ತಾವು ಅಂದುಕೊಂಡ ಗುರಿ ಸಾಧಿಸಬೇಕಾದರೆ ಮನಸ್ಸಿನ ಸಂಯಮ, ತಾಳ್ಮೆ, ಅಧ್ಯಯನ ಜೊತೆಯಲ್ಲಿ ಸಾಗಬೇಕು ಎಂದು ಹೇಳಿದರು.

ಯೋಗ ಎಂದರೆ ಆತ್ಮ–ಪರಮಾತ್ಮ ಎಂದರ್ಥ. ಪ್ರತಿಯೊಬ್ಬರು ಯೋಗದ ಮೂಲಕ ರಾಜಯೋಗ, ಮನೋವಿಕಾಸ ಪಡೆಯಲು ಸಾಧ್ಯವಿದೆ. ಆಯುರ್ವೇದ ದೇಶಿಯ ವೈದ್ಯ ಪದ್ಧತಿಯಾಗಿರುವುದರಿಂದ. ಈ ಪದ್ಧತಿಯಲ್ಲಿ ಜನರಿಗೆ ಉತ್ತಮ ಚಿಕಿತ್ಸೆ ನೀಡಬೇಕು ಎಂದು ಕಿವಿಮಾತು ಹೇಳಿದರು.

ಶ್ರೀ ರಾಮಕೃಷ್ಣ ಪರಮಹಂಸರು ಯೋಗದ ಮೂಲಕ ಪರಮಾತ್ಮನನ್ನು ಒಲಿಸಿಕೊಳ್ಳಲು ಪ್ರಯತ್ನಿಸಿದರು. ಅದರಂತೆ ಪ್ರತಿಯೊಬ್ಬರು ಯೋಗ ಕಲಿಕೆಗೆ ಹೆಚ್ಚಿನ ಆದ್ಯತೆ ನೀಡಬೇಕು. ಅಲ್ಲದೆ ಆಯುರ್ವೇದ ಕಾಲೇಜು ಸ್ಥಾಪನೆಯಾಗಿ ಇಂದಿಗೆ 120 ವರ್ಷಗಳ ಕಳೆದಿದೆ. ಈ ಕಾಲೇಜಿನಲ್ಲಿ ಓದಿದ ಅನೇಕ ಹಳೆಯ ವಿದ್ಯಾರ್ಥಿಗಳು ಈಗ ಉನ್ನತ ಹುದ್ದೆಯಲ್ಲಿದ್ದಾರೆ. ಅವರ ಮಾರ್ಗದರ್ಶನವನ್ನು ಪಡೆದುಕೊಳ್ಳುವಂತೆ ಸಲಹೆ ನೀಡಿದರು.

ಕೆಲ ವರ್ಷಗಳ ಹಿಂದೆ ಜಾಂಡೀಸ್ ರೋಗಕ್ಕೆ ತುತ್ತಾಗಿದ್ದೆ. ಆ ಸಂದರ್ಭದಲ್ಲಿ ಆಯುರ್ವೇದದಲ್ಲಿ ಚಿಕಿತ್ಸೆ ಪಡೆದು ಗುಣಮುಖರಾದ ಪ್ರಸಂಗವನ್ನು ವಿವರಿಸಿದ ಶ್ರೀಗಳು, ಈ ಹಿಂದೆ ನಾಟಿ ವೈದ್ಯರಾಗಲೂ ಐದಾರು ವರ್ಷ ಗುರುವಿನೊಂದಿಗೆ ಅಲೆದಾಡಬೇಕಿತ್ತು. ನಂತರ ಶಿಷ್ಯನಿಂದ, ವ್ಯವಹಾರಿಕವಾಗಿ ಈ ವಿದ್ಯೆಯನ್ನು ಉಪಯೋಗಿಸುವುದಿಲ್ಲ ಎಂಬ ವಾಗ್ದಾನ ಪಡೆದು, ಕಲಿಸಿಕೊಡುತ್ತಿದ್ದ ಪ್ರಸಂಗವನ್ನು ವಿವರಿಸಿದರು.

ವೈದ್ಯ ವೃತ್ತಿಯಲ್ಲಿರುವವರು ತಮ್ಮಲ್ಲಿಗೆ ಬರುವ ರೋಗಿಗಳೊಂದಿಗೆ ಉತ್ತಮ ನಡವಳಿಕೆ, ಮಾನವೀಯತೆಯಿಂದ ಚಿಕಿತ್ಸೆ ನೀಡಿದರೆ, ಅದೆಷ್ಟೋ ರೋಗಿಗಳು ಗುಣಮುಖರಾಗುತ್ತಾರೆ ಎಂದರು. ಈ ವೇಳೆ ಆಯುರ್ವೇದ ಕಾಲೇಜು ವಿದ್ಯಾರ್ಥಿಗಳಿಗಾಗಿ ರಚಿಸಿದ್ದ ರಸಶಾಸ್ತ್ರ ಪುಸ್ತಕ ಬಿಡುಗಡೆಗೊಳಿಸಲಾಯಿತು. ವೇದಿಕೆಯಲ್ಲಿ ಪ್ರಭಾರ ಪ್ರಾಂಶುಪಾಲ ಡಾ.ವೆಂಕಟಕೃಷ್ಣ, ಆಯುರ್ವೇದ ವೈದ್ಯ ಸಂಘದ ಅಧ್ಯಕ್ಷ ಡಾ.ಬಿ.ಗುರುಬಸವರಾಜು ಇತರರಿದ್ದರು.

ನ.28ರಂದು ಪಿಂಚಣಿದಾರರಿಗೆ ಜಾಗೃತಿ ಅಭಿಯಾನ

ಮೈಸೂರು,ನ.23–ಕೇಂದ್ರ ಸರ್ಕಾರದ ಪಿಂಚಣಿದಾರರಿಗೆ ಜೀವನ ಪ್ರಮಾಣ ಪತ್ರವನ್ನು ಡಿಜಿಟಲ್ ಮಾಧ್ಯಮದ ಮೂಲಕ ಸಲ್ಲಿಸಲು ಉತ್ತೇಜಿಸುವ ಸಲುವಾಗಿ ಭಾರತ ಸರ್ಕಾರದ ಪಿಂಚಣಿ ಮತ್ತು ಪಿಂಚಣಿದಾರರ ಕಲ್ಯಾಣ ಇಲಾಖೆ, ಸಿಬ್ಬಂದಿ, ಸಾರ್ವಜನಿಕ ಕುಂದುಕೊರತೆಗಳು ಮತ್ತು ಪಿಂಚಣಿಗಳ ಸಚಿವಾಲಯದವರು ರಾಷ್ಟ್ರವ್ಯಾಪಿ ಅಭಿಯಾನವನ್ನು ಆರಂಭಿಸಿದ್ದಾರೆ. ನ.28 ಸೋಮವಾರ ಬೆಳಗ್ಗೆ 10 ರಿಂದ ಸಂಜೆ 4ರವರೆಗೆ ಮೈಸೂರಿನಲ್ಲಿ ಪಿಂಚಣಿದಾರರಿಗೆ ಭಾರತೀಯ ಸ್ಟೇಟ್ ಬ್ಯಾಂಕ್ ವತಿಯಿಂದ ಮೈಸೂರು ಮುಖ್ಯ ಶಾಖೆ ಮೋತಿಕಾನ ಬಿಲ್ಡಿಂಗ್, ಹೊಸ ಸಯ್ಯಾಜಿರಾವ್ ರಸ್ತೆ (ಬನುಮಯ್ಯ ಕಾಲೇಜು ಹತ್ತಿರ) ಇಲ್ಲಿ ಜಾಗೃತಿ ಅಭಿಯಾನ ಹಮ್ಮಿಕೊಂಡಿದೆ. ಎಲ್ಲಾ ಪಿಂಚಣಿದಾರರು ಡಿಜಿಟಲ್ ಮಾಧ್ಯಮದ ಮೂಲಕ ತಮ್ಮ ಜೀವನ ಪ್ರಮಾಣ ಪತ್ರಗಳನ್ನು ಸಲ್ಲಿಸಲು ಬ್ಯಾಂಕಿನ ಶಾಖೆಗೆ ಭೇಟಿ ನೀಡಬಹುದು. ಈ ಮೊದಲು ಜೀವನ ಪ್ರಮಾಣ ಪತ್ರಗಳನ್ನು ಭೌತಿಕ ರೂಪದಲ್ಲಿ ಸಲ್ಲಿಸಬೇಕಾಗಿತ್ತು. ಇದು ಪಿಂಚಣಿದಾರರಿಗೆ ವಿಳಂಬಕ್ಕೆ ಕಾರಣವಾಗುತ್ತಿತ್ತು. ಈಗ ಜೀವನ ಪ್ರಮಾಣ ಪತ್ರಗಳನ್ನು ಒಂದು ಬಟನ್ ಕ್ಲಿಕ್ ಮಾಡುವ ಮೂಲಕ ಸಲ್ಲಿಸಬಹುದು. ಈ ಸೌಲಭ್ಯವೂ ರಾಜ್ಯ ಸರ್ಕಾರದ ಪಿಂಚಣಿದಾರರಿಗೂ ಲಭ್ಯವಿದೆ.



ಮೈಸೂರಿನ ಕೆ.ಆರ್.ಮೊಹಲ್ಲಾದ ಶ್ರೀ ಮಹದೇಶ್ವರ ಸ್ವಾಮಿ ದೇವಸ್ಥಾನದ ಆವರಣದಲ್ಲಿ 142ನೇ ವರ್ಷದ ಮಹದೇಶ್ವರ ಸ್ವಾಮಿ ಅಗ್ನಿ ಕೊಂಡೋತ್ಸವ ಬುಧವಾರ ನೆರವೇರಿತು.

ಕಾರಿನ ಸಬ್ಸಿಡಿ ಹಣ ಮಂಜೂರಾತಿಗೆ ಲಂಚ ಸ್ವೀಕಾರ

ಲೋಕಾಯುಕ್ತ ಬಲೆಗೆ ಬಿದ್ದ ಮಹಿಳಾ ಸಿಬ್ಬಂದಿ



ಮಡಿಕೇರಿ,ನ.23– ಟ್ಯಾಕ್ಸಿ ಕಾರಿನ ಸಬ್ಸಿಡಿ ಹಣ ಮಂಜೂರಾತಿಗಾಗಿ ವ್ಯಕ್ತಿಯೊಬ್ಬರಿಂದ 10 ಸಾವಿರ ಹಣ ಸ್ವೀಕರಿಸುತ್ತಿದ್ದ ಕರ್ನಾಟಕ ಅಲ್ಪ ಸಂಖ್ಯಾತ ಅಭಿವೃದ್ಧಿ ನಿಗಮದ ಮಹಿಳಾ ಸಿಬ್ಬಂದಿಯೊಬ್ಬರು ಲೋಕಾಯುಕ್ತ ಬಲೆಗೆ ಬಿದ್ದಿದ್ದಾರೆ.

ನಿಗಮದ ಹೊರ ಗುತ್ತಿಗೆ ಸಿಬ್ಬಂದಿ ಪ್ರಥಮ ದರ್ಜೆ ಸಹಾಯಕಿ ಹುದ್ದೆಯಲ್ಲಿ ಕೆಲಸ ನಿರ್ವಹಿಸುತ್ತಿದ್ದ ಲತಾ ಆಚಾರ್ ಲೋಕಾಯುಕ್ತ ಬಲೆಗೆ ಬಿದ್ದವರಾಗಿದ್ದು, ಅವರನ್ನು ಬಂಧಿಸಲಾಗಿದೆ.

ಪ್ರಕರಣ ಹಿನ್ನೆಲೆ: ಸೋಮವಾರಪೇಟೆ ನಿವಾಸಿ ಲತೀಫ್ ಎಂಬವರು ಕರ್ನಾಟಕ ಅಲ್ಪಸಂಖ್ಯಾತ ಅಭಿವೃದ್ಧಿ ನಿಗಮದ ಮೂಲಕ ಟ್ಯಾಕ್ಸಿ ಪಡೆಯಲು ಅರ್ಜಿ ಸಲ್ಲಿಸಿದ್ದರು. ಈ ಟ್ಯಾಕ್ಸಿಗೆ ಒಟ್ಟು 2.50 ಲಕ್ಷ ರೂ.ಗಳ ಸಬ್ಸಿಡಿ ಕೂಡ ಲಭ್ಯವಿದ್ದು, ಈ ಸಬ್ಸಿಡಿಗೂ ತಮ್ಮನ್ನು ಪರಿಗಣಿಸುವಂತೆ ಲತೀಫ್ ಅರ್ಜಿ ಸಲ್ಲಿಸಿದ್ದರು. ಈ ವೇಳೆ ಸಬ್ಸಿಡಿ ಹಣದ ಮಂಜೂರಾತಿ ಪಟ್ಟಿಯಲ್ಲಿ ಹೆಸರು ಸೇರಿಸಲು ಶೇ.10ರಂತೆ ಹಣ ನೀಡಬೇಕೆಂದು ಲತಾ ಆಚಾರ್ ಲತೀಫ್ ಅವರಿಗೆ ಸೂಚಿಸಿದ್ದರು.

ಬಳಿಕ ನಡೆದ ಒಪ್ಪಂದದಂತೆ ಒಟ್ಟು 20 ಸಾವಿರ ರೂ.ಗಳಿಗೆ ಮಾತುಕತೆ ನಡೆದು 2 ಕಂತುಗಳಲ್ಲಿ ಹಣ ನೀಡುವಂತೆ ಲತಾ ಆಚಾರ್ ಹೇಳಿದ್ದರಲ್ಲದೇ, ಮೊದಲ ಕಂತು 10 ಸಾವಿರ ನೀಡಿದ 3 ದಿನಗಳಲ್ಲಿ 2ನೇ ಕಂತು ನೀಡುವಂತೆ ಸೂಚಿಸಿದ್ದರು. ಈ ಎಲ್ಲಾ ಬೆಳವಣಿಗೆಗಳಿಂದ ಮನನೊಂದ ಯೋಜನೆಯ ಫಲಾನುಭವಿ ಲತೀಫ್ ಕೊಡಗು ಲೋಕಾಯುಕ್ತಕ್ಕೆ ದೂರು ನೀಡಿದ್ದರು.

ಅದರಂತೆ ಬುಧವಾರ ಮೊದಲ ಕಂತು ಹಣ 10 ಸಾವಿರ ರೂ.ಗಳನ್ನು ಸ್ವೀಕರಿಸುವ ಸಂದರ್ಭ ಲೋಕಾಯುಕ್ತ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ದಾಳಿ ನಡೆಸಿ ನಗದು ಸಹಿತ ಹೊರ ಗುತ್ತಿಗೆ ಸಿಬ್ಬಂದಿ ಲತಾ ಆಚಾರ್ ಅವರನ್ನು ಬಂಧಿಸಿದ್ದಾರೆ.

ಮಡಿಕೇರಿ ಲೋಕಾಯುಕ್ತ ವೃತ್ತ ನಿರೀಕ್ಷಕ ಲೋಕೇಶ್, ಮೈಸೂರು ಲೋಕಾಯುಕ್ತದ ವೃತ್ತನಿರೀಕ್ಷಕಿ ಜಯರತ್ನ ಮತ್ತು ಸಿಬ್ಬಂದಿಗಳು ಕಾರ್ಯಾಚರಣೆ ನಡೆಸಿದ್ದಾರೆ.

ಸ್ಥಳೀಯ ಸಂಸ್ಥೆಗಳ ಹೊರಗುತ್ತಿಗೆದಾರರಿಂದ

ನ.28ರಂದು ಬೆಂಗಳೂರು ಚಲೋ



ಮಡಿಕೇರಿ,ನ.23– ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಹೊರಗುತ್ತಿಗೆ ಆಧಾರದಲ್ಲಿ ದುಡಿಯುತ್ತಿರುವ ನೌಕರರನ್ನು ಹೊರ ಗುತ್ತಿಗೆ ಆಧಾರಕ್ಕೆ ಬದಲಾಗಿ ನೇರ ನೇಮಕಾತಿಗೆ ಒಳಪಡಿಸಬೇಕೆಂದು ಆಗ್ರಹಿಸಿ ನ.28ರಂದು 'ಬೆಂಗಳೂರು ಚಲೋ' ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ಕರ್ನಾಟಕ ರಾಜ್ಯ ಪಾಲಿಕೆ, ನಗರಸಭೆ, ಪುರಸಭೆ, ಪಟ್ಟಣ ಪಂಚಾಯ್ತಿ ಹೊರಗುತ್ತಿಗೆ ನೌಕರರ ಸಂಘದ ರಾಜ್ಯಾಧ್ಯಕ್ಷ ಎಂ.ಬಿ.ನಾಗಣ್ಣಗೌಡ ತಿಳಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದಾದ್ಯಂತ ಇರುವ 319 ನಗರಪಾಲಿಕೆ, ನಗರಸಭೆ, ಪುರಸಭೆ, ಪಟ್ಟಣ ಪಂಚಾಯ್ತಿಗಳನ್ನು ಒಳಗೊಂಡ ಸ್ಥಳೀಯ ಸಂಸ್ಥೆಗಳಲ್ಲಿ 53 ಸಾವಿರ ಮಂದಿ ಹೊರಗುತ್ತಿಗೆ ನೌಕರರು ಕಾರ್ಯನಿರ್ವಹಿಸುತ್ತಿದ್ದಾರೆ. ಸ್ವಚ್ಛತೆ, ನೀರು ಸರಬರಾಜು ಸೇರಿದಂತೆ 54 ವಿವಿಧ ಸೇವೆಗಳನ್ನು ಸಾರ್ವಜನಿಕರಿಗೆ ಒದಗಿಸುವಲ್ಲಿ ಇವರು ಕಾರ್ಯನಿರ್ವಹಿಸುತ್ತಿದ್ದು, ಇವರನ್ನು ಹೊರಗುತ್ತಿಗೆ ಆಧಾರದಲ್ಲಿಯೇ ಪರಿಗಣಿಸಲಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಕಳೆದ ಜುಲೈ ತಿಂಗಳಿನಲ್ಲಿ ರಾಜ್ಯ ವ್ಯಾಪಿ ಹೊರಗುತ್ತಿಗೆ ನೌಕರರು ಸ್ವಚ್ಛತಾ ಕಾರ್ಯ, ನೀರು ಸರಬರಾಜು ಕಾರ್ಯವನ್ನು ಸ್ಥಗಿತಗೊಳಿಸಿ ನಿರಂತರ 4 ದಿನಗಳ ಕಾಲ ಹೋರಾಟ ನಡೆಸಿದ್ದರು. ಈ ಸಂದರ್ಭ ರಾಜ್ಯದ ಮುಖ್ಯಮಂತ್ರಿಗಳು ಹೊರಗುತ್ತಿಗೆ ನೌಕರ ಪದ್ಧತಿಯನ್ನು ರದ್ದುಪಡಿಸುವ ಭರವಸೆಯನ್ನು ನೀಡಿದ್ದರು. ಆದರೆ, ಈ ಬಗ್ಗೆ ಇಲ್ಲಿಯವರೆಗೂ ಸ್ಪಷ್ಟ ನಿಲುವನ್ನು ತಳೆದಿಲ್ಲವೆಂದು ತೀವ್ರ ಅಸಮಾಧಾನ ವ್ಯಕ್ತಪಡಿಸಿದರು.

ಕೊರೊನಾ ಸಾಂಕ್ರಾಮಿಕ ಸಂದರ್ಭ ಕೊರೊನಾ ವಾರಿಯರ್ಸ್‌ಗಳಾಗಿ ಜೀವದ ಹಂಗು ತೊರೆದು ಹೊರಗುತ್ತಿಗೆ ನೌಕರರು ಮಾನವೀಯ ಸೇವೆ ಸಲ್ಲಿಸಿದ್ದಾರೆ. ಹೀಗಿದ್ದೂ ಹೊರಗುತ್ತಿಗೆ ನೌಕರರು ಅತ್ಯಂತ ಕಡಿಮೆ ವೇತನವನ್ನು ಪಡೆಯುತ್ತಿದ್ದಾರೆ. ಇವರಿಗೆ ಕನಿಷ್ಠ ವೇತನಕ್ಕೆ ಬದಲಾಗಿ 'ಬದುಕುವ ವೇತನ' ನೀಡಬೇಕೆಂದು ಒತ್ತಾಯಿಸಿದರು. ಕೊರೊನಾ ಸಾಂಕ್ರಾಮಿಕದ ಅವಧಿಯಲ್ಲಿ ರಾಜ್ಯ ವ್ಯಾಪಿ 30 ಪೌರಕಾರ್ಮಿಕರು ಸಾವನ್ನಪ್ಪಿದ್ದಾರೆ. ಆದರೆ, ಇಲ್ಲಿಯವರೆಗೂ ಸರಕಾರದ ನಿಯಮಾನುಸಾರ ಸಂತ್ರಸ್ತ ಕುಟುಂಬಗಳಿಗೆ ಪರಿಹಾರ ದೊರಕಿಲ್ಲ ಎಂದು ತೀವ್ರ ಆಕ್ರೋಶ ವ್ಯಕ್ತಪಡಿಸಿದರು. ಪ್ರಸ್ತುತ ಹೊರಗುತ್ತಿಗೆ ಆಧಾರದಲ್ಲಿ ಕಾರ್ಯನಿರ್ವಹಿಸುತ್ತಿರುವ ವಾಹನ ಚಾಲಕರು, ಸ್ಯಾನಿಟೈಸರ್ ಸೂಪರ್‌ವೈಸರ್, ಲೋಡರ್ಸ್, ಕ್ಲೀನರ್ಸ್, ಹೆಲ್ಪರ್ಸ್, ಯುಜಿಡಿ ಕಾರ್ಮಿಕರನ್ನು ನೇರ ನೇಮಕಾತಿಗೆ ತರಲು ಸರ್ಕಾರ ಒಪ್ಪಿಗೆ ನೀಡಿದೆ. ಆದರೆ, ಇದೇ ಸಂದರ್ಭ ಇನ್ನುಳಿದ ನೀರು ಸರಬರಾಜು ಸಹಾಯಕರನ್ನು, ಡಾಟ ಆಪರೇಟರ್‌ಗಳನ್ನು ನೇರ ನೇಮಕಾತಿಗೆ ಒಳಪಡಿಸಬೇಕೆಂದು ಆಗ್ರಹಿಸಿ, ಈ ಎಲ್ಲಾ ಕಾರಣಗಳನ್ನು ಮುಂದಿಟ್ಟುಕೊಂಡು ಬೆಂಗಳೂರು ಚಲೋ ಪ್ರತಿಭಟನೆ ಆಯೋಜಿಸಲಾಗಿದೆ ಎಂದು ಸ್ಪಷ್ಟಪಡಿಸಿದರು.

ಧ್ವನಿ ಎತ್ತಲು ಭಯವಿದೆ: ಮಡಿಕೇರಿ ನಗರಸಭೆಯ ಹೊರಗುತ್ತಿಗೆ ನೌಕರರಿಗೆ ಕಳೆದ 7 ತಿಂಗಳಿನಿಂದ ವೇತನ ಪಾವತಿಯಾಗದಿರುವ ಕುರಿತು ನೌಕರರ ಜಿಲ್ಲಾ ಸಂಘ ಮೌನವಾಗಿದ್ದ ಬಗ್ಗೆ ಕೇಳಿದ ಪ್ರಶ್ನೆಗೆ ನಾಗಣ್ಣಗೌಡ ಅವರು, ಹೊರಗುತ್ತಿಗೆ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರಿಗೆ ಇಂತಹ ವಿಚಾರಗಳ ಬಗ್ಗೆ ಧ್ವನಿ ಎತ್ತುವುದಕ್ಕೆ ಅಧಿಕಾರಿಗಳ ಆತಂಕ ಇದೆ. ನ್ಯಾಯಬದ್ಧ ವಿಚಾರಗಳ ಬಗ್ಗೆ ಮಾತನಾಡಿದರೂ ಅಧಿಕಾರಿಗಳು ನೆಪಗಳನ್ನು ಒಡ್ಡಿ ತಮ್ಮ ಕೆಲಸಕ್ಕೆ ಸಂಚಕಾರ ತಂದೊಡ್ಡುವ ಭಯ ಮತ್ತು ಅಭದ್ರತೆ ಇರುವುದಾಗಿ ಹೇಳಿದರು. ಅತ್ಯಂತ ಸಂಕಷ್ಟದ ಬದುಕು ಸಾಗಿಸುತ್ತಿರುವ ಹೊರ ಗುತ್ತಿಗೆ ನೌಕರರ ವೇತನ ಪಾವತಿಗೆ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕರು ಅಗತ್ಯ ಕ್ರಮ ಕೈಗೊಳ್ಳುವಂತೆ ಇದೇ ಸಂದರ್ಭ ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಸಂಘದ ಜಿಲ್ಲಾ ಅಧ್ಯಕ್ಷ ಈರಪ್ಪ ಶೆಟ್ಟಿ, ಪದಾಧಿಕಾರಿಗಳಾದ ಬೋಪಣ್ಣ, ರಮೇಶ್ ಕುಟ್ಟಪ್ಪ, ಶ್ವೇತ, ಮಹದೇವ್ ಉಪಸ್ಥಿತರಿದ್ದರು.

ವಿರಾಜಪೇಟೆಯ ನಮ್ಮ ಕ್ಲಿನಿಕ್‌ಗೆ ಶಾಸಕ ಬೋಪಯ್ಯ ಭೇಟಿ, ಪರಿಶೀಲನೆ



ವಿರಾಜಪೇಟೆ, ನ.23– ಸಾರ್ವಜನಿಕರಿಗೆ ಉತ್ತಮ ಆರೋಗ್ಯ ಸೇವೆ ನೀಡುವ ನಿಟ್ಟಿನಲ್ಲಿ ರಾಜ್ಯ ಸರ್ಕಾರ 'ನಮ್ಮ ಕ್ಲಿನಿಕ್' ಯೋಜನೆಯನ್ನು ಪ್ರಾರಂಭಿಸಿದ್ದು, ಕೊಡಗಿನ ವಿರಾಜಪೇಟೆಯಲ್ಲಿ ಪ್ರಾರಂಭವಾಗಿರುವ ಈ ಕ್ಲಿನಿಕ್ ಜಿಲ್ಲೆಯ ಪ್ರಥಮ ಕ್ಲಿನಿಕ್ ಆಗಿದೆ. ರಾಜ್ಯದಲ್ಲಿ ಎಲ್ಲಾ ಕ್ಲಿನಿಕ್‌ಗಳನ್ನು ಏಕಕಾಲದಲ್ಲಿ ಉದ್ಘಾಟಿಸಲಾಗುವುದು ಎಂದು ಶಾಸಕ ಕೆ.ಜಿ. ಬೋಪಯ್ಯ ಹೇಳಿದರು.

ವಿರಾಜಪೇಟೆ ನಗರದ ಮೊಗರಗಲ್ಲಿಯಲ್ಲಿ ಜನಸಾಮಾನ್ಯರಿಗೆ ಗುಣಮಟ್ಟದ ಚಿಕಿತ್ಸೆ ನೀಡುವ ಮತ್ತು ಕೈಗೆಟುಕುವ ದರದಲ್ಲಿ ದೊರೆಯುವ ನಮ್ಮ ಕ್ಲಿನಿಕ್‌ಗೆ ಭೇಟಿ ನೀಡಿ ಪರಿಶೀಲನೆ ನಡೆಸಿದ ಬಳಿಕ ಮಾತನಾಡಿ, ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರ ಹೊರತಾಗಿ ನಗರ ಪಟ್ಟಣಗಳ ವಾರ್ಡ್ ಮಟ್ಟದಲ್ಲಿ ಆರೋಗ್ಯ ಸೇವೆಗಳನ್ನು ನೀಡುತ್ತಿದ್ದು, ಸರ್ಕಾರಿ ಆಸ್ಪತ್ರೆಗಳ ಒತ್ತಡವನ್ನು ಕಡಿಮೆ ಮಾಡಲು ಇಂತಹ ನಮ್ಮ ಕ್ಲಿನಿಕ್ ಸಹಕಾರಿಯಾಗಲಿದೆ ಎಂದರು.

ರಾಜ್ಯದಲ್ಲಿ ಒಟ್ಟು 438 ನಮ್ಮ ಕ್ಲಿನಿಕ್‌ಗಳಿವೆ. ಬೆಳಗ್ಗೆ 9 ರಿಂದ ಸಂಜೆ 4.30 ಗಂಟೆಯವರೆಗೆ ಆರೋಗ್ಯ ಸೇವೆ ಲಭಿಸಲಿದೆ. ಓರ್ವ ವೈದ್ಯ, ದಾದಿ, ಲ್ಯಾಬ್ ಟೆಕ್ನಿಷಿಯನ್, ಓರ್ವ ಗ್ರೂಪ್ ಸಿ ನೌಕರಿರುತ್ತಾರೆ. ತಪಾಸಣೆ, ಔಷಧ ಎಲ್ಲವು ಉಚಿತವಾಗಿರುತ್ತದೆ. 12 ಮಾದರಿಯ ಆರೋಗ್ಯ ತಪಾಸಣೆಗಳನ್ನು ನಡೆಸಲಾಗುತ್ತದೆ ಎಂದು ಶಾಸಕರು ವಿವರಿಸಿದರು.

14 ವಿವಿಧ ಪ್ರಯೋಗ ನಡೆಸಲಾಗುತ್ತದೆ. ಹೆಚ್ಚಿನ ಚಿಕಿತ್ಸೆ ಬೇಕಿದ್ದರೆ ಇ ಸಂಜೀವಿನಿ ಮತ್ತು ಟೆಲಿಕೌನ್ಸಿಲಿಂಗ್ ವ್ಯವಸ್ಥೆಯು ಈ ಸೇವೆಯಲ್ಲಿರುತ್ತದೆ ಎಂದ ಬೋಪಯ್ಯ ಅವರು, ಪ್ರಸ್ತುತ ಖಾಸಗಿ ಕಟ್ಟಡದಲ್ಲಿ ಕಾರ್ಯ ನಿರ್ವಹಿಸುತ್ತಿದ್ದು ಪಕ್ಕದಲ್ಲಿ ಸರ್ಕಾರಿ ಜಾಗ ಇದ್ದರೆ ಗುರುತಿಸುವಂತೆ ಪುರಸಭೆ ಮುಖ್ಯಾಧಿಕಾರಿ ಚಂದ್ರ ಕುಮಾರ್ ಅವರಿಗೆ ಸೂಚಿಸಿದರು

ಈ ಸಂದರ್ಭದಲ್ಲಿ ಪುರಸಭೆ ಅಧ್ಯಕ್ಷೆ ಸುಶ್ಮಿತಾ, ಸದಸ್ಯರಾದ ಎಸ್.ಎಚ್.ಮತೀನ್, ದೇಚಮ್ಮ ಕಾಳಪ್ಪ, ಜೂನಾ ಸುನೀತಾ, ಜಲೀಲ್, ತಾಲೂಕು ಆರೋಗ್ಯಾಧಿಕಾರಿ ಡಾ, ಯತಿರಾಜ್, ಮುಖ್ಯಾಧಿಕಾರಿ ಚಂದ್ರಕುಮಾರ್, ಜಿಲ್ಲಾ ಪಂಚಾಯತಿ ಮಾಜಿ ಸದಸ್ಯರಾದ ಅಚ್ಚಪಂಡ ಮಹೇಶ್, ಮೂಕೊಂಡ ಶಶಿ ಸುಬ್ರಮಣಿ, ಡಿಸಿಸಿ ಬ್ಯಾಂಕ್ ನಿರ್ದೇಶಕ ಪಟ್ರಪಂಡ ರಘು ನಾಣಯ್ಯ ಹಾಗೂ ಸ್ಥಳೀಯ ನಿವಾಸಿಗಳು ಉಪಸ್ಥಿತರಿದ್ದರು.

ಒತ್ತುವರಿ ಜಾಗ ಸರ್ಕಾರದ ವಶಕ್ಕೆ

ಮಡಿಕೇರಿ, ನ23– ಶ್ರೀಮಂಗಲ ಹೋಬಳಿ ಕುರ್ಚಿ ಗ್ರಾಮದ ಮುಜರಾಯಿ ದೇವಸ್ಥಾನವಾದ ಶ್ರೀ ಇರ್ಪು ರಾಮೇಶ್ವರ ದೇವಾಲಯಕ್ಕೆ ಸಂಬಂಧಿಸಿದ ಸ.ನಂ.134/1 ರ 5 ಎಕರೆ, ಸ.ನಂ.169 ರ 2.40 ಎಕರೆ, ಸ.ನಂ 136ರ 0.53 ಎಕರೆ ಒತ್ತುವರಿಯನ್ನು ಪೊನ್ನಂಪೇಟೆ ತಹಶೀಲ್ದಾರರು ಇವರ ನೇತೃತ್ವದಲ್ಲಿ ತೆರವುಗೊಳಿಸಿ ಸರ್ಕಾರದ ವಶಕ್ಕೆ ತೆಗೆದುಕೊಳ್ಳಲಾಯಿತು.

ಸ್ಥಳದಲ್ಲಿ ಶ್ರೀಮಂಗಲ ಹೋಬಳಿ ಉಪತಹಶೀಲ್ದಾರರು, ಕಂದಾಯ ಪರಿವೀಕ್ಷಕರು, ಎಲ್ಲಾ ಗ್ರಾಮ ಲೆಕ್ಕಿಗರು ಎಲ್ಲಾ ಗ್ರಾಮ ಸಹಾಯಕರು, ತಾಲೂಕು ಸರ್ವೇ ಅಧಿಕಾರಿಗಳು, ಅರಣ್ಯ ಅಧಿಕಾರಿಗಳು, ಆರಕ್ಷಕ ಸಿಬ್ಬಂದಿಗಳು ಹಾಗೂ ಗ್ರಾಮಸ್ಥರು ಹಾಜರಿದ್ದರು.

ಕಿವುಡುತನದಿಂದ ಬಳಲುತ್ತಿರುವವರಿಗೆ ಆರೋಗ್ಯ ತಪಾಸಣೆ

ಮಡಿಕೇರಿ, ನ.23– ಬಾಳೆಲೆ ಪ್ರಾಥಮಿಕ ಆರೋಗ್ಯ ಕೇಂದ್ರ ವ್ಯಾಪ್ತಿಯಲ್ಲಿ ಕಿವುಡುತನದಿಂದ ಬಳಲುತ್ತಿರುವವರಿಗೆ ಕೊಡಗು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಬೋಧಕ ಆಸ್ಪತ್ರೆ ವತಿಯಿಂದ ನುರಿತ ತಜ್ಞ ವೈದ್ಯರುಗಳಿಂದ ನ.25 ರಂದು ಬೆಳಗ್ಗೆ 10 ಗಂಟೆಯಿಂದ ಆಡಿಟರಿ ಸ್ಕ್ರೀನಿಂಗ್ ಶಿಬಿರ ನಡೆಯಲಿದೆ

ಕಿವುಡುತನದಿಂದ ಬಳಲುತ್ತಿರುವವರು ಆಧಾರ್ ಕಾರ್ಡ್ ಪ್ರತಿ, ರೇಷನ್ ಕಾರ್ಡ್ ಪ್ರತಿ ಮತ್ತು 2 ಪಾಸ್‌ಪೋರ್ಟ್ ಅಳತೆಯ ಭಾವಚಿತ್ರದೊಂದಿಗೆ ಭಾಗವಹಿಸಬಹುದು ಎಂದು ಬಾಳಲೆ ಪ್ರಾಥಮಿಕ ಆರೋಗ್ಯ ಕೇಂದ್ರದ ಆಡಳಿತ ವೈದ್ಯಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನ.28 ರಂದು ವಿಕಲಚೇತನರಿಗೆ ಆಟೋಟ ಸ್ಪರ್ಧೆ

ಮಡಿಕೇರಿ, ನ.23– ಶಿಶು ಅಭಿವೃದ್ಧಿ ಯೋಜನಾ ಇಲಾಖೆ ವತಿಯಿಂದ ವಿಶ್ವ ವಿಕಲಚೇತನರ ದಿನಾಚರಣೆ ಪ್ರಯುಕ್ತ ತಾಲೂಕಿನ ವಿಕಲಚೇತನರಿಗೆ ಮಡಿಕೇರಿ ನಗರದ ಗಾಂಧಿ ಮೈದಾನದಲ್ಲಿ ನವೆಂಬರ್ 28 ರಂದು ಬೆಳಗ್ಗೆ 10 ಗಂಟೆಗೆ ಆಟೋಟ ಸ್ಪರ್ಧೆ ನಡೆಯಲಿದೆ ಎಂದು ಶಿಶು ಅಭಿವೃದ್ಧಿ ಯೋಜನಾಧಿಕಾರಿ ತಮ್ಮ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಮ್ಮತ್ತಿ ಗ್ರಾಮದಲ್ಲಿ ಫಿಫಾ ಪುಟ್ಬಾಲ್ ಕಲರವ



ಸಿದ್ದಾಪುರ, ನ.23– ಇಡೀ ವಿಶ್ವವೇ ತನ್ನತ್ತ ನೋಡುವಂತೆ ಮಾಡಿದ ಫಿಫಾ ಪುಟ್ಬಾಲ್ ಕಲರವ ಗ್ರಾಮೀಣ ಭಾಗಕ್ಕೂ ವ್ಯಾಪಿಸಿದೆ. ತಮ್ಮ ನೆಚ್ಚಿನ ತಂಡಗಳಿಗೆ ಶುಭ ಹಾರೈಸುವುದರೊಂದಿಗೆ ಸಂಭ್ರಮಿಸುವ ಮೂಲಕ ಗ್ರಾಮವನ್ನೆಲ್ಲ ನೆಚ್ಚಿನ ಕ್ರೀಡಾಪಟುಗಳ ಕಟೌಟ್ ಬ್ಯಾನರ್ ಅಳವಡಿಸಿ ಕುಣಿದು ಕುಪ್ಪಳಿಸುತ್ತಿರುವ ದೃಶ್ಯ ವಿರಾಜಪೇಟೆ ತಾಲೂಕಿನ ಅಮ್ಮತ್ತಿ ಗ್ರಾಮದಲ್ಲೂ ಕಂಡು ಬಂದಿದೆ.

ಭಾರತ ಈ ಕ್ರೀಡೆಯಲ್ಲಿ ಪಾಲ್ಗೊಳ್ಳದಿದ್ದರೂ ಹೊರ ದೇಶಗಳ ತಂಡಗಳಿಗೂ ಬೆಂಬಲ ಸೂಚಿಸಿ ಪ್ರೋತ್ಸಾಹಿಸುತ್ತಿದ್ದಾರೆ. ಈಗಾಗಲೇ ಜಿಲ್ಲೆಯ ಹಲವಡೆ ಪುಟ್ಬಾಲ್ ಪ್ರೇಮಿಗಳು ತಮ್ಮ ನೆಚ್ಚಿನ ತಂಡಗಳ ಶುಭ ಕೋರುವ ಬ್ಯಾನರ್ ಕಟೌಟ್ ನಿಲ್ಲಿಸಿ ಗಮನ ಸೆಳೆದಿದ್ದಾರೆ. ಅಮ್ಮತ್ತಿ ಗ್ರಾಮದಲ್ಲಿರುವ ಕ್ರೀಡಾಪಟುಗಳ ಪುಟ್ಬಾಲ್ ಕಲರವ ಜೋರಾಗಿದೆ.

ನ.26ರಿಂದ ಮಡಿಕೇರಿಯಲ್ಲಿ ಟೆನ್ನಿಸ್ ಬಾಲ್ ಕ್ರಿಕೆಟ್ ಪಂದ್ಯಾವಳಿ

ಮಡಿಕೇರಿ,ನ.23– ಕೊಡವ ಸ್ಪೋರ್ಟ್ಸ್ ಅಸೋಸಿಯೇಷನ್ ವತಿಯಿಂದ ಇದೇ ಮೊದಲ ಬಾರಿಗೆ ಕೊಡವ ಪ್ರೀಮಿಯರ್ ಲೀಗ್ ಟೆನ್ನಿಸ್ ಬಾಲ್ ಕ್ರಿಕೆಟ್ ಪಂದ್ಯಾವಳಿ ಮಡಿಕೇರಿಯ ಜನರಲ್ ತಿಮ್ಮಯ್ಯ ಜಿಲ್ಲಾ ಕ್ರೀಡಾಂಗಣದಲ್ಲಿ ನ.26 ಮತ್ತು 27ರಂದು ನಡೆಯಲಿದೆ.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಪಂದ್ಯಾವಳಿಯ ಆಯೋಜಕ ಓಡಿಯಂಡ ಮಾಚಯ್ಯ, ಕ್ರೀಡಾ ಪ್ರತಿಭೆಗಳನ್ನು ಪ್ರೋತ್ಸಾಹಿಸುವ ಉದ್ದೇಶದಿಂದ ಪಂದ್ಯಾವಳಿಯನ್ನು ಆಯೋಜಿಸಲಾಗುತ್ತಿದ್ದು, 10 ಫ್ರಾಂಚೈಸಿಗಳ ಐಪಿಎಲ್ ಮಾದರಿ ಬಿಡ್ಡಿಂಗ್ ನಡೆದಿದೆ ಎಂದರು.

ಬೆಂಗಳೂರು ಬಂಬಂಗ, ಮೈಸೂರು ಮಕ್ಕ, ಕೊಡವ ಬೀರಂಗ, ಎಲ್‌ಸಿಎಂ ಟಸ್ಕರ್ಸ್ @97, ಟೀಮ್ ಕೈಮಡ 2025, ಕೆಎ12 ವಾರಿಯರ್ಸ್, ಅಂಜಿಕೇರಿ ನಾಡ್ ಕೂಟ, ಟೀಮ್ ಭಗವತಿ, ಎಂಪಿಬಿ ರಾಯಲ್ಸ್ ಹಾಗೂ ಪಿ & ಜಿ ನಾಲ್ನಾಡ್ ನರಿಯ ತಂಡಗಳು ಸೆಣಸಾಡಲು ಸಜ್ಜಾಗಿವೆ. ಮೊದಲ ಬಹುಮಾನ ಆಕರ್ಷಕ ಟ್ರೋಫಿ ಸೇರಿ 2ಲಕ್ಷ ರೂ., ದ್ವಿತೀಯ ಬಹುಮಾನ ಟ್ರೋಫಿ ಸೇರಿ 1 ಲಕ್ಷ ರೂ. ಮತ್ತು ತೃತೀಯ ಬಹುಮಾನ 40 ಸಾವಿರ ರೂ. ನೀಡಲಾಗುವುದು ಎಂದು ಮಾಹಿತಿ ನೀಡಿದರು. ಕ್ರೀಡಾಪಟುಗಳು ಹಾಗೂ ಕ್ರೀಡಾಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಕ್ರೀಡಾಂಗಣಕ್ಕೆ ಬಂದು ಪಂದ್ಯಾವಳಿಯನ್ನು ವೀಕ್ಷಿಸಿ ಪ್ರೋತ್ಸಾಹಿಸಬೇಕೆಂದು ಮಾಚಯ್ಯ ಮನವಿ ಮಾಡಿದರು. ಯೂಟ್ಯೂಬ್ ಚಾನಲ್ ಎಂ9 ಸ್ಪೋರ್ಟ್ಸ್‌ನಲ್ಲಿ ಪಂದ್ಯಾವಳಿಯ ನೇರ ಪ್ರಸಾರವಿರುತ್ತದೆ. ಹೆಚ್ಚಿನ ಮಾಹಿತಿಗೆ ಮೊ.ಸಂ.9483263846, 9066146100 ಸಂಪರ್ಕಿಸಬಹುದೆಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಪಂದ್ಯಾವಳಿಯ ಆಯೋಜಕರಾದ ಕುಟ್ಟಂಡ ಕುಟ್ಟಪ್ಪ, ಚೆಕ್ಕೇರ ಕಾರ್ಯಪ್ಪ, ಮುಕ್ಕಾಟಿರ ದೀಪಕ್ ಹಾಗೂ ಚೆಯುಕಪೂವಂಡ ಅನಿಲ್ ಉಪಸ್ಥಿತರಿದ್ದರು.

ವೈದ್ಯರು, ಸಿಬ್ಬಂದಿ ನಿರ್ಲಕ್ಷ್ಯ ಆರೋಪ

9 ತಿಂಗಳ ಹೆಣ್ಣು ಮಗು ಸಾವು: ಚಾ.ನಗರ ಆಸ್ಪತ್ರೆ ಮುಂದೆ ಕುಟುಂಬಸ್ಥರ ಪ್ರತಿಭಟನೆ



ಚಾಮರಾಜನಗರ, ನ23– ವೈದ್ಯರು ಮತ್ತು ಸಿಬ್ಬಂದಿ ನಿರ್ಲಕ್ಷ್ಯದಿಂದ ಮಗು ಮೃತಪಟ್ಟಿದೆ ಎಂದು ಆರೋಪಿಸಿ ಮಗುವಿನ ಕುಟುಂಬಸ್ಥರು ಹಾಗೂ ಸಾರ್ವಜನಿಕರು ನಗರದಲ್ಲಿ ಬುಧವಾರ ಇಲ್ಲಿನ ಜಿಲ್ಲಾಸ್ಪತ್ರೆ ಮುಂದೆ ರಸ್ತೆ ತಡೆದು ಪ್ರತಿಭಟನೆ ನಡೆಸಿದರು.

ತಾಲೂಕಿನ ಮುರಟಿಪಾಳ್ಯದ ಶಿವರುದ್ರಮ್ಮ ಹಾಗೂ ಅಶ್ವತ್ಥ್ ದಂಪತಿಯ ಒಂಬತ್ತು ತಿಂಗಳ ಹೆಣ್ಣು ಮಗು ಮೃತಪಟ್ಟಿರುವುದೇ ಈ ಪ್ರತಿಭಟನೆಗೆ ಕಾರಣವಾಗಿದ್ದು, ಪರಿಸ್ಥಿತಿ ಉದ್ವಿಗ್ನಗೊಂಡಿತ್ತು. ಮಗು ಕೆಮ್ಮು ಹಾಗೂ ಜ್ವರದಿಂದ ಬಳಲುತ್ತಿದ್ದು, ಬುಧವಾರ ಬೆಳಗ್ಗೆ ನಗರದ ರಾಚಯ್ಯ ಜೋಡಿ ರಸ್ತೆಯಲ್ಲಿರುವ ಜಿಲ್ಲಾಸ್ಪತ್ರೆಗೆ ತಾಯಿ ಮಗುವನ್ನು ಕರೆದುಕೊಂಡು ಬಂದಿದ್ದರು.

ಈ ಸಂದರ್ಭದಲ್ಲಿ ವೈದ್ಯರು ಸ್ಥಳದಲ್ಲಿ ಇರಲಿಲ್ಲ. ನರ್ಸ್‌ಗಳು ಮಗುವಿಗೆ ಚುಚ್ಚುಮದ್ದು ನೀಡಿದ್ದಾರೆ. ಆಗ ಮಗುವಿನ ಆರೋಗ್ಯದಲ್ಲಿ ಏರುಪೇರಾಗಿ ಅಸ್ವಸ್ಥಗೊಂಡಿತು. ಇದರಿಂದ ಸಿಬ್ಬಂದಿ ಮಗುವನ್ನು ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿಗೆ ಕರೆದುಕೊಂಡು ಹೋಗಿ ಎಂದು ಹೇಳಿದರು ಎಂದು ಕುಟುಂಬಸ್ಥರು ಆರೋಪಿಸಿದರು.

ಮೈಸೂರಿಗೆ ಹೋಗಲು ಆಂಬುಲೆನ್ಸ್ ಹತ್ತಿರ ಹೋಗುವಷ್ಟರಲ್ಲಿ ಮಗು ಮೃತಪಟ್ಟಿತ್ತು. ಹಾಗಿದ್ದರೂ, ಜೀವ ಇದೆ ಎಂದು ಸಿಬ್ಬಂದಿ ಮತ್ತೆ ಒಳಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡುವುದಾಗಿ ಕುಟುಂಬದವರಿಗೆ ನೀಡಿದ್ದ ಆಸ್ಪತ್ರೆಯ ಎಲ್ಲ ಚೀಟಿಗಳನ್ನು ಹಿಂದಕ್ಕೆ ಪಡೆದು, ಮಗು ಉಳಿಯಲಿಲ್ಲ ಎಂದು ಹೇಳಿದರು ಎಂದು ಮಗುವಿನ ಅಜ್ಜ ತಿಬ್ಬೇಗೌಡ ದೂರಿದರು.

ಕುಟುಂಬದವರಿಗೆ ಬೆಂಬಲ ನೀಡಿದ ಸಾರ್ವಜನಿಕರು, ಆಸ್ಪತ್ರೆ ಮುಂಭಾಗದ ರಾಚಯ್ಯ ರಸ್ತೆಗೆ ಬಂದು ವಾಹನಗಳ ಸಂಚಾರವನ್ನು ತಡೆದರು. ಸ್ಥಳಕ್ಕೆ ಬಂದ ಪೊಲೀಸರು ಪ್ರತಿಭಟನಕಾರರ ಮನವೊಲಿಸಲು ಯತ್ನಿಸಿದರು. ಒಪ್ಪದೇ ಇದ್ದಾಗ, ಜಿಲ್ಲಾ ಸರ್ಜನ್ ಡಾ. ಕೃಷ್ಣಪ್ರಸಾದ್ ಅವರನ್ನು ಪ್ರತಿಭಟನೆ ನಡೆಯುತ್ತಿದ್ದ ಸ್ಥಳಕ್ಕೆ ಕರೆದುಕೊಂಡು ಬಂದರು. ಕೃಷ್ಣಪ್ರಸಾದ್ ಅವರು ಮಗುವಿನ ಕುಟುಂಬಸ್ಥರು ಹಾಗೂ ಸಾರ್ವಜನಿಕರನ್ನು ಸಮಾಧಾನಪಡಿಸಲು ಯತ್ನಿಸಿದರು. ಆಸ್ಪತ್ರೆಯ ಆವರಣಕ್ಕೆ ಕರೆದೊಯ್ದು ಮಗು ಸಾವನ್ನಪ್ಪಲು ಕಾರಣವನ್ನು ಸವಿವರವಾಗಿ ತಿಳಿಸಿ ಅವರ ಮನವೊಲಿಸುವಲ್ಲಿ ಯಶಸ್ವಿಯಾದರು. ಕೊನೆಗೆ ಪೋಷಕರು ಮತ್ತು ಸಾರ್ವಜನಿಕರು ಪ್ರತಿಭಟನೆ ಕೈ ಬಿಟ್ಟು ತೆರಳಿದರು.

ಆಸ್ಪತ್ರೆ ಸ್ಪಷ್ಟನೆ: ಮಗುವಿಗೆ ಚಿಕಿತ್ಸೆ ನೀಡುವ ವೇಳೆ ವೈದ್ಯರು ಮತ್ತು ಸಿಬ್ಬಂದಿ ನಿರ್ಲಕ್ಷ್ಯ ವಹಿಸಿಲ್ಲ ಎಂದು ಚಾಮರಾಜನಗರ ವೈದ್ಯಕೀಯ ವಿಜ್ಞಾನ ಸಂಸ್ಥೆಯ ಬೋಧನಾ ಆಸ್ಪತ್ರೆಯ ಜಿಲ್ಲಾ ಶಸ್ತ್ರಚಿಕಿತ್ಸಕರು ಸ್ಪಷ್ಟಪಡಿಸಿದ್ದಾರೆ.

ಇಂದು ಮಧ್ಯಾಹ್ನ 12.53 ಗಂಟೆಗೆ ವೈದ್ಯಕೀಯ ವಿಜ್ಞಾನ ಸಂಸ್ಥೆಯ ಬೋಧನಾ ಆಸ್ಪತ್ರೆಯ ತಾಯಿ ಮತ್ತು ಮಕ್ಕಳ ವಿಭಾಗಕ್ಕೆ 9 ತಿಂಗಳ ಹೆಣ್ಣು ಮಗುವನ್ನು ಕರೆತಂದು ಮೂರು ದಿನದಿಂದ ಜ್ವರ ಉಸಿರಾಟಕ್ಕೆ ತೊಂದರೆಯಿಂದ ಬಳಲುತ್ತಿದ್ದು, ಆಹಾರವನ್ನು ಸೇವಿಸುತ್ತಿಲ್ಲ ಎಂದು ತಿಳಿಸಿ, ದಾಖಲಿಸಿದರು.

ನಮ್ಮ ಆಸ್ಪತ್ರೆಯ ಮಕ್ಕಳ ವಿಭಾಗದ ವೈದ್ಯರು ಮಗುವನ್ನು ಪರೀಕ್ಷಿಸಿ ಮಗುವಿಗೆ ಆರೋಗ್ಯ ಸ್ಥಿತಿ ಗಂಭೀರವಾಗಿದ್ದು ಕೈ ಮತ್ತು ಕಾಲು ನೀಲಿಗಟ್ಟಿರುತ್ತದೆ ಎಂಬ ಮಾಹಿತಿಯನ್ನು ಪೋಷಕರಿಗೆ ತಿಳಿಸಿ ಮಕ್ಕಳ ತೀವ್ರ ಘಟಕದಲ್ಲಿ ಚಿಕಿತ್ಸೆಯನ್ನು ಪ್ರಾರಂಭಿಸಿದರು ಎಂದು ಅವರು ವಿವರಿಸಿದ್ದಾರೆ.

ಮಗುವಿಗೆ ಚಿಕಿತ್ಸೆ ನೀಡಿದ ನಂತರ ಮಗುವಿನ ಆರೋಗ್ಯದಲ್ಲಿ ಚೇತರಿಕೆ ಕಂಡು ಬಂದಿದ್ದು, ಪೋಷಕರು ಮಗುವನ್ನು ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿಗೆ ಕರೆದುಕೊಂಡು ಹೋಗಲು ನಿರ್ಧರಿಸಿದರು. ಅದರಂತೆ ಪೋಷಕರ ಒತ್ತಾಯದ ಮೇರೆಗೆ ಹೆಚ್ಚಿನ ಚಿಕಿತ್ಸೆಗೆ ಮೈಸೂರಿನ ಚೆಲುವಾಂಬ ಆಸ್ಪತ್ರೆಗೆ 108 ಆಂಬ್ಯುಲೆನ್ಸ್ ವ್ಯವಸ್ಥೆ ಮಾಡಿ ಮಗುವನ್ನು ಕಳುಹಿಸಿ ಮುಂದಾದಾಗ ಮಗುವಿಗೆ ಹಠಾತ್ತಾಗಿ ಹೃದಯ ಸ್ತಂಭನವಾಗಿದೆ. ಕೂಡಲೇ ತುರ್ತು ಚಿಕಿತ್ಸಾ ವಿಭಾಗದಲ್ಲಿದ್ದ ವೈದ್ಯರು ಮಗುವಿಗೆ ಸಿಪಿಆರ್ (ತುರ್ತುಚಿಕಿತ್ಸೆ) ನೀಡಿ ಮತ್ತೊಮ್ಮೆ ಮಕ್ಕಳ ತೀವ್ರ ಘಟಕಕ್ಕೆ ವರ್ಗಾಯಿಸಿ ಚಿಕಿತ್ಸೆ ಮುಂದುವರೆಸಿದರು. ಆದರೆ ಚಿಕಿತ್ಸೆ ಫಲಕಾರಿಯಾಗದೆ ಮಗುವು ಮಧ್ಯಾಹ್ನ 2 ಗಂಟೆಗೆ ಮೃತ ಪಟ್ಟಿರುತ್ತದೆ. ಮಗುವಿಗೆ ಚಿಕಿತ್ಸೆ ನೀಡುವ ವೇಳೆ ವೈದ್ಯರ ಮತ್ತು ಸಿಬ್ಬಂದಿಯವರ ನಿರ್ಲಕ್ಷ್ಯತೆ ಇರುವುದಿಲ್ಲ ಎಂದು ಜಿಲ್ಲಾ ಶಸ್ತ್ರಚಿಕಿತ್ಸಕರು ಪ್ರಕಟಣೆಯಲ್ಲಿ ಸ್ಪಷ್ಟನೆ ನೀಡಿದ್ದಾರೆ.

ಜೆಜೆಎಂ ನಳ ಸಂಪರ್ಕ ನೀರು ಸರಬರಾಜಿಗೆ ಶಾಸಕ ಚಾಲನೆ



ಚಾಮರಾಜನಗರ, ನ.23– ತಾಲೂಕಿನ ಕೊತ್ತಲವಾಡಿ ಗ್ರಾಮದಲ್ಲಿ ಜಲಜೀವನ್ ಮಿಷನ್ ಯೋಜನೆಯಡಿ ಮನೆಗಳಿಗೆ ನಳಸಂಪರ್ಕ ನೀರು ಸರಬರಾಜು ಕಾರ್ಯಕ್ರಮಕ್ಕೆ ನಳ ತಿರುಗಿಸುವ ಮೂಲಕ ಶಾಸಕ ಸಿ.ಪುಟ್ಟರಂಗಶೆಟ್ಟಿ ಚಾಲನೆ ನೀಡಿದರು.

ಇದೇ ವೇಳೆ ಅವರು ಮಾತನಾಡಿ, ಜಲಜೀವನ್ ಮಿಷನ್ ಯೋಜನೆಯಡಿ, ಕೊತ್ತಲವಾಡಿ ಗ್ರಾಮಕ್ಕೆ 1.62 ಕೋಟಿ ರೂ.ವೆಚ್ಚದಲ್ಲಿ 1289 ಮನೆಗಳಿಗೆ ನಳಸಂಪರ್ಕ ನೀಡಲಾಗಿದೆ. ಪ್ರತಿಯೊಬ್ಬ ವ್ಯಕ್ತಿಗೂ ಶುದ್ಧ ಕುಡಿಯುವ ನೀರು ಪೂರೈಸುವುದು ಜಲಜೀವನ್ ಮಿಷನ್ ಯೋಜನೆ ಉದ್ದೇಶವಾಗಿದೆ. ಸಂಬಂಧ ಗ್ರಾಮೀಣ ಕುಡಿಯುವ ನೀರು ನೈರ್ಮಲ್ಯ ಇಲಾಖೆ ಅಧಿಕಾರಿಗಳು ಜನರಿಗೆ ಸಮರ್ಪಕವಾಗಿ ನೀರು ಪೂರೈಕೆಯಾಗುವಂತೆ ನೋಡಿಕೊಳ್ಳಬೇಕು, ಪೈಪ್‌ಲೈನ್ ಸೋರಿಕೆಯಾಗದಂತೆ ನಿಗಾವಹಿಸಬೇಕು ಎಂದು ಸೂಚನೆ ನೀಡಿದರು.

ಮೂಲ ಸೌಕರ್ಯಕ್ಕೆ ಆದ್ಯತೆ ನೀಡಿ

ಗುಂಡ್ಲುಪೇಟೆ, ನ.23– ಪಟ್ಟಣದ ಮೂಲ ಸೌಕರ್ಯಕ್ಕೆ ಹೆಚ್ಚಿನ ಆದ್ಯತೆ ನೀಡುವಂತೆ ಪುರಸಭೆ ಅಧಿಕಾರಿಗಳಿಗೆ ಶಾಸಕ ಸಿ.ಎಸ್.ನಿರಂಜನಕುಮಾರ್ ಸೂಚನೆ ನೀಡಿದರು.

ಪಟ್ಟಣದ ಪ್ರಮುಖ ರಸ್ತೆಗಳಿಗೆ ಭೇಟಿ ನೀಡಿ ಪರಿಶೀಲಿಸಿದ ಶಾಸಕರು, ರಸ್ತೆಬದಿಗಳಲ್ಲಿ ವಾಹನ ನಿಲುಗಡೆ ಸಮಸ್ಯೆ ಹಾಗೂ ಚರಂಡಿಗಳು ಹಾಳಾಗಿರುವುದನ್ನು ಪರಿಶೀಲಿಸಿ, ಪಟ್ಟಣದ ಕಸ ಸಂಗ್ರಹಣೆ ಮತ್ತು ಸಮರ್ಪಕವಾಗಿ ನೀರು ಸರಬರಾಜು ಸೇರಿದಂತೆ ಹಲವು ಮೂಲ ಸೌಕರ್ಯಗಳಿಗೆ ಆದ್ಯತೆ ನೀಡುವಂತೆ ಪುರಸಭೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಪೊಲೀಸ್ ಕ್ರೀಡಾಕೂಟ ಯಶಸ್ವಿ ಮುಕ್ತಾಯ

ಕರ್ತವ್ಯದ ಜೊತೆಗೆ ಆರೋಗ್ಯ ಕಾಪಾಡಿಕೊಳ್ಳಲು ಐಜಿಪಿ ಕರೆ



ಚಾಮರಾಜನಗರ, ನ.23– ಪೊಲೀಸರು ಕರ್ತವ್ಯ ಜೊತೆಗೆ ತಮ್ಮ ಆರೋಗ್ಯ ಬಗ್ಗೆ ಹೆಚ್ಚಿನ ಗಮನ ಹರಿಸಬೇಕು ಎಂದು ಮೈಸೂರು ದಕ್ಷಿಣ ವಲಯ ಪೊಲೀಸ್ ಮಹಾ ನಿರೀಕ್ಷಕ (ಐಜಿಪಿ) ಪ್ರವೀಣ್ ಮಧುಕರ್ ಪವಾರ್ ತಿಳಿಸಿದರು.

ಚಾಮರಾಜನಗರ ಜಿಲ್ಲಾ ಪೊಲೀಸ್ ವತಿಯಿಂದ ಮೂರು ದಿನಗಳ ಕಾಲ ಹಮ್ಮಿಕೊಂಡಿದ್ದ ಪೊಲೀಸ್ ಕ್ರೀಡಾಕೂಟ ಸಮಾರೋಪ ಸಮಾರಂಭ ಕಾರ್ಯಕ್ರಮದಲ್ಲಿ ವಿವಿಧ ಸ್ಪರ್ಧೆಯಲ್ಲಿ ವಿಜಯ ಗಳಿಸಿದ ಪೊಲೀಸ್ ಅಧಿಕಾರಿಗಳಿಗೆ ಬಹುಮಾನ ವಿತರಿಸಿ ಅವರು ಮಾತನಾಡಿದರು. ಗಡಿ ಜಿಲ್ಲೆ ಬಹಳಷ್ಟು ಪ್ರಾಕೃತಿಕ ಸೌಂದರ್ಯದಿಂದ ಕೂಡಿದೆ. ಹಲವಾರು ಪ್ರೇಕ್ಷಣೀಯ ಸ್ಥಳಗಳಿವೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದವರು.

ಪೊಲೀಸರು ಕರ್ತವ್ಯ ಜೊತೆಗೆ ತಮ್ಮ ಆರೋಗ್ಯ ಬಗ್ಗೆ ಗಮನಿಸಬೇಕು ಹಾಗೂ ಪೊಲೀಸ್ ಠಾಣೆಗಳಿಗೆ ಬರುವ ಸಾರ್ವಜನಿಕರನ್ನು ನಗುಮುಖದಿಂದ ಮಾತನಾಡಿಸಿ ಅವರ ಕಷ್ಟ ವಿಚಾರಿಸಿ ಪರಿಹಾರ ಮಾಡಬೇಕು ಎಂದು ಸೂಚನೆ ನೀಡಿದರು. ಇದೇ ಸಂದರ್ಭದಲ್ಲಿ ಪೊಲೀಸ್ ವಾದ್ಯ ಅದ್ಭುತವಾಗಿ ನುಡಿಸಿದ ಹಿನ್ನೆಲೆಯಲ್ಲಿ 20,000 ವೈಯಕ್ತಿಕ ನೀಡುತ್ತೇನೆ ಎಂದು ತಿಳಿಸಿದರು

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಟಿಪಿ ಶಿವಕುಮಾರ್ ಮಾತನಾಡಿ, ಸ್ಪರ್ಧೆಯಲ್ಲಿ ಸೋಲು ಗೆಲುವು ಮುಖ್ಯವಲ್ಲ ಸ್ಪರ್ಧಾ ಮನೋಭಾವನೆ ಬೆಳೆಸಿಕೊಂಡರೆ ಮಾತ್ರ ಯಶಸ್ಸು ಖಚಿತ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು

ಹೆಚ್ಚುವರಿ ಎಸ್ಪಿ ಕೆ.ಎಸ್. ಸುಂದರ್‌ರಾಜ್ ಮಾತನಾಡಿ, ವರ್ಷ ಪೂರ್ತಿ ಹಲವಾರು ಜಂಜಾಟದಿಂದ ಕೂಡಿರುವ ಪೊಲೀಸ್ ಸಿಬ್ಬಂದಿ ಹಾಗೂ ಅಧಿಕಾರಿಗಳು ವರ್ಷದಲ್ಲಿ ಮೂರು ದಿನ ತಮ್ಮಲ್ಲಿರುವ ಪ್ರತಿಭೆಗಳನ್ನು ಹೊರ ಚೆಲ್ಲಲು ಕ್ರೀಡಾಕೂಟ ಹಮ್ಮಿಕೊಳ್ಳಲಾಗಿದೆ. ಇದರಿಂದ ಮನಸ್ಸಿಗೆ ನೆಮ್ಮದಿ ಸಿಗಲಿದೆ ಎಂದು ತಿಳಿಸಿದರು

ಡಿವೈಎಸ್‌ಪಿ ಪ್ರಿಯದರ್ಶಿನಿ ಸಾಣೆಕೊಪ್ಪ. ಡಿಆರ್. ಡಿವೈಎಸ್ಪಿ ಸೋಮಣ್ಣ. ಕೊಳ್ಳೇಗಾಲ ಡಿವೈಎಸ್ಪಿ ನಾಗರಾಜು. ಜಿಲ್ಲೆಯ ಎಲ್ಲಾ ಸರ್ಕಲ್ ಇನ್‌ಸ್ಪೆಕ್ಟರ್, ಸಬ್‌ಇನ್‌ಸ್ಪೆಕ್ಟರ್, ಪೊಲೀಸ್ ಹಾಗೂ ಮಹಿಳಾ ಪೊಲೀಸ್ ಅಧಿಕಾರಿಗಳು. ಹಾಗೂ ಅವರ ಕುಟುಂಬ ವರ್ಗದವರು ಭಾಗವಹಿಸಿ, ಬಹುಮಾನ ಗಳಿಸಿದರು.

ನಾಳೆ ಸಂತೇಮರಹಳ್ಳಿಯಲ್ಲಿ ವಿದ್ಯುತ್ ಜನಸಂಪರ್ಕ ಸಭೆ

ಚಾಮರಾಜನಗರ, ನ.23– ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮವು ಚಾಮರಾಜನಗರ–ಕೊಡಗು ವೃತ್ತ ಹಾಗೂ ಮೈಸೂರು ಅಧೀಕ್ಷಕ ಎಂಜಿನಿಯರ್ ಅವರ ಅಧ್ಯಕ್ಷತೆಯಲ್ಲಿ ನ.25ರಂದು ಬೆಳಗ್ಗೆ 11 ರಿಂದ 12 ಗಂಟೆಯವರೆಗೆ ಸಂತೇಮರಹಳ್ಳಿ ಉಪವಿಭಾಗದ ಕಚೇರಿಯಲ್ಲಿ ತ್ರೈಮಾಸಿಕ ಜನಸಂಪರ್ಕ ಸಭೆ ಹಮ್ಮಿಕೊಂಡಿದೆ. ಸಾರ್ವಜನಿಕರು ಸಭೆಗೆ ಹಾಜರಾಗಿ ವಿದ್ಯುತ್ ಸಮಸ್ಯೆಗಳಿದ್ದಲ್ಲಿ ತಿಳಿಸಿ ಪರಿಹರಿಸಿಕೊಳ್ಳುವಂತೆ ಸಂತೇಮರಹಳ್ಳಿ ನಿಗಮದ ಕಾರ್ಯ ಮತ್ತು ಪಾಲನಾ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.


ಆನೆ ಹಾವಳಿ: ಟಾಸ್ಕ್ ಫೋರ್ಸ್ ರಚನೆಗೆ ಆಗ್ರಹ

ಹನೂರು, ನ.23– ರಾಜ್ಯದಲ್ಲಿಯೇ ಅತಿ ಹೆಚ್ಚು ಆನೆಗಳು ನಮ್ಮ ಜಿಲ್ಲೆಯಲ್ಲಿದ್ದು ಪ್ರತಿ ವರ್ಷ ಆನೆಗಳಿಂದ ಸಾವು, ನೋವು ಹಾಗೂ ಬೆಳೆ ನಾಶವಾಗುತ್ತಿರುವ ಹಿನ್ನೆಲೆಯಲ್ಲಿ ನಮ್ಮ ಜಿಲ್ಲೆಗೂ ಟಾಸ್ಕ್ ಫೋರ್ಸ್ ರಚನೆ ಮಾಡುವಂತೆ ಶಾಸಕ ಆರ್.ನರೇಂದ್ರ ಮುಖ್ಯಮಂತ್ರಿಗಳಿಗೆ ಆಗ್ರಹಿಸಿದರು.

ಪಟ್ಟಣದ ಕಾಂಗ್ರೆಸ್ ಕಚೇರಿಯಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಕಳೆದ ಮೂರು ದಿನಗಳ ಹಿಂದೆ ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಆನೆ ದಾಳಿಗೆ ಒಬ್ಬರು ಮೃತಪಟ್ಟಿದ್ದರು. ಸ್ಥಳೀಯ ಶಾಸಕ ಮಾಹಿತಿ ಪಡೆಯಲು ಸ್ಥಳಕ್ಕೆ ತೆರಳಿದ್ದರು. ಈ ಸಂದರ್ಭದಲ್ಲಿ ಸ್ಥಳೀಯರು ರೊಚ್ಚಿಗೆದ್ದು ಅವರ ಮೇಲೆ ಹಲ್ಲೆ ಮಾಡಿರುವ ಬಗ್ಗೆ ವರದಿಯಾಗಿದೆ ಎಂದರು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಬಳಿ ಅರಣ್ಯ ಖಾತೆ ಇರುವುದರಿಂದ ಉನ್ನತ ಮಟ್ಟದ ಅರಣ್ಯ ಇಲಾಖೆ ಅಧಿಕಾರಿಗಳ ಸಭೆ ಕರೆದು ಚಿಕ್ಕಮಗಳೂರು, ಕೊಡಗು, ಹಾಸನ ಜಿಲ್ಲೆಗಳಲ್ಲಿ ಆನೆ ಹಾವಳಿ ತಡೆಯಲು ಟಾಸ್ಕ್ ಫೋರ್ಸ್ ರಚನೆ ಮಾಡಲು ಆದೇಶ ಹೊರಡಿಸಿದ್ದಾರೆ. ಆದರೆ ರಾಜ್ಯದಲ್ಲಿಯೇ ಅತಿ ಹೆಚ್ಚು ಆನೆಗಳಿರುವ ಜಿಲ್ಲೆ ಚಾಮರಾಜನಗರ, ಹನೂರು ತಾಲೂಕಿನಲ್ಲಿಯೂ ಆನೆ ದಾಳಿಯಿಂದ ಕನಿಷ್ಠ ಇಬ್ಬರು ಮೃತಪಡುತ್ತಿದ್ದಾರೆ. ಸಾಕಷ್ಟು ರೈತರು ಆನೆ ದಾಳಿಯಿಂದ ಬೆಳೆ ನಾಶವಾಗಿ ಸಂಕಷ್ಟದಲ್ಲಿದ್ದಾರೆ. ಆದ್ದರಿಂದ ಮುಖ್ಯಮಂತ್ರಿಗಳು ಚಾಮರಾಜನಗರ ಜಿಲ್ಲೆಗೂ ಟಾಸ್ಕ್ ಫೋರ್ಸ್ ರಚನೆ ಮಾಡಿ ಆನೆ ಹಾವಳಿ ತಡೆಗಟ್ಟಲು ಸೂಕ್ತ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದ್ದಾರೆ.

ಚಿನ್ನಸ್ವಾಮಿ ನಿಧನ



ಚಾಮರಾಜನಗರ, ನ.23– ನಗರದ ಸೋಮವಾರಪೇಟೆ ನಿವಾಸಿ ಚಿನ್ನಸ್ವಾಮಿ (65) ಬುಧವಾರ ನಿಧನರಾದರು. ಅವರು ಹಲವು ದಿನಗಳಿಂದಲೂ ಅನಾರೋಗ್ಯದಿಂದ ಬಳಲುತ್ತಿದ್ದರು.

ದಿವಂಗತರು ಪತ್ನಿ ಹಾಗೂ ಪುತ್ರ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ವ್ಯವಸ್ಥಾಪಕ ಬಸವರಾಜು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಗ್ರಾಮದ ಅವರ ಜಮೀನಿನಲ್ಲಿ ಬುಧವಾರ ಸಂಜೆ ನೆರವೇರಿತು.

ಮಹಮ್ಮದ್ ಮಲಿಕುರ್ ರೆಹಮಾನ್



ಚಾಮರಾಜನಗರ, ನ.23– ತಾಲೂಕಿನ ಹರದನಹಳ್ಳಿ ನಿವಾಸಿ, ಪತ್ರಕರ್ತ ಮಹಮ್ಮದ್ ಮಲಿಕುರ್ ರೆಹಮಾನ್ (48) ಬುಧವಾರ ನಿಧನರಾದರು. ದಿವಂಗತರು ಪತ್ನಿ, ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಗುರುವಾರ ಸ್ವಗ್ರಾಮದಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಒಂದನೇ ಪುಟದಿಂದ

ಅಂಬಾರಿ ಆನೆ ಗೋಪಾಲಸ್ವಾಮಿ ಬಲಿ

ಗಂಭೀರವಾಗಿ ಗಾಯಗೊಂಡಿದೆ. ದಾಳಿಯ ತೀವ್ರತೆಗೆ ಗೋಪಾಲಸ್ವಾಮಿಯ ಹಿಂದಿನ ಬಲಗಾಲು ಮುಕ್ಕಾಲು ಭಾಗ ತುಂಡರಿಸಿ, ಮಾಂಸ ಕಿತ್ತು ಬಂದಿದೆ. ಅಲ್ಲದೇ, ಪಕ್ಕೆ, ಹೊಟ್ಟೆ, ಕಿಬ್ಬೊಟ್ಟೆಗೆ ದಂತದಿಂದ ತಿವಿದು, ಗಂಭೀರ ಗಾಯವಾಗಿತ್ತು. ಮಂಗಳವಾರ ಬೆಳ್ಳಗ್ಗೆಯಾದರೂ ಕ್ಯಾಂಪ್‌ಗೆ ಗೋಪಾಲಸ್ವಾಮಿ ವಾಪಸ್ಸಾಗದೇ ಇರುವುದನ್ನು ಗಮನಿಸಿದ ಮಾವುತರು, ಹುಡುಕಲು ಮುಂದಾಗಿದ್ದಾರೆ. ಕ್ಯಾಂಪ್‌ನಿಂದ ಅರ್ಧ ಕಿ.ಮೀ. ದೂರದಲ್ಲಿ ಗಂಭೀರವಾಗಿ ಗಾಯಗೊಂಡಿದ್ದ ಗೋಪಾಲಸ್ವಾಮಿ ಪತ್ತೆಯಾಗಿದ್ದಾನೆ.

ಗೋಪಾಲಸ್ವಾಮಿಯ ಗಂಭೀರ ಸ್ಥಿತಿಯನ್ನು ಕಂಡ ಅರಣ್ಯ ಇಲಾಖೆ, ಹೆಸರಾಂತ ಪಶುವೈದ್ಯ ಡಾ.ಚಿಟ್ಟಿಯಪ್ಪ ಅವರಿಂದ ಚಿಕಿತ್ಸೆ ಕೊಡಿಸಿದ್ದಾರೆ. ಮಂಗಳವಾರ ಸಂಜೆಯಿಂದ ಆನೆಗೆ ಚಿಕಿತ್ಸೆ ಆರಂಭಿಸಲಾಗಿತ್ತು. ಆದರೆ, ಬುಧವಾರ ಮಧ್ಯಾಹ್ನ ಗೋಪಾಲಸ್ವಾಮಿ ಅಸುನೀಗಿದೆ ಎಂದು ಅರಣ್ಯ ಇಲಾಖೆಯ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಗೋಪಾಲಸ್ವಾಮಿ: 13 ಬಾರಿ ದಸರಾ ಮಹೋತ್ಸವದಲ್ಲಿ ಪಾಲ್ಗೊಂಡಿದ್ದ 39 ವರ್ಷದ ಗೋಪಾಲಸ್ವಾಮಿಯನ್ನು 2009ರಲ್ಲಿ ಸಕಲೇಶಪುರದ ಹೆತ್ತೂರಿನಲ್ಲಿ ಸೆರೆ ಹಿಡಿಯಲಾಗಿತ್ತು. 5460 ಕೆಜಿ ತೂಕ, 2.85 ಮೀಟರ್ ಎತ್ತರ, 3.42 ಮೀಟರ್ ಉದ್ದದ ಬಲಿಷ್ಠ ಮೈಕಟ್ಟು ಹೊಂದಿತ್ತು. 2021ರಲ್ಲಿ ಶ್ರೀರಂಗಪಟ್ಟಣ ದಸರಾ ಮಹೋತ್ಸವದಲ್ಲಿ ಅಂಬಾರಿ ಹೊತ್ತಿದ್ದ ಗೋಪಾಲಸ್ವಾಮಿ ಪಟಾಕಿ ಶಬ್ದಕ್ಕೆ ಬೆಚ್ಚಿ, ಹಿಮ್ಮುಖವಾಗಿ ಹಠಾತ್ ತಿರುಗಿ ನಿಂತು ಆತಂಕ ಸೃಷ್ಟಿಸಿತ್ತು. ಅಲ್ಲಿ ನೆರೆದಿದ್ದ ಭಾರೀ ಜನಸ್ತೋಮ ಕೆಲ ಕ್ಷಣ ತತ್ತರಿಸಿ ಹೋಗಿತ್ತು. ಆದರೆ ಗೋಪಾಲಸ್ವಾಮಿ ಬೆಚ್ಚಿ ಗಾಬರಿಯಾದಷ್ಟೇ ಕ್ಷಣದಲ್ಲಿ ಶಮನಗೊಂಡಿದ್ದ. ಇದರಿಂದ ಜನ ನಿಟ್ಟುಸಿರು ಬಿಟ್ಟಿದ್ದರು. ಒಂದು ವೇಳೆ ಘಾಸಿಗೊಂಡು, ಮುನ್ನಡಿ ಇಟ್ಟಿದ್ದರೆ ಭಾರೀ ಅನಾಹುತವೇ ಸಂಭವಿಸುತ್ತಿತ್ತು. ಅಂದು ಈತನನ್ನು ಮಾವುತ ಜೆ.ಡಿ.ಮಂಜು, ಕಾವಾಡಿ ಸೃಜನ್ ನಿಯಂತ್ರಣಕ್ಕೆ ತರುವಲ್ಲಿ ಯಶಸ್ವಿಯಾಗಿದ್ದರು.

ಫೈಟರ್ ಬಲಿ ಪಡೆದದ್ದು ಮೂರು ಆನೆಗಳೇ...??

ಗೋಪಾಲಸ್ವಾಮಿಗೆ ಕೇವಲ ದಸರಾ ಆನೆ ಹೆಗ್ಗಳಿಕೆ ಮಾತ್ರವಲ್ಲದೆ, ಬಿಗ್ ಫೈಟರ್ ಪಟ್ಟವೂ ಇತ್ತು. ಕಾಡಾನೆ ಸೆರೆ ಕಾರ್ಯಾಚರಣೆಯಲ್ಲಿ ಅಂಬಾರಿ ಆನೆ ಅಭಿಮನ್ಯುವಿಗೆ ಸಮರ್ಥ ರೀತಿ ಸಾಥ್ ನೀಡುತ್ತಿದ್ದ. ಆನೆ ಶಿಬಿರದ ಮಾವುತ, ಕಾವಾಡಿಗಳಿಗೆ ಅಭಿಮನ್ಯುವಿನಂತೆ ಗೋಪಾಲಸ್ವಾಮಿ ಮೇಲೂ ಅಕ್ಕರೆ. ಕಾಡಾನೆ ಸೆರೆ ಕಾರ್ಯಾಚರಣೆಗೆ ಗೋಪಾಲಸ್ವಾಮಿ ಕರೆದೊಯ್ದರೆ ಸಿಬ್ಬಂದಿಗೂ ಧೈರ್ಯ. ಅಂತಹ ಧೈರ್ಯಶಾಲಿಯೇ ಬಲಿಯಾಗಿದ್ದು ಹೇಗೆ ಅನ್ನುವ ಪ್ರಶ್ನೆ ಕಾಡುತ್ತಿದೆ. ಗೋಪಾಲಸ್ವಾಮಿ ಮೈಮೇಲೆ ಆಗಿರುವ ಗಾಯ ಗಮನಿಸಿದರೆ ಆನೆಗಳ ಹಿಂಡಲ್ಲಿ, ಎರಡರಿಂದ ಮೂರು ಆನೆಗಳು ಏಕಕಾಲಕ್ಕೆ ಮುಗಿಬಿದ್ದಿರಬಹುದು ಎಂದು ಶಂಕಿಸಲಾಗಿದೆ. ಈ ವೇಳೆ ಗೋಪಾಲಸ್ವಾಮಿಗೆ ಸೆಣಸಲು ಸಾಧ್ಯವಾಗಿಲ್ಲ ಎಂದು ಹೇಳಲಾಗುತ್ತಿದೆ.

ಅಡ್ಡಿಯಾದ ಬೇಡಿ...

ಕ್ಯಾಂಪ್‌ನಿಂದ ಕಾಡಿಗೆ ಆಹಾರ ಸೇವನೆಗೆ ಬಿಟ್ಟಾಗ ಎಲ್ಲಾ ಆನೆಗಳ ಕಾಲಿಗೂ ಸರಪಳಿ ಹಾಕಲಾಗುತ್ತದೆ. ಗೋಪಾಲಸ್ವಾಮಿಯೂ ಸೋಮವಾರ ರಾತ್ರಿ ಸರಪಳಿಯೊಂದಿಗೆ ಕಾಡಿಗೆ ಮೇಯಲು ಹೋಗಿದ್ದ. ತಾತ್ಕಾಲಿಕ ಆನೆ ಕ್ಯಾಂಪ್‌ನಿಂದ ಅರ್ಧ ಕಿ.ಮಿ ದೂರದಲ್ಲಿ ಆಹಾರ ಸೇವಿಸುತ್ತಿದ್ದಾಗ ಆನೆ ಹಿಂಡೊಂದು ಎದುರಾಗಿದೆ. ಈ ವೇಳೆ ಹಿಂಡಿನಲ್ಲಿದ್ದ ಹೆಣ್ಣಾನೆ ಬಳಿ ಮದವೇರಿದ್ದ ಗೋಪಾಲಸ್ವಾಮಿ ಹೋಗಿದ್ದಾನೆ. ಇದರಿಂದ ರೊಚ್ಚಿಗೆದ್ದ ಹಿಂಡಿನಲ್ಲಿದ್ದ 2–3 ಗಂಡಾನೆಗಳು ಗೋಪಾಲಸ್ವಾಮಿ ಮೇಲೆ ದಾಳಿ ನಡೆಸಿವೆ. ಈ ವೇಳೆ ಗೋಪಾಲಸ್ವಾಮಿಯ ಕಾಲಿನ ಸರಪಳಿ ಮರವೊಂದಕ್ಕೆ ಸಿಲುಕಿರಬಹುದು ಇಲ್ಲವೇ ಹಿಂಡಿನ ಯಾವುದಾದರೂ ಆನೆ ಮೆಟ್ಟಿರಬಹುದು. ಹಾಗಾಗಿ ಕಾಡಾನೆ ದಾಳಿಯನ್ನು ಸಮರ್ಥ ರೀತಿ ಎದುರಿಸಲಾಗದೆ ಮುಗ್ಗರಿಸಿ ಕೆಳಕ್ಕೆ ಬಿದ್ದ ಗೋಪಾಲಸ್ವಾಮಿ ಮೇಲೆ ಆನೆಗಳು ಮುಗಿಬಿದ್ದು ದಾಳಿ ನಡೆಸಿರುವ ಸಾಧ್ಯತೆ ಇದೆ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

ಅಜಾನುಬಾಹು ಆನೆಗಳು: ಗೋಪಾಲಸ್ವಾಮಿ ಮೇಲೆ ನಡೆದ ದಾಳಿ ಸ್ಥಳದಲ್ಲಿ 3–4 ಅಜಾನುಬಾಹು ಗಂಡಾನೆ ಗಳು ಓಡಾಡುತ್ತಿರುವುದನ್ನು ಅರಣ್ಯ ಸಿಬ್ಬಂದಿ ಗಮನಿಸಿದ್ದಾರೆ. ಗೋಪಾಲಸ್ವಾಮಿ ಹಾಗೂ ಆ ದೈತ್ಯರ ನಡುವೆ ಘೋರ ಕಾಳಗ ಏರ್ಪಟ್ಟಿರಲೂಬಹುದು ಎಂದು ಅರಣ್ಯ ಸಿಬ್ಬಂದಿ ಅನುಮಾನ ವ್ಯಕ್ತಪಡಿಸಿದ್ದಾರೆ.

ದಸರಾ ಗಜಪಡೆಯಲ್ಲಿ ಪ್ರಮುಖ ಆಕರ್ಷಣೆಯಾಗಿದ್ದ ಗೋಪಾಲಸ್ವಾಮಿ ಆನೆಯು ಅಕಾಲಿಕ ಸಾವಿಗೀಡಾಗಿರುವುದು ಅತೀವ ದುಃಖವನ್ನುಂಟು ಮಾಡಿದೆ. ಇನ್ನೂ 40ರ ಆಸುಪಾಸು ವಯಸ್ಸಿನ, ಆಕರ್ಷಕ ಮೈಕಟ್ಟು ಹೊಂದಿದ್ದ ಗೋಪಾಲಸ್ವಾಮಿ ಅಪಾರ ಅಭಿಮಾನಿಗಳನ್ನು ಹೊಂದಿತ್ತು. ದಸರಾ ಗಜಪಡೆಯಲ್ಲಿ ಅತೀ ಎತ್ತರ ಹಾಗೂ 5,400 ಕೆ.ಜಿ. ತೂಕ ಹೊಂದಿದ್ದ ಗೋಪಾಲಸ್ವಾಮಿ, ಮುಂಬರುವ ವರ್ಷಗಳಲ್ಲಿ ಅಂಬಾರಿ ಹೊರುವ ಭರವಸೆ ಮೂಡಿಸಿತ್ತು. 2012ರಿಂದ ದಸರಾ ಮೆರವಣಿಗೆಯಲ್ಲಿ ಸತತವಾಗಿ ಭಾಗವಹಿಸಿ ನಿಶಾನೆ, ನೌಪತ್ ಆನೆ, ಸಾಲಾನೆ ಹಾಗೂ ಪಟ್ಟದ ಆನೆಯಾಗಿ ಹಲವು ಜವಾಬ್ದಾರಿಯನ್ನು ಯಶಸ್ವಿಯಾಗಿ ನಿಭಾಯಿಸುವ ಮೂಲಕ ಎಲ್ಲರ ಪ್ರೀತಿ ಗಳಿಸಿತ್ತು. ಗೋಪಾಲಸ್ವಾಮಿ ಇನ್ನಿಲ್ಲ ಎಂಬುದನ್ನು ಅರಗಿಸಿಕೊಳ್ಳುವುದು ತುಂಬಾ ಕಷ್ಟವಾಗುತ್ತಿದೆ.

–ಎಸ್.ಟಿ.ಸೋಮಶೇಖರ್, ಜಿಲ್ಲಾ ಉಸ್ತುವಾರಿ ಸಚಿವರು

ಸತತ 14 ಬಾರಿ ನಾಡಹಬ್ಬ ಮೈಸೂರು ದಸರಾದಲ್ಲಿ ಭಾಗವಹಿಸಿ ನಿಶಾನೆ, ನೌಪತ್ ಆನೆ, ಸಾಲಾನೆ ಹಾಗೂ ಪಟ್ಟದ ಆನೆಯಾಗಿ ಹಲವು ಜವಾಬ್ದಾರಿಯನ್ನು ಯಶಸ್ವಿಯಾಗಿ ನಿಭಾಯಿಸಿ ಎಲ್ಲರ ಮೆಚ್ಚುಗೆಗೆ ಪಾತ್ರವಾಗಿದ್ದ ಗೋಪಾಲಸ್ವಾಮಿ ಶ್ರೀರಂಗಪಟ್ಟಣ ದಸರಾದಲ್ಲಿ ಕ್ಯಾಪ್ಟನ್ ಆಗಿ ಗಮನ ಸೆಳೆದಿತ್ತು. ಅಲ್ಲದೆ ಮುಂದೆ ಮೈಸೂರು ದಸರಾ ಅಂಬಾರಿ ಆನೆಯಾಗುವ ಭರವಸೆ ಮೂಡಿಸಿತ್ತು. ಎಲ್ಲರಿಗೂ ಅಚ್ಚುಮೆಚ್ಚಿನ ಆನೆಯಾಗಿದ್ದ ಗೋಪಾಲಸ್ವಾಮಿ ಇನ್ನಿಲ್ಲ ಎಂದು ತಿಳಿದು ಮನಸ್ಸಿಗೆ ಅತೀವ ದುಃಖವಾಗಿದೆ.

–ಶಾಸಕ ಎಸ್.ಎ.ರಾಮದಾಸ್

15 ಲಕ್ಷ ಪರಿಹಾರ

ಯಾವುದೋ ಘಟನೆ ನಡೆದಾಗ ಕಾರ್ಯಾಚರಣೆ ಮಾಡೋದು ಸರಿಯಲ್ಲ ಎಂದು ನನಗನ್ನಿಸುತ್ತೆ. ನಿರಂತರವಾಗಿ ಕಾರ್ಯಾಚರಣೆ ನಡೆದಾಗ ನಿಯಂತ್ರಣ ಸಾಧ್ಯ. ಹಾಗಾಗಿ ವಿಶೇಷ ಕಾರ್ಯಪಡೆ ಮಾಡಬೇಕೆಂದು ಮಾಡಿದ್ದೇವೆ. ಅದಕ್ಕಾಗಿ ಯೇ ವಿಶೇಷ ತಂಡ ಇರುತ್ತೆ, ತರಬೇತಿ ಕೊಡುತ್ತೇವೆ. ವಾಹನ ಎಲ್ಲ ಕೊಟ್ಟು ಕಂಟ್ರೋಲ್ ರೂಂಮ್ ಕೂಡ ಮಾಡುತ್ತೇವೆ ಎಂದು ತಿಳಿಸಿದರು. ದಿನವಹಿ ಕಾರ್ಯಾಚರಣೆ ಮಾಡಿ ಕಾಡಾನೆ ಹಾವಳಿ ನಿಯಂತ್ರಣಕ್ಕೆ ಕ್ರಮ ಕೈಗೊಳ್ಳುತ್ತೇವೆ. ಆನೆಗಳು ಹೆಚ್ಚಾಗಿ ಇರುವ ಕಡೆ ನೂರಾರು ಸಿಬ್ಬಂದಿ ಸೇರಿ ಆನೆಗಳನ್ನು ಹಿಮ್ಮೆಟ್ಟಿಸಲು ಸೂಚನೆ ನೀಡಿದ್ದೇನೆ. ಅದಕ್ಕೆ ಬೇಕಾದಷ್ಟು ಹಣ ಕೊಡಲು ಕೂಡ ಸರ್ಕಾರ ಸಿದ್ಧವಿದೆ. ಈ ವರ್ಷದ ಬಕೆಟ್ ನಲ್ಲಿ ನೂರು ಕೋಟಿ ಇಟ್ಟಿದ್ದೆವು. ಬಂಡೀಪುರದಲ್ಲಿ ಹೊಸ ರೀತಿಯ ಫೆನ್ಸಿಂಗ್ ಅನ್ನು ಟ್ರಯಲ್ ಮಾಡಿದ್ದೇವೆ. ಅದನ್ನು ಇಲ್ಲಿಗೂ ಮಾಡೋ ಪ್ರಯತ್ನ ಮಾಡುತ್ತೇವೆ. ಕಾಡಾನೆಗಳ ಸ್ಥಳಾಂತರ ಮಾಡುವ ಸಲುವಾಗಿಯೇ ವಿಶೇಷ ಕಾರ್ಯಪಡೆ ಮಾಡಿದ್ದೇವೆ ಎಂದರು.

ನಿಮ್ಮ 'ಆಧಾರ್' ಸುರಕ್ಷಿತವಾಗಿರಲಿ...

ಕಡಿಮೆಯಾಗುತ್ತವೆ. ಆದರೆ ಒಮ್ಮೆ ಪ್ರೊಫೈಲ್ ಲಾಕ್ ಮಾಡಿದರೆ ಅದು ಅನ್‌ಲಾಕ್ ಆಗುವವರೆಗೆ ನೀವೂ ಸಹ ಆಧಾರ್ ವಿವರ ಬಳಸಿ ಯಾವುದೇ ದೃಢೀಕರಣ ಪ್ರಕ್ರಿಯೆ ಪೂರ್ಣಗೊಳಿಸಲು ಆಗುವುದಿಲ್ಲ ಎಂಬ ಅಂಶವನ್ನೂ ಸಾರ್ವಜನಿಕರು ಗಮನದಲ್ಲಿ ಇರಿಸಿಕೊಳ್ಳಬೇಕಿದೆ. ಆಧಾರ್ ಪ್ರೊಫೈಲ್ ಲಾಕ್ ಮಾಡಬೇಕು ಎಂದಿದ್ದರೆ ಮೊದಲು 16 ಸಂಖ್ಯೆಗಳ ವರ್ಚುವಲ್ ಐಡಿ ನಂಬರ್ ಜನರೇಟ್ ಮಾಡಿಕೊಳ್ಳಿ. ಇದಕ್ಕಾಗಿ ಎಸ್‌ಎಂಎಸ್ ಅಥವಾ UIDAI ವೆಬ್‌ಸೈಟ್ ಬಳಸಬಹುದು. https://resident.uidai.gov.in/bio-lock ಲಿಂಕ್ ಮೂಲಕ ನೇರವಾಗಿ ಪ್ರೊಫೈಲ್ ಲಾಕ್ ಸೆಕ್ಷನ್‌ಗೆ ಹೋಗಬಹುದು. ಅಥವಾ UIDAI ವೆಬ್‌ಸೈಟ್‌ನಲ್ಲಿರುವ My Aadhaar ಟ್ಯಾಬ್ ಕ್ಲಿಕ್ ಮಾಡಿ. ನಂತರ Aadhaar Services ವಿಭಾಗದಲ್ಲಿರುವ Aadhaar lock/unlock ವಿಭಾಗಕ್ಕೆ ಹೋಗಿ. ನಿಮ್ಮ ಆಧಾರ್ ಸಂಖ್ಯೆ ನಮೂದಿಸಿ. ನಿಮ್ಮ ನೋಂದಾಯಿತ ಮೊಬೈಲ್‌ಗೆ ಬರುವ ಒಟಿಪಿ ನಮೂದಿಸಿ. ನಂತರ ಸ್ಕ್ರೀನ್ ಮೇಲೆ ಇರುವ Enable ಆಯ್ಕೆಯನ್ನು ಕ್ಲಿಕ್ ಮಾಡಿ. ಈ ಹಂತದ ನಂತರ ನಿಮ್ಮ ಬಯೊಮೆಟ್ರಿಕ್ ವಿವರಗಳು ಲಾಕ್ ಆಗುತ್ತವೆ. ಒಂದು ವೇಳೆ ನಿಮ್ಮ ಬಯೊಮೆಟ್ರಿಕ್ ವಿವರಗಳನ್ನು ಅನ್‌ಲಾಕ್ ಮಾಡಬೇಕು ಎಂಬ ಪರಿಸ್ಥಿತಿ ಬಂದರೆ ಮೊದಲೇ ಪಡೆದುಕೊಂಡಿದ್ದ ವರ್ಚುವಲ್ ಐಡಿ ನಮೂದಿಸಿ. ಒಟಿಪಿ ಎಂಟರ್ ಮಾಡಿ. ನೀವು ಒಟಿಪಿ ಎಂಟರ್ ಮಾಡಿದ ನಂತರ ನಿಮ್ಮ ಆಧಾರ್ ಬಯೋಮೆಟ್ರಿಕ್ ವಿವರಗಳು ಅನ್‌ಲಾಕ್ ಆಗುತ್ತವೆ.

ಶೀಘ್ರದಲ್ಲೇ ಎನ್‌ಐಎಗೆ ಹಸ್ತಾಂತರ: ಡಿಜಿಪಿ: ಮಂಗಳೂರು: ಮಂಗಳೂರಿನ ಗರೋಡಿಯಲ್ಲಿ ಸಂಭವಿಸಿದ ಕುಕ್ಕರ್ ಬಾಂಬ್ ಸ್ಫೋಟ ಪ್ರಕರಣವನ್ನು ಶೀಘ್ರದಲ್ಲೇ ರಾಷ್ಟ್ರೀಯ ತನಿಖಾ ಸಂಸ್ಥೆ(ಎನ್‌ಐಎ)ಗೆ ಅಧಿಕೃತಕವಾಗಿ ಹಸ್ತಾಂತರಿಸಲಾಗುವುದು ಎಂದು ರಾಜ್ಯ ಪೊಲೀಸ್ ಮಹಾ ನಿರ್ದೇಶ(ಡಿಜಿಪಿ) ಪ್ರವೀಣ್ ಸೂದ್ ಅವರು ಬುಧವಾರ ಹೇಳಿದ್ದಾರೆ. ಇಂದು ರಾಜ್ಯ ಗೃಹ ಸಚಿವ ಆರಗ ಜ್ಞಾನೇಂದ್ರ ಹಾಗೂ ಡಿಜಿಪಿ ಪ್ರವೀಣ್ ಸೂದ್ ಅವರು ನಗರದ ಹೊರವಲಯದಲ್ಲಿ ಸ್ಫೋಟ ಸಂಭವಿಸಿದ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಬಳಿಕ ಆಟೋ ಚಾಲಕ ಪುರುಷೋತ್ತಮ ಪೂಜಾರಿ ಚಿಕಿತ್ಸೆ ಪಡೆಯುತ್ತಿರುವ ಆಸ್ಪತ್ರೆಗೂ ಭೇಟಿ ನೀಡಿದರು.

ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಆರಗ ಜ್ಞಾನೇಂದ್ರ ಅವರು, ಸ್ಫೋಟದ ಆರೋಪಿ ಮೊಹಮ್ಮದ್ ಶಾರಿಕ್ ತಮಿಳುನಾಡಿನ ಕೊಯಮತ್ತೂರು ಮತ್ತು ಕನ್ಯಾಕುಮಾರಿ ಯಂತಹ ವಿವಿಧ ಸ್ಥಳಗಳಿಗೆ ಭೇಟಿ ನೀಡಿದ್ದು, ಪ್ರಕರಣದ ತನಿಖೆ ನಡೆಯುತ್ತಿದೆ. ತನಿಖೆಯ ಭಾಗವಾಗಿ ವಿವಿಧ ಪೊಲೀಸ್ ತಂಡಗಳನ್ನು ರಚಿಸಲಾಗಿದೆ ಮತ್ತು ವಿವಿಧ ಸ್ಥಳಗಳಿಗೆ ತಂಡಗಳನ್ನು ಕಳುಹಿಸಲಾಗಿದೆ ಎಂದರು. ಈ ವೇಳೆ ಮಾತನಾಡಿದ ಪ್ರವೀಣ್ ಸೂದ್ ಅವರು, ಸ್ಫೋಟ ನಡೆದ ಮೊದಲ ದಿನದಿಂದಲೇ ಎನ್‌ಐಎ ಮತ್ತು ಕೇಂದ್ರೀಯ ತನಿಖಾ ಸಂಸ್ಥೆಗಳು ತನಿಖೆಯ ಭಾಗವಾಗಿದ್ದು, ಶೀಘ್ರದಲ್ಲೇ ಪ್ರಕರಣವನ್ನು ಅಧಿಕೃತವಾಗಿ ಎನ್‌ಐಎಗೆ ಹಸ್ತಾಂತರಿಸಲಾಗುವುದು ಎಂದು ಹೇಳಿದರು.

ಹ್ಯಾಪಿ ಬರ್ತ್‌ಡೇ ಟೂಯೂ ತಬೋ...!?

• ಮೈಸೂರು ಮೃಗಾಲಯದಲ್ಲಿ ಗೊರಿಲ್ಲಾ ಹುಟ್ಟುಹಬ್ಬ ಆಚರಣೆ • 15ನೇ ವಸಂತಕ್ಕೆ ಕಾಲಿರಿಸಿದ ತಬೋಗೆ ಶುಭ ಕೋರಿದ ಪ್ರವಾಸಿಗರು

ಮೈಸೂರು, ನ.23(ಎಂಟಿವೈ)–ಮೈಸೂರಿನ ಮೃಗಾಲಯದಲ್ಲಿ ಗೊರಿಲ್ಲಾದ ಹುಟ್ಟುಹಬ್ಬದ ಸಂಭ್ರಮ ಮನೆ ಮಾಡಿತ್ತು. 15ನೇ ವಸಂತಕ್ಕೆ ಕಾಲಿರಿಸಿದ 'ತಬೋ' ಹೆಸರಿನ ಗೊರಿಲ್ಲಾಗೆ ಇಷ್ಟದ ಹಣ್ಣು–ತರಕಾರಿ ನೀಡುವುದರೊಂದಿಗೆ ಜನ್ಮದಿನ ಆಚರಿಸಲಾಯಿತು. ಮೃಗಾಲಯ ವೀಕ್ಷಣೆಗೆಂದು ಬಂದಿದ್ದ ಪ್ರವಾಸಿಗರು ಬರ್ತ್ ಡೇ ಬಾಯ್‌ಗೆ ಶುಭ ಹರಸಿದರು.

ಕೊರೊನಾದ ಬಳಿಕ ಕಳೆದ ವರ್ಷ ಜರ್ಮನಿಯಿಂದ ಮೈಸೂರು ಮೃಗಾಲಯಕ್ಕೆ ಪ್ರಾಣಿ ವಿನಿಮಯ ಯೋಜನೆಯಡಿ ಎರಡು ಗೊರಿಲ್ಲಾ ತರಲಾಗಿತ್ತು. ಅದರಲ್ಲಿ ತಬೋ ಗಂಡು ಗೊರಿಲ್ಲಾ ಇಂದು 15ನೇ ವರ್ಷಕ್ಕೆ ಕಾಲಿರಿಸಿದೆ.

ಈ ಹಿಂದೆ ಜರ್ಮನಿ ಮೃಗಾಲಯದಲ್ಲೂ ಪ್ರತಿ ವರ್ಷ ತಬೋಗೆ ಹುಟ್ಟುಹಬ್ಬ ಆಚರಿಸಲಾಗುತ್ತಿತ್ತು. ಮೈಸೂರು ಮೃಗಾಲಯಕ್ಕೆ ಕರೆ ತಂದ ಬಳಿಕ ಕಳೆದ ಜನವರಿಗೆ ಡೆಂಬಾ ಗೊರಿಲ್ಲಾಗೆ 9ನೇ ವರ್ಷದ ಜನ್ಮದಿನವನ್ನು ಆಚರಿಸಲಾಗಿತ್ತು. ಇಂದು ತಬೋಗೆ ಹುಟ್ಟುಹಬ್ಬ ಆಚರಿಸಿ, ವಿವಿಧ ಹಣ್ಣು, ತರಕಾರಿಯನ್ನು ವಿಶಿಷ್ಟವಾಗಿ ಜೋಡಿಸಿ, ಅದಕ್ಕೆ ತಿನ್ನಲು ನೀಡಿ ಸಂಭ್ರಮಿಸಲಾಯಿತು. ಗೊರಿಲ್ಲಾದ ಮನೆ ಆವರಣದಲ್ಲಿ 'ಹ್ಯಾಪಿ ಬರ್ತ್‌ಡೇ ತಬೋ' ಎಂದು ತರಕಾರಿಯಿಂದ ಬರೆಯಲಾಗಿತ್ತು. ಪೈನಾಪಲ್, ಪರಂಗಿ ಹಣ್ಣು, ಸೇಬು, ಕಿತ್ತಳೆ, ಕರ್ಬೂಜಾ, ದ್ರಾಕ್ಷಿ, ಕಲ್ಲಂಗಡಿ, ಕರ್ಜೂರ, ಬಾದಾಮಿ, ಗೋಡಂಬಿ ಸೇರಿದಂತೆ ವಿವಿಧ ಹಣ್ಣುಗಳಿಂದ ವಿಶಿಷ್ಟವಾಗಿ ಜೋಡಿಸಲಾಗಿತ್ತು. ಗೊರಿಲ್ಲಾ ಮನೆ ಆವರಣದಲ್ಲಿ ಹಣ್ಣು, ತರಕಾರಿಗಳಿಂದ ಅಲಂಕಾರ ಮಾಡಿರುವುದನ್ನು ಗಮನಿಸಿದ ಪ್ರವಾಸಿಗರು ಕುತೂಹಲದಿಂದ ಕಾಯುತ್ತಿದ್ದರು. ಈ ವೇಳೆ ಬೋನ್‌ನಿಂದ ಹೊರಗೆ ಬಂದ ತಬೋ ಪ್ರವಾಸಿಗರು ನಿಂತಿದ್ದ ಸ್ಥಳದತ್ತ ಬಂದು ಅಲ್ಲಿರಿಸಲಾಗಿದ್ದ ಹಣ್ಣು–ತರಕಾರಿಯನ್ನು ತಿಂದು, ಸಂಭ್ರಮಗೊಂಡಿತು. ಈ ವೇಳೆ ನೆರೆದಿದ್ದ ಪ್ರವಾಸಿಗರು 'ಹ್ಯಾಪಿ ಬರ್ತ್ ಡೇ ತಬೋ' ಎಂದು ಕೂಗಿ ಶುಭ ಕೋರಿ ದೀರ್ಘಕಾಲ ಬಾಳಲಿ ಎಂದು ಹರಸಿದರು.



ಮೈಸೂರು ಮೃಗಾಲಯದಲ್ಲಿ 15ನೇ ವರ್ಷದ ಜನ್ಮ ದಿನದ ಸಂಭ್ರಮದಲ್ಲಿರುವ ತಬೋ ಗೊರಿಲ್ಲಾ ಇಷ್ಟದ ಹಣ್ಣು–ತರಕಾರಿ ತಿನ್ನುತ್ತಿರುವುದು.

ಮೈಸೂರು ಮೃಗಾಲಯಕ್ಕೆ ತಂದಿರುವ ತಬೋ ಹೆಸರಿನ ಗೊರಿಲ್ಲಾದ 15ನೇ ವರ್ಷದ ಹುಟ್ಟುಹಬ್ಬವನ್ನು ಮೃಗಾಲಯದಲ್ಲಿ ಆಚರಿಸಲಾಗಿದೆ. ಗೊರಿಲ್ಲಾ ಇರುವ ಬೋನ್‌ನ ಆವರಣದಲ್ಲಿ ವಿವಿಧ ಹಣ್ಣು, ತರಕಾರಿಯನ್ನು ಕತ್ತರಿಸಿ ಜೋಡಿಸಿಡಲಾಗಿತ್ತು. ಪ್ರವಾಸಿಗರು ನೆರೆದಿದ್ದ ಸಂದರ್ಭದಲ್ಲಿ ತಬೋ ಬೋನ್‌ನಿಂದ ಹೊರಬಂದು ಇಷ್ಟದ ಹಣ್ಣು–ತರಕಾರಿ ತಿಂದಿದೆ. ಪಾಲಕರು ವಿಶೇಷ ಆಸಕ್ತಿ ವಹಿಸಿ ತಬೋದ ಜನ್ಮದಿನ ಆಚರಿಸಿದ್ದಾರೆ. ಪ್ರವಾಸಿಗರು ತಬೋ ಜನ್ಮದಿನಕ್ಕೆ ಸಾಕ್ಷಿಯಾಗಿ ಸಂಭ್ರಮಿಸಿದ್ದಾರೆ.

–ಅಜಿತ್ ಎಂ.ಕುಲಕರ್ಣಿ, ಕಾರ್ಯ ನಿರ್ವಾಹಕ ನಿರ್ದೇಶಕ, ಮೈಸೂರು ಮೃಗಾಲಯ

ಡಾ.ವಿಜಯಲಕ್ಷ್ಮಿ ಮನಾಪುರ ಅವರಿಗೆ ಸಂದ 'ಡಾ.ಎಪಿಜೆ ಅಬ್ದುಲ್ ಕಲಾಂ ಜೀವಮಾನ ಸಾಧನೆ ರಾಷ್ಟ್ರೀಯ ಪ್ರಶಸ್ತಿ'



ಮೈಸೂರು, ನ. 23– ಇಂಟರ್‌ನ್ಯಾಷನಲ್ ಇನ್‌ಸ್ಟಿಟ್ಯೂಟ್ ಫಾರ್ ಸೋಷಿಯಲ್ ಅಂಡ್ ಎಕನಾಮಿಕ್ ರಿಫಾರ್ಮ್ಸ್, ಬೆಂಗಳೂರು, (International Institute for Social and Economic Reforms, Bengaluru). ಈ ಸಂಸ್ಥೆಯು ಪ್ರತಿ ವರ್ಷ ಭಾರತದ ವಿವಿಧ ರಾಜ್ಯಗಳಲ್ಲಿ ತಮ್ಮದೇ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸುತ್ತಿರುವವರಿಗೆ ಪ್ರೋತ್ಸಾಹಿಸುವ ದೃಷ್ಟಿಯಿಂದ "ಡಾ. ಎ.ಪಿ.ಜೆ. ಅಬ್ದುಲ್ ಕಲಾಂ ಜೀವಮಾನ ಸಾಧನೆ ರಾಷ್ಟ್ರೀಯ ಪ್ರಶಸ್ತಿ" ನೀಡುತ್ತಾ ಬರುತ್ತಿದೆ.

ಪ್ರಸ್ತುತ 2022ರ ಈ ಪ್ರತಿಷ್ಠಿತ ಪ್ರಶಸ್ತಿಗೆ ಕರ್ನಾಟಕದಿಂದ ಮೈಸೂರು ವಿಶ್ವವಿದ್ಯಾನಿಲಯದ ಮಹಾರಾಜ ಕಾಲೇಜಿನ ಜಾನಪದ ವಿಭಾಗದ ಪ್ರಾಧ್ಯಾಪಕರಾದ ಡಾ. ವಿಜಯಲಕ್ಷ್ಮಿ ಮನಾಪುರ ಅವರು ಭಾಜನರಾಗಿದ್ದು, ಇತ್ತೀಚೆಗೆ ಬೆಂಗಳೂರಿನ ಎ.ಡಿ.ಎ. ರಂಗಮಂದಿರದಲ್ಲಿ ನಡೆದ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಈ ಪ್ರತಿಷ್ಠಿತ ಪ್ರಶಸ್ತಿಯನ್ನು ನೀಡಿ, ಗೌರವಿಸಲಾಯಿತು.

ಡಾ.ವಿಜಯಲಕ್ಷ್ಮಿ ಮನಾಪುರ ಅವರು ಅಧ್ಯಾಪನದ ಜೊತೆ ಜೊತೆಗೆ ವೃತ್ತಿ ಮತ್ತು ಅಭಿರುಚಿಗಳೆರಡರಲ್ಲಿಯೂ ಜಾನಪದವನ್ನೇ ಉಸಿರಾಗಿಸಿಕೊಂಡು, ಅಧ್ಯಯನಶೀಲರಾಗಿ ಜೀವಪರ ಧೋರಣೆಯಿಂದ ಕೆಲಸ ನಿರ್ವಹಿಸುತ್ತಿದ್ದಾರೆ.

ಜಾನಪದ ಕ್ಷೇತ್ರದಲ್ಲಿ ಸೃಜನಶೀಲರಾಗಿ ತಮ್ಮನ್ನು ತೊಡಗಿಸಿಕೊಂಡು ವ್ಯಾಪಕ ಅಧ್ಯಯನ, ವೈಚಾರಿಕ ದೃಷ್ಟಿಕೋನದಿಂದ ಚಿಂತಿಸುವ ಇವರು ಅಂತಾರಾಷ್ಟ್ರೀಯ, ರಾಷ್ಟ್ರೀಯ, ರಾಜ್ಯ ಹಾಗೂ ವಿಶ್ವವಿದ್ಯಾನಿಲಯ ಮಟ್ಟದ ಕಾರ್ಯಾಗಾರ, ವಿಚಾರಸಂಕಿರಣ, ಸಮ್ಮೇಳನಗಳಲ್ಲಿ ಭಾಗವಹಿಸಿ ಇದುವರೆಗೆ 90ಕ್ಕೂ ಹೆಚ್ಚು ಪ್ರಬಂಧಗಳನ್ನು ಮಂಡಿಸಿರುವ ಹಿರಿಮೆ ಇವರದು. ಅಲ್ಲದೆ ನಾಡಿನ ಬೇರೆಬೇರೆ ನಿಯತಕಾಲಿಕೆ, ಸಂಪಾದನಾ ಗ್ರಂಥಗಳಲ್ಲಿ ಇದುವರೆಗೆ 55ಕ್ಕೂ ಹೆಚ್ಚು ವೈವಿಧ್ಯಮಯ ವಿಷಯಗಳತ್ತ ದೃಷ್ಟಿಹರಿಸಿ ಮಹತ್ವಪೂರ್ಣ ಲೇಖನಗಳನ್ನು ಬರೆದು, ಪ್ರಕಟಿಸಿ ಈ ಕ್ಷೇತ್ರದ ತಜ್ಞರ ಗಮನ ಸೆಳೆದಿದ್ದಾರೆ. ಕರ್ನಾಟಕದಲ್ಲಷ್ಟೇ ಅಲ್ಲದೆ ತಮಿಳುನಾಡಿನಲ್ಲೂ ಅಂತಾರಾಷ್ಟ್ರೀಯ ಸಮ್ಮೇಳನಗಳಲ್ಲಿ ಭಾಗವಹಿಸಿ, ಪ್ರಬಂಧ ಮಂಡಿಸಿ ಹೊರ ರಾಜ್ಯದಲ್ಲೂ ಕನ್ನಡದ ಕಂಪನ್ನು ಪಸರಿಸಿದ್ದಾರೆ.

ಜನಪದ ಗಾಯಕರೂ, ಕಲಾಪ್ರದರ್ಶಕರೂ ಆಗಿರುವ ಡಾ. ವಿಜಯಲಕ್ಷ್ಮಿ ಮನಾಪುರ ಅವರು ಜಾನಪದ ಕ್ಷೇತ್ರದಲ್ಲಿ ಸಲ್ಲಿಸುತ್ತಿರುವ ಬೋಧನೆ, ಸಂಶೋಧನೆ, ಕ್ಷೇತ್ರಕಾರ್ಯ, ಪ್ರಕಟಣೆಗಳ ಜೊತೆಗೆ ಜನಪದ ಕಲೆ, ಸಾಹಿತ್ಯ ಹಾಗೂ ಸಂಸ್ಕೃತಿಯ ಬೆಳವಣಿಗೆಗೆ ನೀಡುತ್ತಿರುವ ಅವಿರತ ಸೇವೆಯನ್ನು ಪರಿಗಣಿಸಿ ಪ್ರತಿಷ್ಠಿತ "ಡಾ.ಎ.ಪಿ.ಜೆ. ಅಬ್ದುಲ್ ಕಲಾಂ ಜೀವಮಾನ ಸಾಧನೆ ರಾಷ್ಟ್ರೀಯ ಪ್ರಶಸ್ತಿ' ಯನ್ನು ನೀಡಿ ಗೌರವಿಸಲಾಗಿದೆ.

ಕೊಯಮತ್ತೂರು ಬಾಂಬ್‌ಸ್ಫೋಟ, ಪಿಎಫ್‌ಐ ನಾಯಕರ ಜೊತೆ ಬಾಂಬರ್ ಶಾರಿಕ್‌ಗೆ ನಂಟು



ಮಂಗಳೂರು: ಉಗ್ರರ ಕೃತ್ಯಕ್ಕೆ ಸಹಕಾರ ನೀಡಿದ ಆರೋಪದಲ್ಲಿ ಭಾಗಿಯಾಗಿ ನಿಷೇಧಕ್ಕೆ ಒಳಗಾಗಿರುವ ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ ಸಂಘಟನೆಯ ನಾಯಕರ ಜೊತೆ ಶಾರಿಕ್ ನಂಟು ಇರುವ ಬಗ್ಗೆ ಶಂಕೆ ವ್ಯಕ್ತವಾಗಿದೆ.

ಆಟೋರಿಕ್ಷಾದಲ್ಲಿ ಕುಕ್ಕರ್ ಬಾಂಬ್ ಸ್ಫೋಟಿಸಿದ ಪ್ರಕರಣದ ಆರೋಪಿ ಶಾರಿಕ್‌ಗೂ ತಮಿಳುನಾಡಿನ ಕೊಯಮತ್ತೂರಿನಲ್ಲಿ ದೀಪಾವಳಿ ಸಮಯದಲ್ಲಿ ಅ.23ರಂದು ಸಂಗಮೇಶ್ವರ ದೇವಸ್ಥಾನ ಬಳಿ ನಡೆದಿದ್ದ ಕಾರು ಬಾಂಬ್‌ಸ್ಫೋಟ ಪ್ರಕರಣಕ್ಕೂ ನಂಟು ಇರುವ ಬಗ್ಗೆ ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

ಅನುಮಾನ ಯಾಕೆ: ಸಂಗಮೇಶ್ವರ ದೇವಸ್ಥಾನ ಬಳಿ ಸ್ಫೋಟ ಸಂಭವಿಸುವುದಕ್ಕೆ ಒಂದೂವರೆ ತಿಂಗಳ ಮೊದಲು ಶಾರೀಕ್ ಕೊಯಮತ್ತೂರಿಗೆ ಹೋಗಿದ್ದ ವಿಚಾರ ಬೆಳಕಿಗೆ ಬಂದಿದೆ. ಅಲ್ಲೂ ಸುಳ್ಳು ಮಾಹಿತಿ ನೀಡಿ ಹಿಂದೂ ಎಂದು ಪರಿಚಯಿಸಿಕೊಂಡು ಮೂರು ನಾಲ್ಕು ದಿನ ಅಲ್ಲಿಯೇ ಬಾಡಿಗೆ ಕೊಠಡಿಯಲ್ಲಿ ನೆಲೆಸಿದ್ದ. ಇಲ್ಲಿ ಬಳ್ಳಾರಿಯ ಸಂಡೂರಿನ ಅರುಣ್‌ಕುಮಾರ್ ಗಾವಳಿ ಅವರ ಆಧಾರ್ ಕಾರ್ಡ್ ನೀಡಿದ್ದ. ಅರುಣ್‌ಕುಮಾರ್‌ಗಾವಳಿ ಅವರನ್ನು ಪೊಲೀಸರು ವಿಚಾರಣೆ ನಡೆಸಿದಾಗ ಅವರ ಆಧಾರ್‌ಕಾರ್ಡ್ 6 ತಿಂಗಳ ಹಿಂದೆ ಕಳವಾಗಿದ್ದು ಗೊತ್ತಾಗಿತ್ತು. ಅವರು ಕೊಯಮತ್ತೂರಿಗೆ ಹೋಗಿಯೇ ಇರಲಿಲ್ಲ ವಿಚಾರ ದೃಢಪಟ್ಟಿತ್ತು.

ಕೊಯಮತ್ತೂರು ನಂಟು ಏನು: ಕೊಯಮತ್ತೂರಿನಲ್ಲಿ ಪಿಎಫ್‌ಐ ನಾಯಕರನ್ನು ಶಾರಿಕ್ ಭೇಟಿಯಾಗಿದ್ದ ಶಂಕೆ ವ್ಯಕ್ತವಾಗಿದೆ. ಜೊತೆಗೆ 1998ರ ಕೊಯಮತ್ತೂರು ಬಾಂಬ್ ಬ್ಲಾಸ್ಟ್ ರೂವಾರಿ ಬಾಷಾ ಸಂಬಂಧಿ ಮುಹಮ್ಮದ್ ತಲ್ಕನನ್ನು ಭೇಟಿಯಾದ ಅನುಮಾನ ವಿದೆ. ಮೋಸ್ಟ್ ವಾಂಟೆಡ್ ಅಬ್ದುಲ್ ಮತೀನ್‌ನಿಂದ ಮುಹಮ್ಮದ್ ತಲ್ಕ ಪರಿಚಯ ವಾಗಿರಬಹುದು ಎನ್ನಲಾಗುತ್ತಿದೆ. ತಮಿಳುನಾಡು ಹಿಂದೂ ಮುಖಂಡನ ಹತ್ಯೆಯಲ್ಲಿ ಮತೀನ್ ಹೆಸರು ಕೇಳಿ ಬಂದಿತ್ತು. ತಮಿಳುನಾಡಿನ ಹಲವು ಉಗ್ರ ಜಾಲ ಹೊಂದಿದ್ದವರ ಜೊತೆ ಮತೀನ್‌ಗೆ ಸಂಪರ್ಕ ಇದ್ದು ಆತನೇ ಶಾರಿಕ್‌ಗೆ ಪರಿಚಯ ಮಾಡಿದ್ದಾನೆ ಎಂಬ ಅನುಮಾನ ಬಂದಿದೆ.

ಕಾಂಗ್ರೆಸ್ ಅಧಿಕಾರದಲ್ಲಿದ್ದಾಗ ತಾಳಿದ ಮೃದು ಧೋರಣೆಯೇ ಪ್ರಸ್ತುತ ಬಾಂಬ್ ಸ್ಫೋಟಗಳಿಗೆ ಕಾರಣ



ಬಿಜೆಪಿ ರಾಜ್ಯ ವಕ್ತಾರ ಎಂ.ಜಿ.ಮಹೇಶ್ ಆರೋಪ

ಮೈಸೂರು, ನ.23(ಎಂಟಿವೈ)– ಈ ಹಿಂದೆ ಅಧಿಕಾರದಲ್ಲಿದ್ದ ಕಾಂಗ್ರೆಸ್ ಸರ್ಕಾರ ತಾಳಿದ್ದ ಮೃದು ಧೋರಣೆಯಿಂದಾಗಿ ಇಂದು ಬಾಂಬ್ ಸ್ಫೋಟ ಪ್ರಕರಣಗಳು ನಡೆಯುತ್ತಿವೆ ಎಂದು ಬಿಜೆಪಿ ರಾಜ್ಯ ವಕ್ತಾರ ಎಂ.ಜಿ.ಮಹೇಶ್ ದೂರಿದ್ದಾರೆ.

ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಮುಖ್ಯಮಂತ್ರಿಯಾಗಿದ್ದ ಸಿದ್ದರಾಮಯ್ಯ ಪಿಎಫ್‌ಐ ಕಾರ್ಯಕರ್ತರ ಮೇಲಿದ್ದ ಎಲ್ಲಾ ಕೇಸ್‌ಗಳನ್ನು ವಾಪಸ್ ಪಡೆದು, ಜೈಲಿನಿಂದ ಬಿಡುಗಡೆ ಮಾಡಲು ಸಹಕರಿಸಿದ್ದರು. ಕೇವಲ ಮತ ಬ್ಯಾಂಕ್‌ಗಾಗಿ ಮುಸ್ಲಿಂ ಸಮುದಾಯವನ್ನು ಓಲೈಸಲು ತೆಗೆದುಕೊಂಡ ನಿರ್ಧಾರದಿಂದ ದೇಶ ಅಪಾಯಕಾರಿ ಸನ್ನಿವೇಶವನ್ನು ಎದುರಿಸುವಂತಾಗಿದೆ. ಕಾಂಗ್ರೆಸ್‌ನ ತುಷ್ಟೀಕರಣ ರಾಜಕಾರಣದಿಂದ ಭಯೋತ್ಪಾದನಾ ಕೃತ್ಯಗಳು ಹೆಚ್ಚುತ್ತಿವೆ ಎಂದರು.

20 ವರ್ಷಗಳ ಹಿಂದೆ ಉತ್ತರ ಪ್ರದೇಶದಲ್ಲಿ ಕಾಂಗ್ರೆಸ್ ಹಿಂದೂ ಭಯೋತ್ಪಾದನೆ ಎಂಬ ವಿಚಾರವನ್ನು ಮುಂದಿಟ್ಟುಕೊಂಡು ಸಾಕ್ಷಿ ಪ್ರಜ್ಞಾ ಸಿಂಗ್ ಮತ್ತು ಪುರೋಹಿತ್ ಅವರನ್ನು ಹಿಂದೂ ಭಯೋತ್ಪಾದಕರು ಎಂದು ಬಿಂಬಿಸಲಾಯಿತು. ಮುಂಬೈ ತಾಜ್ ಹೋಟೆಲ್ ಸ್ಫೋಟ ಪ್ರಕರಣದಲ್ಲಿ ಉಗ್ರ ಕಸಬ್ ಜೀವಂತವಾಗಿ ಸೆರೆ ಸಿಗದೇ ಹೋಗಿದ್ದರೆ ಹಿಂದೂ ಭಯೋತ್ಪಾದನೆ ಎಂದು ಆರೆಸ್ಸೆಸ್ ಮೇಲೆ ಗೂಬೆ ಕೂರಿಸುವ ಕೆಲಸ ಮಾಡುತ್ತಿದ್ದರು ಎಂದು ದೂರಿದರು.

ಕೇಂದ್ರ ಗೃಹ ಇಲಾಖೆ ಕಾರ್ಯದರ್ಶಿಯಾಗಿದ್ದ ಆರ್.ವಿ.ಎಸ್. ಮಣಿ ಅವರು ಬರೆದಿರುವ ಪುಸ್ತಕದಲ್ಲಿ ಕಾಂಗ್ರೆಸ್ ಹೇಗೆ ದೇಶದಲ್ಲಿ ಹಿಂದೂ ಭಯೋತ್ಪಾದನೆ ಎಂಬ ಸುಳ್ಳನ್ನು ಸೃಷ್ಟಿಸುತ್ತಿದೆ ಎಂಬುದನ್ನು ವಿವರವಾಗಿ ದಾಖಲಿಸಿದ್ದಾರೆ ಎಂದರು.

ಮಂಗಳೂರಿನ ಕುಕ್ಕರ್ ಬಾಂಬ್ ಬ್ಲಾಸ್ಟ್ ಪ್ರಕರಣದಲ್ಲಿ ಸಿಕ್ಕಿರುವ ಶಾರಿಕ್, ತನ್ನ ವಾಟ್ಸಾಪ್ ಡಿಪಿಯಲ್ಲಿ ಆದಿಯೋಗಿ ಫೋಟೋ ಹಾಕಿದ್ದಾನೆ. ಕೈಗೆ ಕೆಂಪು ದಾರ ಕಟ್ಟಿರುವುದು ಹಾಗೂ ಹಿಂದೂಗಳ ವಿಳಾಸ, ಹೆಸರನ್ನು ನಕಲು ಮಾಡಿರುವುದನ್ನು ಗಮನಿಸಿದರೆ ಕಾಂಗ್ರೆಸ್‌ನ ಅಜೆಂಡವಾದ ಹಿಂದೂ ಭಯೋತ್ಪಾದನೆ ಎಂಬ ಸುಳ್ಳು ಸೃಷ್ಟಿಯ ಮುಂದುವರೆದ ಭಾಗವಾಗಿದೆ ಎಂದು ಆರೋಪಿಸಿದರು. ಸುದ್ದಿಗೋಷ್ಠಿಯಲ್ಲಿ ಬಿಜೆಪಿ ನಗರಾಧ್ಯಕ್ಷ ಟಿ.ಎಸ್. ಶ್ರೀವತ್ಸ, ಸಹ ವಕ್ತಾರ ವಸಂತ್ ಕುಮಾರ್, ಕೇಬಲ್ ಮಹೇಶ್, ಮಹೇಶ್ ರಾಜ್ ಅರಸ್ ಇದ್ದರು.

ಮೈಸೂರು–ಹೈದರಾಬಾದ್ 'ವಂದೇ ಭಾರತ್' ರೈಲಿಗೆ ಬೇಡಿಕೆ

ಮೈಸೂರು, ನ. 23– ಮೈಸೂರು–ಚೆನ್ನೈ ನಡುವೆ 'ವಂದೇ ಭಾರತ್' ಎಕ್ಸ್‌ಪ್ರೆಸ್ ರೈಲು ಸಂಚರಿಸುತ್ತಿರುವುದು ಸರಿಯಷ್ಟೇ. ಇದೀಗ ಮೈಸೂರಿಗೆ ಮತ್ತೊಂದು 'ವಂದೇ ಭಾರತ್' ರೈಲು ಬೇಕು ಎಂಬ ಬೇಡಿಕೆ ಇಡಲಾಗಿದೆ.

ರೈಲ್ವೇ ಬಳಕೆದಾರರ ಫೇಸ್‌ಬುಕ್ ಖಾತೆಗಳಲ್ಲಿ ಈ ಕುರಿತು ಚರ್ಚೆಗಳು ನಡೆಯುತ್ತಿದ್ದು, ಮೈಸೂರು–ಹೈದರಾಬಾದ್ ನಡುವೆ 'ವಂದೇ ಭಾರತ್' ರೈಲು ಸಂಚಾರಕ್ಕೆ ಬೇಡಿಕೆ ಇಡಲಾಗಿದೆ. ಹೈದರಾಬಾದ್ ಐಟಿ ಉದ್ಯಮ ಹಾಗೂ ಪ್ರವಾಸೋದ್ಯಮಕ್ಕೆ ಪ್ರಸಿದ್ಧಿಯಾಗಿದ್ದು, ಮೈಸೂರು ಪ್ರವಾಸಿಗರ ನೆಚ್ಚಿನ ತಾಣವಾಗಿದೆ. ಹೀಗಾಗಿ ಮೈಸೂರು–ಹೈದರಾಬಾದ್ ನಡುವೆ ವಂದೇ ಭಾರತ್ ರೈಲು ಸಂಚಾರಕ್ಕೆ ಕ್ರಮ ಕೈಗೊಳ್ಳಬೇಕು ಎಂಬುದು ರೈಲ್ವೆ ಬಳಕೆದಾರರ ಬೇಡಿಕೆಯಾಗಿದೆ.

ಮಂಗಳೂರಲ್ಲಿ ಬಾಂಬ್ ಬ್ಲಾಸ್ಟ್ ಪ್ರಕರಣ: ಮೈಸೂರಲ್ಲಿ ಓಲಾ, ಊಬರ್ ಟ್ಯಾಕ್ಸಿ ಚಾಲಕರಿಂದ ಮಾಹಿತಿ ಸಂಗ್ರಹ

ಮೈಸೂರು, ನ.23(ಆರ್‌ಕೆ)–ಮಂಗಳೂರಲ್ಲಿ ಕುಕ್ಕರ್ ಬಾಂಬ್ ಸ್ಫೋಟದ ರೂವಾರಿ ಎನ್ನಲಾದ ಶಂಕಿತ ಉಗ್ರ ಮೊಹಮದ್ ಶಾರಿಕ್ ಮೈಸೂರಿನಲ್ಲಿ ಭೇಟಿ ನೀಡುತ್ತಿದ್ದ ಸ್ಥಳಗಳ ಮಾಹಿತಿ ಸಂಗ್ರಹಿಸುತ್ತಿರುವ ಪೊಲೀಸರು, ಓಲಾ, ಊಬರ್ ಟ್ಯಾಕ್ಸಿ, ಆಟೋ ಚಾಲಕರ ವಿಚಾರಣೆ ಮಾಡುತ್ತಿದ್ದಾರೆ.

ಸ್ವಂತವಾಗಿ ಯಾವುದೇ ವಾಹನವನ್ನು ಇಟ್ಟುಕೊಳ್ಳದ ಶಾರಿಕ್, ಲೋಕನಾಯಕನಗರದ ಬಾಡಿಗೆ ಕೊಠಡಿಯಿಂದ ಮೊಬೈಲ್‌ನಲ್ಲೇ ಬುಕ್ ಮಾಡಿಕೊಂಡು ಟ್ಯಾಕ್ಸಿ, ಆಟೋದಲ್ಲೇ ಓಡಾಡುತ್ತಿದ್ದ ಎಂಬ ಮಾಹಿತಿ ತಿಳಿಯುತ್ತಿದ್ದಂತೆಯೇ ಕಾರ್ಯಪ್ರವೃತ್ತರಾದ ತನಿಖಾ ತಂಡದ ಪೊಲೀಸರು, ಆತನ ಮೊಬೈಲ್ ಸಾಫ್ಟ್‌ವೇರ್‌ನಲ್ಲಿ ದಾಖಲಾಗಿರುವ ಡೇಟಾ ಆಧಾರದ ಮೇಲೆ ಶಂಕಿತ ಉಗ್ರನನ್ನು ಡ್ರಾಪ್–ಪಿಕ್‌ಅಪ್ ಮಾಡಿದ ಓಲಾ, ಊಬರ್ ಟ್ಯಾಕ್ಸಿ, ಆಟೋರಿಕ್ಷಾ ಚಾಲಕರನ್ನು ಪತ್ತೆ ಮಾಡಿ ತೀವ್ರ ವಿಚಾರಣೆಗೊಳಪಡಿಸುತ್ತಿದ್ದಾರೆ. ಮೊಹಮದ್ ಶಾರಿಕ್ ಬೆಳಗ್ಗೆ 8 ಗಂಟೆಗೆ ಮನೆಯಿಂದ ಹೊರಟು ರಾತ್ರಿ 10.30 ಗಂಟೆಗೆ ಹಿಂದಿರುಗುತ್ತಿದ್ದ. ಮೈಸೂರು ನಗರದಾದ್ಯಂತ ಬೇರೆ ಬೇರೆ ವಾಹನಗಳಲ್ಲಿ ಬೇರೆ ಬೇರೆ ಸ್ಥಳಕ್ಕೆ ಡ್ರಾಪ್ ತೆಗೆದುಕೊಳ್ಳುತ್ತಿದ್ದ. ನವೆಂಬರ್ 18ರಂದು ಕಡೆಯದಾಗಿ ಆತ, ದಳವಾಯಿ ಶಾಲೆ ಬಳಿಯಿಂದ ಕೆಎಸ್‌ಆರ್‌ಟಿಸಿ ಸಬರ್ಬನ್ ಬಸ್ ನಿಲ್ದಾಣಕ್ಕೆ ಪ್ರಯಾಣಿಸಿದ್ದ ಎಂಬುದು ವಿಚಾರಣೆ ವೇಳೆ ತಿಳಿದು ಬಂದಿದೆ.

ಅಂದು ಸಾರಿಗೆ ಬಸ್‌ನಲ್ಲಿ ಮಡಿಕೇರಿ, ಸುಳ್ಯ, ಪುತ್ತೂರು ಮಾರ್ಗವಾಗಿ ಮಂಗಳೂರು ತಲುಪಿ, ಮರು ದಿನ ಅಲ್ಲಿ ಆಟೋದಲ್ಲಿ ಹೋಗುತ್ತಿದ್ದಾಗ ಕುಕ್ಕರ್ ಬಾಂಬ್ ಸ್ಫೋಟಗೊಂಡಿದೆ ಎಂಬ ಮಾಹಿತಿ ಆಧರಿಸಿ, ಪೊಲೀಸರು ಮೈಸೂರಿನ ಸಬರ್ಬನ್ ಬಸ್ ನಿಲ್ದಾಣದ ಸಿಸಿಟಿವಿ ಕ್ಯಾಮರಾಗಳನ್ನು ಪರಿಶೀಲಿಸಿ, ಆತ ತನ್ನ ಜೊತೆ ಪ್ರೆಷರ್ ಕುಕ್ಕರ್ ತಂದಿದ್ದನೇ ಎಂಬುದನ್ನು ಖಾತರಿಪಡಿಸಿಕೊಳ್ಳುತ್ತಿರುವ ಪೊಲೀಸರು, ಆತ ಮಂಗಳೂರಿಗೆ ಪ್ರಯಾಣಿಸಿದ್ದ ಬಸ್ ಚಾಲಕ, ಕಂಡಕ್ಟರ್ ಅವರಿಂದಲೂ ಮಾಹಿತಿ ಪಡೆದುಕೊಂಡಿದ್ದಾರೆ.

ಶಂಕಿತ ಉಗ್ರನೊಂದಿಗೆ ಮೊಬೈಲ್ ಸಂಪರ್ಕದಲ್ಲಿದ್ದವರು, ಕಂಪ್ಯೂಟರ್ ಟ್ರೈನಿಂಗ್ ಸೆಂಟರ್ ಮಾಲೀಕರು, ಆತನಿಗೆ ನಕಲಿ ಆಧಾರ್ ಕಾರ್ಡ್ ಮಾಡಿಸಲು ಸಹಕರಿಸಿದವರೆಲ್ಲರನ್ನೂ ಪೊಲೀಸರು ಕರೆದು ವಿಚಾರಣೆ ಮಾಡುತ್ತಿದ್ದಾರೆ. ಆತ ವಾಸವಿದ್ದ ಲೋಕನಾಯಕನಗರದ ಮನೆ ಬಳಿ ಮೊಕ್ಕಾಂ ಹೂಡಿರುವ ಮೇಟಗಳ್ಳಿ ಠಾಣೆ ಪೊಲೀಸರು, ಶಂಕಿತ ಉಗ್ರನನ್ನು ಕೇಳಿಕೊಂಡು ಯಾರಾದರೂ ಬರಬಹುದು ಎಂದು ಕಾಯುತ್ತಿದ್ದಾರೆ.

ವಿಶ್ವ ಶೌಚಾಲಯ ಅಂಗವಾಗಿ ಜಾಗೃತಿ ಜಾಥಾ

ಮೈಸೂರು, ನ. 23– ಮೈಸೂರಿನ ಶ್ರೀನಿವಾಸನ್ ಸರ್ವೀಸಸ್ ಟ್ರಸ್ಟ್‌ನ ಸಮಗ್ರ ಗ್ರಾಮಾಭಿವೃದ್ಧಿ ಭಾಗವಾಗಿ ಕರ್ನಾಟಕ ಕ್ಲಸ್ಟರ್‌ನಲ್ಲಿ 72 ಅಂಗನವಾಡಿ ಮತ್ತು 71 ಶಾಲಾ ಶೌಚಾಲಯಗಳನ್ನು ನವೀಕರಿಸಿ ನಿರ್ಮಿಸಿದೆ. ದೊಡ್ಡಕಾನ್ಯ ಹಿರಿಯ ಪ್ರಾಥಮಿಕ ಶಾಲೆ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡಿದ್ದ ವಿಶ್ವ ಶೌಚಾಲಯ ಜಾಗೃತಿ ಕಾರ್ಯಕ್ರಮ ಹಾಗೂ ಜಾಥಾದಲ್ಲಿ 75 ವಿದ್ಯಾರ್ಥಿಗಳು ಮತ್ತು ಶಿಕ್ಷಕರು ಭಾಗವಹಿಸಿ ಶೌಚಾಲಯದ ಬಳಕೆ ಮತ್ತು ನಿರ್ವಹಣೆಯ ಮಹತ್ವದ ಕುರಿತು ಘೋಷಣೆಗಳ ಫಲಕಗಳನ್ನು ಹಿಡಿದು ಸಮುದಾಯಕ್ಕೆ ಜಾಗೃತಿ ಮೂಡಿಸಿದರು.


ಶೃಂಗೇರಿ ಕ್ಷೇತ್ರದಿಂದ ವಾಣಿಜ್ಯೋದ್ಯಮಿ ಸುಧಾಕರ ಶೆಟ್ಟಿ ಸ್ಪರ್ಧೆ

ಮೈಸೂರು, ನ.23(ಜಿಎ)– ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಶೃಂಗೇರಿ ಕ್ಷೇತ್ರದಿಂದ ಸ್ಪರ್ಧಿಸುತ್ತೇನೆ ಎಂದು ಖ್ಯಾತ ಉದ್ಯಮಿ ಸುಧಾಕರ್ ಎಸ್. ಶೆಟ್ಟಿ ಘೋಷಿಸಿದರು.

ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ಸುಧಾಕರ್ ಎಸ್.ಶೆಟ್ಟಿ ಸ್ನೇಹ ಬಳಗದ ವತಿಯಿಂದ ಆಯೋಜಿಸಿದ್ದ ಸಮಾಲೋಚನಾ ಸಭೆಯಲ್ಲಿ ಶೃಂಗೇರಿ ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧಿಸುವ ಬಗ್ಗೆ ತಿಳಿಸಿದರು.

ಸಭೆಯಲ್ಲಿ ಮೈಸೂರಿನ ಚೇಂಬರ್ ಆಫ್ ಕಾಮರ್ಸ್, ಹೋಟೇಲ್ ಮಾಲೀಕರ ಸಂಘ, ಧಾನ್ಯ ವರ್ತಕರ ಸಂಘ, ಲಾರಿ ಮಾಲೀಕರ ಸಂಘ, ಶಾಲಾ ಮಾಲೀಕರ ಸಂಘ ಹಾಗೂ ದೇವರಾಜ ಮಾರುಕಟ್ಟೆ ಬಾಡಿಗೆದಾರರ ಸಂಘ ಸೇರಿದಂತೆ 10ಕ್ಕೂ ಹೆಚ್ಚು ಸಂಘದ ಅಧ್ಯಕ್ಷರು, ಪದಾಧಿಕಾರಿಗಳು ಭಾಗವಹಿಸಿದರು.

ಈ ವೇಳೆ ಸಭೆಯಲ್ಲಿ ಕೆಲ ಸಂಘ ಸಂಸ್ಥೆಯ ಅಧ್ಯಕ್ಷರು ಮಾತನಾಡಿ, ಸುಧಾಕರ್ ಎಸ್.ಶೆಟ್ಟಿ ಅವರಿಗೆ ಮೈಸೂರು ಕರ್ಮ ಭೂಮಿಯಾಗಿದ್ದು, ಅನೇಕ ಸಂಘ–ಸಂಸ್ಥೆಯ ಅಧ್ಯಕ್ಷರಾಗಿ ತಮ್ಮದೇ ಸೇವೆ ಸಲ್ಲಿಸಿದ್ದಾರೆ. ಆದರಿಂದ ನೀವು ಮೈಸೂರಿನ ಯಾವುದಾದರೂ ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧಿಸಿ, ನಾವು ಪಕ್ಷಾತೀತವಾಗಿ ನಿಮ್ಮಗೆ ಬೆಂಬಲ ನೀಡುತ್ತೇವೆ. ವಿಧಾನ ಸೌಧವನ್ನು ನೀವು ಪ್ರವೇಶಿಸಿದರೆ, ವಾಣಿಜ್ಯೋದ್ಯಮಿಗಳ ಪರವಾಗಿ ಧ್ವನಿ ಇರಲಿದೆ. ಆದ್ದರಿಂದ ನೀವು ಮೈಸೂರಿನಲ್ಲಿಯೇ ಸ್ಪರ್ಧಿಸಬೇಕು ಎಂದು ಒತ್ತಾಯಿಸಿದರು.


ಧಾನ್ಯ ವರ್ತಕರ ಸಂಘದ ಪದಾಧಿಕಾರಿಗಳು ಸುಧಾಕರ ಎಸ್. ಶೆಟ್ಟಿ ಅವರನ್ನು ಸನ್ಮಾನಿಸಿದರು.

ಎಲ್ಲರ ಅಭಿಪ್ರಾಯ ಮಂಡನೆ ನಂತರ ಮಾತನಾಡಿದ ಸುಧಾಕರ ಎಸ್.ಶೆಟ್ಟಿ, 1979ರಿಂದ ಮೈಸೂರಿನಲ್ಲಿ ನಾನು ಉದ್ಯಮ ನಡೆಸಿಕೊಂಡು ಬಂದಿದ್ದೇನೆ. ಪ್ರತಿ ಹಂತದಲ್ಲಿಯೂ ನನಗೆ ಸಂಸದರಾದ ಶ್ರೀನಿವಾಸ್ ಪ್ರಸಾದ್ ಜೊತೆಯಲ್ಲಿದ್ದರು. ಸಿದ್ದರಾಮಯ್ಯನವರು ಸಹಕಾರ ನೀಡಿದ್ದಾರೆ. ಆದರೆ, ನಾನು ಎಚ್.ಡಿ. ದೇವೇಗೌಡರ ಹಾಗೂ ಕುಮಾರಸ್ವಾಮಿ ಅವರ ಅಭಿಮಾನಿ.

ರಾಜಕೀಯ ನನಗೆ ಇಷ್ಟವಿರಲಿಲ್ಲ. ಅದರಿಂದ ನಾನು ದೂರವಿದೆ. 2006ರಲ್ಲಿ ಮೊದಲ ಬಾರಿ ಎಚ್.ಡಿ.ದೇವೇಗೌಡರು ಹಾಗೂ 2014ರಲ್ಲಿ ಕುಮಾರಸ್ವಾಮಿ ಅವರು ಮನೆಗೆ ಕರೆಸಿ, ನೀವು ರಾಜಕೀಯ ಪ್ರವೇಶ ಮಾಡಬೇಕು ಎಂದು ತಿಳಿಸಿದರು. ಆಗ ನಾನು ವಿನಮ್ರವಾಗಿ ತಿರಸ್ಕರಿಸಿದೆ. ಆದರೆ, ಕಳೆದ ಒಂದು ವರ್ಷದ ಹಿಂದೆ ಪಕ್ಷದ ಉಪಾಧ್ಯಕ್ಷರನ್ನಾಗಿ ಮಾಡಿದರು. ಅಕ್ಟೋಬರ್ 27ರಂದು ಕರೆದು ಈ ಬಾರಿ ಚುನಾವಣೆಯಲ್ಲಿ ಸ್ಪರ್ಧಿಸಬೇಕು ಎಂದು ತಿಳಿಸಿದ್ದಾರೆ ಎಂದರು.

ಸಾ.ರಾ.ಮಹೇಶ್ ಅವರೊಡನೆ ಚರ್ಚಿಸಿ, ನನ್ನ ಜನ್ಮ ಭೂಮಿಗೆ ಏನಾದರೂ ಮಾಡಬೇಕು ಎಂಬ ಉದ್ದೇಶದಿಂದ ಶೃಂಗೇರಿ ಕ್ಷೇತ್ರವನ್ನು ಆಯ್ಕೆ ಮಾಡಿಕೊಂಡೆ. ಇದಕ್ಕೆ ಮುಖ್ಯ ಕಾರಣ ನಾವು ಎಲ್ಲಿಂದ ಬರುತ್ತೇವೋ ಅಲ್ಲಿಗೆ ವಾಪಸ್ ಹೋಗಬೇಕು ಎಂಬುದು ವಿಧಿಯಾಟ. ಅದರಂತೆ ತಾಯಿಗಾಗಿ ಶೃಂಗೇರಿಗೆ ಹೋಗಿದ್ದೆ. ಈ ವೇಳೆ ಅಲ್ಲಿ ನಾನು ಗಮನಿಸಿದ ಹಾಗೇ ಅಲ್ಲಿನ ರಾಜಕಾರಣಿಗಳು ಓಟಿನ ರಾಜಕೀಯ ಬಿಟ್ಟು ಬೇರೆ ಏನು ಮಾಡಿಲ್ಲ. ರಸ್ತೆ, ಕಾಲೋನಿಗಳ ಅಭಿವೃದ್ಧಿಯಾಗಿಲ್ಲ. ಒಂದು ಗಾರ್ಮೆಂಟ್ಸ್, ಮಹಿಳಾ ಉದ್ಯಮಿಗಳು ಇಲ್ಲ. ಈ ಎಲ್ಲವನ್ನು ಗಮನಿಸಿ ಶೃಂಗೇರಿ ಕ್ಷೇತ್ರವನ್ನು ಆಯ್ಕೆ ಮಾಡಿಕೊಂಡಿದ್ದೇನೆ. ನನ್ನ ಜೀವನದಲ್ಲಿ ಸೋಲು–ಗೆಲುವಿಗೆ ಯಾವುದೇ ವಿಶೇಷತೆ ಇಲ್ಲ ಎಂದರು. ಸಭೆಯಲ್ಲಿ ಚೇಂಬರ್ ಆಫ್ ಕಾಮರ್ಸ್‌ನ ಅಧ್ಯಕ್ಷ ಕೆ.ಬಿ. ಲಿಂಗರಾಜು, ಮೈಸೂರು ಹೋಟೇಲ್ ಮಾಲೀಕರ ಸಂಘದ ಅಧ್ಯಕ್ಷ ನಾರಾಯಣಗೌಡ, ದೇವರಾಜ ಮಾರುಕಟ್ಟೆ ಬಾಡಿಗೆದಾರರ ಸಂಘದ ಅಧ್ಯಕ್ಷ ಮಹದೇವ್, ವಿವಿಧ ಸಂಸ್ಥೆಯ ಪದಾಧಿಕಾರಿಗಳು ಭಾಗವಹಿಸಿದ್ದರು.

ಮೈಸೂರು ಮಿತ್ರ

ನ.28, ನಂಜನಗೂಡಿಗೆ ಮುಖ್ಯಮಂತ್ರಿ ಬೊಮ್ಮಾಯಿ

- 200 ಕೋಟಿ ವೆಚ್ಚದ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ
- ಸ್ಥಳ ಪರಿಶೀಲನೆ ನಡೆಸಿದ ಜಿಲ್ಲಾಧಿಕಾರಿ ಡಾ. ಕೆ.ವಿ. ರಾಜೇಂದ್ರ



ನಂಜನಗೂಡು, ನ.23– ತಾಲೂಕಿನಲ್ಲಿ ನುಗು ಏತ ನೀರಾವರಿ, ಶ್ರೀಕಂಠೇಶ್ವರ ಸ್ವಾಮಿ ದೇವಾಲಯದ ಭಕ್ತರ ವಸತಿ ಗೃಹ ನಿರ್ಮಾಣ ಸೇರಿದಂತೆ ಹಲವು ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಲು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಯವರು ನ. 28 ರಂದು ನಗರಕ್ಕೆ ಆಗಮಿಸುತ್ತಿರುವ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿ ಡಾ. ಕೆ.ವಿ.ರಾಜೇಂದ್ರ ಕಾರ್ಯಕ್ರಮ ನಡೆಯುವ ಶ್ರೀಕಂಠೇಶ್ವರ ದೇವಾಲಯದ ಆವರಣಕ್ಕೆ ಭೇಟಿ ನೀಡಿ, ಪರಿಶೀಲನೆ ನಡೆಸಿದರು.

ನಗರದ ಶ್ರೀಕಂಠೇಶ್ವರ ದಾಸೋಹ ಭವನದಲ್ಲಿ ಅಧಿಕಾರಿಗಳ ಪೂರ್ವಬಾವಿ ಸಭೆ ನಡೆಸಿ, ಕಾರ್ಯಕ್ರಮದ ರೂಪುರೇಷೆಗಳ ಬಗ್ಗೆ ಚರ್ಚಿಸಿ, ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ಆಯೋಜಿಸುವಂತೆ ಹಾಗೂ ಸೂಕ್ತ ಪೊಲೀಸ್ ಬಂದೋಬಸ್ತ್ ಏರ್ಪಡಿಸುವಂತೆ ಸೂಚನೆ ನೀಡಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಶಾಸಕ ಬಿ.ಹರ್ಷವರ್ಧನ್, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಯವರು ತಾಲೂಕಿನ ರೈತರ ಬಹು ನಿರೀಕ್ಷಿತ ನುಗು ಏತ ನೀರಾವರಿ ಯೋಜನೆ, ಯಡಿಯಾಲ ಭಾಗದಲ್ಲಿ 38 ಕೋಟಿ ವೆಚ್ಚದಲ್ಲಿ 13 ಕೆರೆ ತುಂಬಿಸುವ ಯೋಜನೆ, ಶ್ರೀಕಂಠೇಶ್ವರ ದೇವಾಲಯದಲ್ಲಿ 16.52 ಕೋಟಿ ವೆಚ್ಚದ ಭಕ್ತರ ವಸತಿ ಗೃಹ, 8 ಕೋಟಿ ವೆಚ್ಚದ ವಿದ್ಯುತ್ ಉಪ ಕೇಂದ್ರ ಹಾಗೂ ನಗರೋತ್ಥಾನ ಯೋಜನೆಯ 8 ಕೋಟಿ ಸೇರಿದಂತೆ ಸುಮಾರು 200 ಕೋಟಿ ವೆಚ್ಚದ ಅಭಿವೃದ್ಧಿ ಕಾಮಗಾರಿಗಳಿಗೆ ಭೂಮಿ ಪೂಜೆ ನಡೆಸಲಿದ್ದಾರೆ ಎಂದರು. ಕಾರ್ಯಕ್ರಮದಲ್ಲಿ ಸಚಿವರಾದ ಗೋವಿಂದ ಕಾರಜೋಳ, ಶ್ರೀರಾಮುಲು, ಶಶಿಕಲಾ ಜೊಲ್ಲೆಯವರು ಭಾಗವಹಿಸಲಿದ್ದು, 10 ಸಾವಿರಕ್ಕೂ ಹೆಚ್ಚು ಮಂದಿ ಕ್ಷೇತ್ರದ ಜನ ಪಾಲ್ಗೊಳ್ಳುವ ನಿರೀಕ್ಷೆ ಇದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಚೇತನ್, ತಹಶೀಲ್ದಾರ್ ಶಿವಮೂರ್ತಿ, ತಾ.ಪಂ. ಇಒ ಶ್ರೀನಿವಾಸ್, ಎ.ಎಸ್.ಪಿ ಡಾ.ನಂದಿನಿ, ನಗರಸಭೆ ಅಧ್ಯಕ್ಷ ಎಚ್.ಎಸ್.ಮಹದೇವಸ್ವಾಮಿ, ಡಿವೈಎಸ್‌ಪಿ ಗೋವಿಂದರಾಜ್, ಸಿ.ಪಿ.ಐ. ಲಕ್ಷ್ಮಿಕಾಂತ್ ತಳವಾರ್ ಉಪಸ್ಥಿತರಿದ್ದರು.

ಶಿಕ್ಷಣದಿಂದ ಆರ್ಥಿಕ, ಸಾಮಾಜಿಕ ಸಮಾನತೆ

ತಿ.ನರಸೀಪುರದಲ್ಲಿ ಕನಕದಾಸರ ಜಯಂತ್ಯುತ್ಸವ ಆಚರಣೆ



ತಿ.ನರಸೀಪುರ, ನ.23– ಶಿಕ್ಷಣದಿಂದಲೇ ಆರ್ಥಿಕ ಮತ್ತು ಸಾಮಾಜಿಕ ಸಮಾನತೆಯನ್ನು ಸಾಧಿಸಲು ಸಾಧ್ಯವಿರುವುದರಿಂದ ಹಿಂದುಳಿದ ವರ್ಗಗಳ ಸಮುದಾಯದ ಮಕ್ಕಳು ಕಡ್ಡಾಯವಾಗಿ ಶಿಕ್ಷಣವನ್ನು ಪಡೆದು ಕೊಳ್ಳಬೇಕು ಎಂದು ತಾಲೂಕು ಕುರುಬರ ಸಂಘದ ಅಧ್ಯಕ್ಷ ಮನ್ನೇಹುಂಡಿ ಮಹೇಶ್ ಹೇಳಿದರು.

ಪಟ್ಟಣದ ಕಡ್ಲೆ ರಂಗಮ್ಮನ ಬೀದಿಯಲ್ಲಿ ಶ್ರೀ ವೀರ ಸಂಗೊಳ್ಳಿ ರಾಯಣ್ಣ ಸೇವಾ ಸಮಿತಿ ಹಾಗೂ ಕನಕ ಯುವ ಸೇನಾ ಸಮಿತಿ ವತಿಯಿಂದ ಹಮ್ಮಿಕೊಂಡಿದ್ದ ಸಂತ ಶ್ರೇಷ್ಠ ಕನಕದಾಸರ ಜಯಂತ್ಯುತ್ಸವ ಕಾರ್ಯಕ್ರಮದಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ಶಿಕ್ಷಣವನ್ನು ಪಡೆಯಲಾಗದ್ದರಿಂದ ಹಿಂದುಳಿದ ವರ್ಗಗಳ ಸಮುದಾಯದಲ್ಲಿ ಇಂದಿಗೂ ದುಡಿಯುವ ಜನರ ಸಂಖ್ಯೆ ಹೆಚ್ಚಿದೆ. ಶಿಕ್ಷಣ ಸಮಾಜದಲ್ಲಿ ಸಮಾನತೆಯನ್ನು ಕಂಡುಕೊಳ್ಳುವುದರಿಂದ ಪ್ರತಿಯೊಬ್ಬರೂ ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡಬೇಕು ಎಂದರು.

ಸಮಾಜದಲ್ಲಿ ಅಸಮಾನತೆ ಭಾವನೆಯ ನೋವನ್ನ ಅನುಭವಿಸಿದ ಕನಕದಾಸರು ಕೀರ್ತನೆಗಳ ಮೂಲಕ ಸಾಮಾಜಿಕ ಜಾಗೃತಿಯನ್ನು ಮೂಡಿಸಿ ಸಂತ ಶ್ರೇಷ್ಠರಾದರು. ಪರಮ ಭಕ್ತಿಯ ಮೂಲಕ ದೇವರ ದರ್ಶನವನ್ನು ಪಡೆದು ದೈವಾಂಶಸಂಭೂತರಾದರು. ಕನಕದಾಸರ ಜಯಂತ್ಯುತ್ಸವ ಆಚರಣೆಗೆ ಸೀಮಿತವಾಗದೆ ಸಾಮಾಜಿಕ ಸಾಮರಸ್ಯ ಹಾಗೂ ಜನ ಸಮುದಾಯದ ನಡುವೆ ಉತ್ತಮ ಬಾಂಧವ್ಯವನ್ನು ಬೆಸೆಯುವ ಕಾರ್ಯಕ್ರಮವನ್ನಾಗಿ ಮಾಡಬೇಕೆಂದು ಯುವ ಜನರಿಗೆ ಮನ್ನೆಹುಂಡಿ ಮಹೇಶ್ ಸಲಹೆ ನೀಡಿದರು.

ಪುರಸಭಾ ಸದಸ್ಯ ಬಾದಾಮಿ ಮಂಜು ಮಾತನಾಡಿದರು. ಕಾರ್ಯಕ್ರಮದಲ್ಲಿ ಕುರುಬರ ಸಂಘದ ಅಧ್ಯಕ್ಷ ಸೇರಿದಂತೆ ಆಡಳಿತ ಮಂಡಳಿಯ ಹಲವು ನಿರ್ದೇಶಕರನ್ನು ಸನ್ಮಾನಿಸಲಾಯಿತು. ಪುರಸಭೆ ನಾಮ ನಿರ್ದೇಶಿತ ಸದಸ್ಯ ಕೆ.ನಂಜುಂಡಸ್ವಾಮಿ, ಗ್ರಾ.ಪಂ ಮಾಜಿ ಅಧ್ಯಕ್ಷ ಅಕ್ಕೂರು ಗುರುಮೂರ್ತಿ, ತಾಲೂಕು ಕುರುಬರ ಸಂಘದ ಪ್ರಧಾನ ಕಾರ್ಯದರ್ಶಿ ಕೊತ್ತೇಗಾಲ ಬಸವರಾಜು, ಉಪಾಧ್ಯಕ್ಷ ಎಂ.ವೆಂಕಟೇಶ್ (ವೆಂಕಿ), ನಿರ್ದೇಶಕ ಹೆಚ್.ಸಿ.ಅರುಣಕುಮಾರ, ಲೋಹಿತ್, ಪಿ.ಮಹೇಶ್, ಕೆ.ನಾಗರಾಜು, ಹಾಳೇಗೌಡ, ಡಿ.ನಾಗರಾಜು, ಗೋವರ್ಧನ್, ಅಶೋಕ್ ಕುಮಾರ್, ನಾಗರಾಜು ಮೂಗೂರು, ಚಿಕ್ಕ ಯಜಮಾನ್ ರಾಜಣ್ಣ, ಮುಖಂಡರುಗಳಾದ ಅನೂಪ್‌ಗೌಡ, ಉಮೇಶ್, ಸೋಮುದಾದಾ, ಸಿದ್ದು, ಸತೀಶ, ಹರೀಶ, ಭರತ, ಮಹೇಶ, ಸಿದ್ದರಾಜು, ವಿನೋದ್, ಶಿವರಾಜು, ದಯಾನಂದ ಹಾಗೂ ಇನ್ನಿತರರು ಹಾಜರಿದ್ದರು.

ನನ್ನ ಮಗನ ರಾಜಕೀಯ ಭವಿಷ್ಯ ರೂಪಿಸಿದ ಕಗ್ಗುಂಡಿಯನ್ನು ಮರೆಯಲ್ಲ



ಪಿರಿಯಾಪಟ್ಟಣ, ನ.23– ನನ್ನ ಮಗನ ರಾಜಕೀಯ ಭವಿಷ್ಯವನ್ನು ರೂಪಿಸಿದ ಕಗ್ಗುಂಡಿ ಗ್ರಾಮವನ್ನು ನನ್ನ ಜೀವ ಇರುವ ತನಕ ಮರೆಯುವುದಿಲ್ಲ ಎಂದು ಶಾಸಕ ಕೆ.ಮಹದೇವ್ ಭಾವುಕರಾಗಿ ನುಡಿದರು.

ತಾಲೂಕಿನ ಕಗ್ಗುಂಡಿ ಗ್ರಾಮದಲ್ಲಿ ಎರಡು ಹೆಚ್ಚುವರಿ ಶಾಲಾ ಕೊಠಡಿಗೆ ಸುಮಾರು 27 ಲಕ್ಷ ವೆಚ್ಚದ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ ಅವರು ಮಾತನಾಡಿದರು. ಕಗ್ಗುಂಡಿ ಗ್ರಾಮ ಜೆಡಿಎಸ್ ಪಕ್ಷದ ಭದ್ರಕೋಟೆ. ಈಗಾಗಲೇ ಕಗ್ಗುಂಡಿ ಗ್ರಾಮವನ್ನು ಮಾದರಿ ಗ್ರಾಮವನ್ನಾಗಿ ಮಾಡಿದ್ದೇನೆ. ಅದೇ ರೀತಿ ಇಂದು 35 ಲಕ್ಷ ವೆಚ್ಚದ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿದ್ದೇನೆ. ಅದೇ ರೀತಿ ನನ್ನ ಮಗ ಎರಡು ಬಾರಿ ಮೈಮುಲ್ ನಿರ್ದೇಶಕರಾಗಿ ಆಯ್ಕೆಯಾಗಿ ಮತ್ತೆ ಮೈಮುಲ್ ಅಧ್ಯಕ್ಷರಾಗಿ ಆಯ್ಕೆ ಮಾಡಿದ ಎಲ್ಲ ಮೈಮುಲ್ ನಿರ್ದೇಶಕರಿಗೆ ತುಂಬು ಹೃದಯದ ಧನ್ಯವಾದ ಎಂದರು.

ಕಗ್ಗುಂಡಿ ಗ್ರಾಮದಲ್ಲಿ ನನ್ನ ಮಗನ ರಾಜಕೀಯಕ್ಕೆ ಪ್ರತಿಯೊಬ್ಬರು ಸಹಕಾರ ಮಾಡಿದ್ದಾರೆ. ಯಾವುದೇ ಪಕ್ಷ ಭೇದ ಮರೆತು ಪ್ರತಿಯೊಬ್ಬರು ಅವನ ಗೆಲುವಿಗೆ ಶ್ರಮಿಸಿದ್ದಾರೆ ಎಂದು ಭಾವುಕರಾಗಿ ಕಾರ್ಯಕ್ರಮದಲ್ಲಿ ಕಣ್ಣೀರು ಹಾಕಿದರು. ಇದರಿಂದ ನಾನು ಈ ಗ್ರಾಮಕ್ಕೆ ಹೆಚ್ಚು ಹೆಚ್ಚು ಅನುದಾನ ನೀಡಿ ಅವರ ಋಣವನ್ನು ತೀರಿಸಿದ್ದೇನೆ. ಮುಂದಿನ ಬಾರಿ ವಿಧಾನಸಭಾ ಚುನಾವಣೆ ಹತ್ತಿರ ಬರುತ್ತಿದ್ದು, ನನ್ನ ಕಗ್ಗುಂಡಿ ಜನ ಮತ್ತೆ ನನಗೆ ಹೆಚ್ಚು ಮತ ಹಾಕುವುದರ ಮೂಲಕ ನನ್ನ ಗೆಲುವಿಗೆ ಶ್ರಮಿಸಬೇಕು ಎಂದು ಕರೆಕೊಟ್ಟರು. ಈ ಸಂದರ್ಭ ತಾಲೂಕು ಜೆಡಿಎಸ್ ಪಕ್ಷದ ಅಧ್ಯಕ್ಷ ಅಣ್ಣಯ್ಯ ಶೆಟ್ಟಿ, ಗ್ರಾಪಂ ಸದಸ್ಯ ಹರೀಶ್, ಪ್ರದೀಪ್, ಶಾಲಾ ಎಸ್‌ಡಿಎಂಸಿ ಅಧ್ಯಕ್ಷ ನಾಗೇಶ್, ಬಿಇಓ ಬಸವರಾಜ್, ಜಿಪಂ ಎಇ ಈ ಮಲ್ಲಿಕಾರ್ಜುನ್, ಮುಖಂಡರಾದ ಹೊನ್ನೇಗೌಡ, ಸ್ವಾಮಿಗೌಡ, ಮುದ್ದೇಗೌಡ, ಕೆ. ಸುರೇಶ್, ಪುಟ್ಟರಾಜ್, ಸುರೇಂದ್ರ, ಶಾಲಾ ಮುಖ್ಯ ಶಿಕ್ಷಕ ನಟರಾಜ್ ಬಿಟಿ, ಸ್ವಾಮಿ, ಮೂರ್ತಿ ಮತ್ತಿತರರು ಹಾಜರಿದ್ದರು.

20 ವರ್ಷಗಳ ಬಳಿಕ ಅದ್ದೂರಿ ತೆಪ್ಪೋತ್ಸವ



ಕಂಪಲಾಪುರ, ನ.23– 20 ವರ್ಷಗಳ ಬಳಿಕ ಗ್ರಾಮದ ಹೆಗ್ಗೆರೆ ಕೆರೆ ಭರ್ತಿಯಾಗಿದ್ದು, ಕಾರ್ತಿಕ ಮಾಸದ ಕೊನೆ ಸೋಮವಾರ ತೆಪ್ಪೋತ್ಸವ ವಿಜೃಂಭಣೆಯಿಂದ ನೆರವೇರಿತು.

ಕಳೆದ 20 ವರ್ಷಗಳಿಂದ ನೀರಿಲ್ಲದೆ ಬರಿದಾಗಿದ್ದ ಕೆರೆಗೆ ಈ ಬಾರಿ ಸುರಿದ ಮಳೆಗೆ ಕೆರೆ ಭರ್ತಿಯಾಗಿ ಶಾಸಕ ಕೆ.ಮಹದೇವ್, ಗ್ರಾಮಸ್ಥರು ಹಾಗೂ ಗ್ರಾಮಪಂಚಾಯಿತಿ ವತಿಯಿಂದ ಇತ್ತೀಚೆಗೆ ಬಾಗಿನವನ್ನೂ ಅರ್ಪಿಸಲಾಯಿತು. ಅಂದಾಜು 250 ಎಕರೆ ವಿಸ್ತೀರ್ಣದ ಹೆಗ್ಗೆರೆ ರಾಷ್ಟ್ರೀಯ ಹೆದ್ದಾರಿ 275 ರ ಪಕ್ಕದಲ್ಲಿಯೇ ಇದ್ದು, ನೋಡುಗರ ಕಣ್ಮನ ತಣಿಸುತ್ತಿದೆ. ತೆಪ್ಪೋತ್ಸವಕ್ಕೆ 3 ದಿನ ಮುಂಚಿತವಾಗಿ ಗ್ರಾಮದ ಅಧಿದೇವತೆ ಶ್ರೀ ಕರಕಂಠೇಶ್ವರ ದೇವಾಲಯ, ಕೋಡಿಬಸವೇಶ್ವರ, ಮೂಡಲ ಬಸವೇಶ್ವರ ದೇವಾಲಯಗಳಲ್ಲಿ ಪುರೋಹಿತ್ ಗಣೇಶ್ ಭಟ್ ಹಾಗೂ ಮಹದೇವ್‌ರವರಿಂದ ಪೂಜಾ ಕೈಂಕರ್ಯಗಳು ನೆರವೇರಿದವು.

ಮೂಲ ಬಸವೇಶ್ವರ ವಿಗ್ರಹ ಪುನರ್ ಪ್ರತಿಷ್ಠಾಪನೆ: ಗ್ರಾಮದ ಒಳಭಾಗದಲ್ಲಿ ಹೆಗ್ಗೆರೆಗೆ ಹೋಗುವ ಮಾರ್ಗ ಕೆರೆಯ ದಡದಲ್ಲಿ ಇಟ್ಟಿದ್ದ ಮೂಲ ಬಸವೇಶ್ವರ ಮೂರ್ತಿಯನ್ನು ಕಳೆದ 15 ವರ್ಷಗಳ ಹಿಂದೆ ಯಾರೋ ದುಷ್ಕರ್ಮಿಗಳು ಕಳವು ಮಾಡಿದ್ದರು. ಆ ಕಾರಣಕ್ಕೆ ಗ್ರಾಮದ ದಾನಿಯೊಬ್ಬರು ಬಸವೇಶ್ವರ ವಿಗ್ರಹವನ್ನು ಮಾಡಿಸಿಕೊಟ್ಟು ಅದನ್ನು ಹೆಗ್ಗೆರೆ ದಡದಲ್ಲಿ ಶನಿವಾರ ಪ್ರತಿಷ್ಠಾಪನೆ ಮಾಡಲಾಯಿತು.

ಕೆರೆ ಏರಿಮೇಲೆ ಕಿಕ್ಕಿರಿದು ತುಂಬಿದ್ದ ಜನಸಾಗರ ಕಂಪಲಾಪುರದ ಇತಿಹಾಸದಲ್ಲಿ ಹಿಂದೆಂದೂ ಕಾಣದ ಜನಸಾಗರ ಇಂದು ನೆರೆದಿದ್ದರು. ತೆಪ್ಪೋತ್ಸವ ನೀರಿನಲ್ಲಿ ಮುಂದೆ ಸಾಗುತ್ತಿದ್ದಂತೆ ಎಲ್ಲರಿಗೂ ಬಿ.ಎಂ.ರಸ್ತೆಯ ಪಕ್ಕದಲ್ಲಿರುವ ಶ್ರೀ ಭೈರವೇಶ್ವರ ಪೆಟ್ರೋಲ್ ಬಂಕ್‌ನ ಆವರಣದಲ್ಲಿ ಪ್ರಸಾದ ವ್ಯವಸ್ಥೆ ಮಾಡಲಾಗಿತ್ತು

ತಾಂತ್ರಿಕ ಕಾರಣ ನೀಡಿ ಸಾಲ ನೀಡಲು ನಿರಾಕರಣೆ ಹಿನ್ನೆಲೆ

ಆತ್ಮಹತ್ಯೆ ಮಾಡಿಕೊಂಡ ರೈತನ ಶವವನ್ನು ಬ್ಯಾಂಕಿನ ಮುಂದಿಟ್ಟುಕೊಂಡು ಪ್ರತಿಭಟನೆ

ಹೆಚ್.ಡಿ.ಕೋಟೆ, ನ.23– ತಾಂತ್ರಿಕ ಕಾರಣ ನೀಡಿ ಸಾಲ ನೀಡಲು ನಿರಾಕರಿಸಿದ ಬ್ಯಾಂಕ್ ಅಧಿಕಾರಿಗಳ ವರ್ತನೆಯಿಂದ ಮನನೊಂದು ಬ್ಯಾಂಕ್ ಆವರಣದಲ್ಲೇ ವಿಷ ಸೇವಿಸಿ ಆತ್ಮಹತ್ಯೆಗೆ ಯತ್ನಿಸಿದ್ದ ರೈತ, ಚಿಕಿತ್ಸೆ ಫಲಕಾರಿಯಾಗದೆ ಸಾವನ್ನಪ್ಪಿದ್ದು, ಕುಟುಂಬಸ್ಥರು ಮತ್ತು ರೈತರು ಕಾವೇರಿ ಗ್ರಾಮೀಣ ಬ್ಯಾಂಕ್ ಮುಂಭಾಗ ಮೃತ ರೈತನ ಶವವನ್ನಿಟ್ಟುಕೊಂಡು ಪ್ರತಿಭಟನೆ ನಡೆಸಿದರು.

ತಾಲೂಕಿನ ಹೊಸಹೊಳಲು ಗ್ರಾಮದ ನಿವಾಸಿ ನಿಂಗೇಗೌಡ (70) ಎಂಬುವರೇ ಆತ್ಮಹತ್ಯೆ ಮಾಡಿಕೊಂಡವರಾಗಿದ್ದು, ಪ್ರತಿಭಟನೆಯಿಂದ ಬ್ಯಾಂಕ್ ಮುಂದೆ ಪರಿಸ್ಥಿತಿ ಬಿಗುವಿನಿಂದ ಕೂಡಿತ್ತು.

ತಾಲೂಕಿನ ಮಂಚೇಗೌಡನಹಳ್ಳಿಯಲ್ಲಿ ನಿಂಗೇಗೌಡರಿಗೆ ಜಮೀನಿದ್ದು, ಕಬ್ಬು ಮತ್ತು ಹತ್ತಿ ಬೆಳೆಯುತ್ತಿದ್ದರು. ಬೆಳೆ ಸಾಲ ಪಡೆಯಲು ಬ್ಯಾಂಕಿಗೆ ಅರ್ಜಿ ಸಲ್ಲಿಸಿದ್ದರು. ಎಷ್ಟು ದಿನವಾದರೂ ಸಾಲ ಮಂಜೂರು ಆಗಲಿಲ್ಲ. ಇದನ್ನು ಕೇಳಲು ಅವರು ಬ್ಯಾಂಕಿಗೆ ಹೋಗಿದ್ದರು. ಈ ಸಂದರ್ಭದಲ್ಲಿ ಬ್ಯಾಂಕ್ ವ್ಯವಸ್ಥಾಪಕರು ನಿಮಗೆ ಸಿಬಿಲ್ ಸ್ಕೋರ್ ಇಲ್ಲ. ಹಾಗಾಗಿ ನಿಮಗೆ ಸಾಲ ನೀಡಲು ಬರುವುದಿಲ್ಲ ಎಂದು ತಾಂತ್ರಿಕ ಕಾರಣಗಳನ್ನು ತಿಳಿಸಿ ಸಾಲ ನೀಡಲು ನಿರಾಕರಿಸಿದರು.

ಇದರಿಂದ ಬೇಸತ್ತು ನಿಂಗೇಗೌಡ ಬ್ಯಾಂಕಿನಲ್ಲೇ ವಿಷ ಸೇವಿಸಿದರು. ತಕ್ಷಣ ಬ್ಯಾಂಕ್ ಸಿಬ್ಬಂದಿ ಮತ್ತು ಸಾರ್ವಜನಿಕರು ಅವರನ್ನು ಪಟ್ಟಣದ ಸರ್ಕಾರಿ ಆಸ್ಪತ್ರೆಗೆ ದಾಖಲಿಸಿ ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಕೆ.ಆರ್.ಆಸ್ಪತ್ರೆಗೆ ಸೇರಿಸಿದ್ದರು. ಆದರೆ, ಚಿಕಿತ್ಸೆ ಫಲಕಾರಿಯಾಗದೆ ಬುಧವಾರ ಮೃತಪಟ್ಟಿದ್ದಾರೆ. ಅಂತರಸಂತೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ತಾಲೂಕಿನ ಕಬ್ಬು ಬೆಳೆಗಾರರ ಸಂಘದ ಅಧ್ಯಕ್ಷ ಮಾದಪ್ಪ ನೇತೃತ್ವದಲ್ಲಿ ಶವವನ್ನು ಬ್ಯಾಂಕಿನ ಮುಂದೆ ಇಟ್ಟುಕೊಂಡು ಪ್ರತಿಭಟನೆ ನಡೆಸಲಾಯಿತು.

ತಹಶೀಲ್ದಾರ್ ರತ್ನಾಂಬಿಕ ಪ್ರತಿಭಟನಾ ಸ್ಥಳಕ್ಕೆ ಭೇಟಿ ನೀಡಿ, ಸರ್ಕಾರದಿಂದ ಸಿಗುವ ಎಲ್ಲಾ ಸವಲತ್ತುಗಳನ್ನು ಒದಗಿಸಲಾಗುವುದು. ಕಾನೂನು ರೀತಿಯಲ್ಲಿ ನಿಮ್ಮ ಪರವಾಗಿ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು ಎಂದು ರೈತರಿಗೆ ಭರವಸೆ ನೀಡಿದರು. ಇದಕ್ಕೆ ಒಪ್ಪಿದ ರೈತರು ಪ್ರತಿಭಟನೆ ಕೈಬಿಟ್ಟರು. ರೈತ ಮುಖಂಡರಾದ ಕೆಂಡಗಣ್ಣ ಸ್ವಾಮಿ, ಹೊಸವಾಳು ಬೈರೇಗೌಡ, ವಿನೋದ್, ಮಲ್ಲೇಶ್, ಶ್ರೀನಿವಾಸ್, ರವಿ, ಅಭಿ, ಪ್ರಕಾಶ್, ಉಮೇಶ್ ಇದ್ದರು.



> ಈ ಹಿಂದೆ ಸಾಲ ನೀಡಲು ಬ್ಯಾಂಕಿನ ವ್ಯವಸ್ಥಾಪಕರು 10 ಸಾವಿರ ಲಂಚ ಕೇಳಿದ್ದರು. ಈ ವಿಚಾರವನ್ನು ಸಂಘದ ಗಮನಕ್ಕೆ ತರಲಾಗಿ ಸಂಘದ ಪದಾಧಿಕಾರಿಗಳು ವ್ಯವಸ್ಥಾಪಕರನ್ನು ತರಾಟೆ ತೆಗೆದುಕೊಂಡಿದ್ದರು. ಈ ಹಿನ್ನೆಲೆಯಲ್ಲಿ ವ್ಯವಸ್ಥಾಪಕರು ರೈತನಿಗೆ ಸಾಲ ನೀಡಲು ನಿರಾಕರಿಸಿದ್ದರು. ಇದರಿಂದ ಬೇಸತ್ತು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.
>
> – **ಮಾದಪ್ಪ**, ಅಧ್ಯಕ್ಷ, ತಾಲೂಕಿನ ಕಬ್ಬು ಬೆಳೆಗಾರರ ಸಂಘ

ಕೊತ್ತೇಗಾಲ ಗ್ರಾಪಂಗೆ ರತ್ನಮ್ಮ ಅಧ್ಯಕ್ಷರಾಗಿ ಆಯ್ಕೆ



ಸರಗೂರು, ನ.23– ತಾಲೂಕು ಕೊತ್ತೇಗಾಲ ಗ್ರಾಮ ಪಂಚಾಯಿತಿ ನೂತನ ಅಧ್ಯಕ್ಷರಾಗಿ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿ ರತ್ನಮ್ಮ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಅಧ್ಯಕ್ಷ ಸ್ಥಾನಕ್ಕೆ ರತ್ನಮ್ಮ ಅವರು ಮಾತ್ರ ನಾಮಪತ್ರ ಸಲ್ಲಿಸಿದ್ದರಿಂದ ಅವರನ್ನು ಅವಿರೋಧವಾಗಿ ಆಯ್ಕೆ ಮಾಡಿ ಘೋಷಿಸಲಾಯಿತು. ಕೊತ್ತೇಗಾಲ ಗ್ರಾಮ ಪಂಚಾಯಿತಿಯಲ್ಲಿ 15 ಮಂದಿ ಸದಸ್ಯರಿದ್ದು, ಇದರಲ್ಲಿ ಎಲ್ಲಾ ಸದಸ್ಯರು ಚುನಾವಣೆಯಲ್ಲಿ ಭಾಗವಹಿಸಿದ್ದರು.

ಚುನಾವಣೆ ಪ್ರಕ್ರಿಯೆಯನ್ನು ನೀರಾವರಿ ಇಲಾಖೆ ಎಂಜನಿಯರ್ ಜನಾರ್ಧನ್, ಕೊತ್ತೇಗಾಲ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ನಾಗೇಂದ್ರ, ಕಾರ್ಯದರ್ಶಿ ಟಿ.ಎಸ್.ನಾಗರಾಜು ನಡೆಸಿಕೊಟ್ಟರು.

ಗ್ರಾಮ ಪಂಚಾಯತಿ ಉಪಾಧ್ಯಕ್ಷೆ ಕೆ.ಆರ್. ಶೋಭಾ, ಲಕ್ಷ್ಮೀದೇವಿ, ಚೆಲುವಪ್ಪ, ಶೋಭಾ, ವಿಮಲಾ, ಚಿಕ್ಕರಾಜಶೆಟ್ಟಿ, ಮಹಾದೇವಯ್ಯ, ಗೌರಮ್ಮ, ಕೆಂಪಾಲಮ್ಮ, ಮಹೇಶ್, ಕುಮಾರ್, ರತ್ನಮ್ಮ, ಸವಿತಾ, ಗೀತಾ, ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಪಿ.ರವಿ, ಪುರದಕಟ್ಟೆ ಬಸವರಾಜು, ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಮಂಜುನಾಥ್ ಗ್ರಾಮಸ್ಥರು ಭಾಗವಹಿಸಿದ್ದರು.

ಡಿ.3, ಪಿ.ಪಟ್ಟಣದಲ್ಲಿ ಹನುಮ ಜಯಂತಿ

ಪಿರಿಯಾಪಟ್ಟಣ, ನ. 23– ಪಿರಿಯಾಪಟ್ಟಣದಲ್ಲಿ ಡಿ. 3 ರಂದು ಹನುಮ ಜಯಂತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಅಂದು ಬೆಳಗಿನ ಜಾವದಿಂದಲೇ ಶ್ರೀ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದ ಆವರಣದಲ್ಲಿ ಗಣಪತಿ ಹೋಮ ಸೇರಿದಂತೆ ಪೂಜಾ ವಿಧಿ ವಿಧಾನಗಳು ನೆರವೇರಿಸಲಾಗುವುದು.

ನಂತರ ಉತ್ಸವ ಮೂರ್ತಿಯೊಂದಿಗೆ ಶ್ರೀ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದಿಂದ ಹೊರಟ ಭವ್ಯ ಮೆರವಣಿಗೆ ಪಿರಿಯಾಪಟ್ಟಣದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ಪಟ್ಟಣದ ಗೋಣಿಕೊಪ್ಪ ರಸ್ತೆಯಲ್ಲಿರುವ ಪದವಿಪೂರ್ವ ಕಾಲೇಜಿನ ಆವರಣದ ಪುಟ್ಟಣ್ಣ ಕಣಗಾಲ್ ರಂಗಮಂದಿರದಲ್ಲಿ ಸಮಾರೋಪ ಸಮಾರಂಭದೊಂದಿಗೆ ಮುಕ್ತಾಯಗೊಳ್ಳಲಿದೆ. ತಾಲೂಕಿನ ಹನುಮ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಈ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿಕೊಡಬೇಕೆಂದು ತಾಲೂಕು ಶ್ರೀ ಕೋಟೆ ಆಂಜನೇಯ ಉತ್ಸವ ಸಮಿತಿ ಗೌರವಾಧ್ಯಕ್ಷ ಕಿತ್ತೂರು ಶಶಿಕುಮಾರ್ ಮನವಿ ಮಾಡಿದ್ದಾರೆ.

ಡಿಆರ್‌ಸಿ ಸಿನಿಮಾಸ್

ದೂ : 4240422/4241800

- ಸ್ಕ್ರೀನ್ 1 ಕಾಂತಾರ (ಕ): ಬೆ.10.05ಕ್ಕೆ, ಮ.1.10ಕ್ಕೆ, ಸಂ.4.15ಕ್ಕೆ, ರಾ.7.10ಕ್ಕೆ, ರಾ.10.05ಕ್ಕೆ.
- ಸ್ಕ್ರೀನ್ 2 ಮಠ (ಕ): ಬೆ.10ಕ್ಕೆ, ಅಬ್ಬರ (ಕ): ಮ.1.05ಕ್ಕೆ, ರಾ.10.05ಕ್ಕೆ, ಕಾಲಗ ತಲೈವನ್ (ತ): ಸಂ.4ಕ್ಕೆ, ಉಂಚೈ (ಹಿಂ): ಸಂ.6.55ಕ್ಕೆ.
- ಸ್ಕ್ರೀನ್ 3 ಗಂಧದ ಗುಡಿ (ಕ): ಬೆ.10.05ಕ್ಕೆ, ಮ.12.05ಕ್ಕೆ, ಮ.2.10ಕ್ಕೆ, ಯಶೋಧಾ (ತೆ): ಸಂ.4.15ಕ್ಕೆ, ದೃಶ್ಯಂ–2 (ಹಿಂ): ರಾ.7.05ಕ್ಕೆ, ರಾ.10ಕ್ಕೆ.
- ಸ್ಕ್ರೀನ್ 4 ದೃಶ್ಯಂ–2 (ಹಿಂ): ಬೆ.10.10ಕ್ಕೆ, ಬ್ಲಾಕ್ ಪ್ಯಾಂಥರ್ (3ಡಿ)(ಇಂ): ಮ.1ಕ್ಕೆ, ಸಂ.4.05ಕ್ಕೆ, ರಾ.7.10ಕ್ಕೆ, ರಾ.10.15ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

- ಸ್ಕ್ರೀನ್ 1 ದೃಶ್ಯಂ–2 (ಹಿಂ): ಬೆ.9.50ಕ್ಕೆ, ಮ.12.45ಕ್ಕೆ, ಮ.3.40ಕ್ಕೆ, ಸಂ.6.35ಕ್ಕೆ, ರಾ.9.30ಕ್ಕೆ.
- ಸ್ಕ್ರೀನ್ 2 ಕಾಂತಾರ (ಕ): ಬೆ.10.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.15ಕ್ಕೆ, ರಾ.10.20ಕ್ಕೆ.
- ಸ್ಕ್ರೀನ್ 3 ಮಠ (ಕ): ಬೆ.11.30ಕ್ಕೆ, ಖಾಸಗಿ ಪುಟಗಳು (ಕ): ಮ.2.35ಕ್ಕೆ, ಅಬ್ಬರ (ಕ): ಸಂ.5ಕ್ಕೆ, ಗಂಧದ ಗುಡಿ (ಕ): ರಾ.8ಕ್ಕೆ, ಕಾಲಗ ತಲೈವನ್ (ತ): ರಾ.10.10ಕ್ಕೆ.
- ಸ್ಕ್ರೀನ್ 4 ದೃಶ್ಯಂ–2 (ಹಿಂ): ಬೆ.10.45ಕ್ಕೆ, ರಾ.10.30ಕ್ಕೆ, ಬ್ಲಾಕ್ ಪ್ಯಾಂಥರ್ (3ಡಿ)(ಇಂ): ಮ.1.40ಕ್ಕೆ, ರಾ.7.10ಕ್ಕೆ, ಗಂಧದ ಗುಡಿ (ಕ): ಸಂ.5ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

- ಸ್ಕ್ರೀನ್ 1 ಓ (ಕ): ಬೆ.10.30ಕ್ಕೆ, ಯಶೋಧಾ (ತೆ): ಮ.1.15ಕ್ಕೆ, ರಾಣಾ (ಕ): ಸಂ.4ಕ್ಕೆ, ಲವ್ ಟುಡೆ (ತ): ಸಂ.6.30ಕ್ಕೆ, ಯೆಲ್ಲೋ ಗ್ಯಾಂಗ್ಸ್ (ಕ): ರಾ.9.30ಕ್ಕೆ.
- ಸ್ಕ್ರೀನ್ 2 ಹುಬ್ಬಳ್ಳಿ ಡಾಬಾ (ಕ): ಬೆ.10.15ಕ್ಕೆ, ಕಾಂತಾರ (ಕ): ಮ.12.45ಕ್ಕೆ, ಸಂ.6.35ಕ್ಕೆ, ದಿಲ್ ಪಸಂದ್ (ಕ): ಮ.3.40ಕ್ಕೆ, ಗಂಧದಗುಡಿ (ಕ): ರಾ.9.30ಕ್ಕೆ.
- ಸ್ಕ್ರೀನ್ 3 ಕಾಂತಾರ (ಕ): ಬೆ.10.30ಕ್ಕೆ, ಮ.3.25ಕ್ಕೆ, ಗಂಧದ ಗುಡಿ (ಕ): ಮ.1.25ಕ್ಕೆ, ಬ್ಲಾಕ್ ಪ್ಯಾಂಥರ್ (3ಡಿ)(ಇಂ): ಸಂ.6.20ಕ್ಕೆ, ರಾ.9.30ಕ್ಕೆ.
- ಸ್ಕ್ರೀನ್ 4 ದಿಲ್ ಪಸಂದ್ (ಕ): ಬೆ.10.40ಕ್ಕೆ, ಬನಾರಸ್ (ಕ): ಮ.1.45ಕ್ಕೆ, ಮಿರಲ್ (ತ): ಸಂ.4.45ಕ್ಕೆ, ಗಂಧದ ಗುಡಿ (ಕ): ರಾ.7.15ಕ್ಕೆ, ಲವ್ ಟುಡೆ (ತ): ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್

PVR CINEMAS

ಮೊ.ನಂ: 8951357139

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಕಾಂತಾರ (ಕ): ಬೆ.9.20ಕ್ಕೆ, ಮ.12.30ಕ್ಕೆ, ಮ.1ಕ್ಕೆ, ಮ.3.40ಕ್ಕೆ, ಸಂ.6.35ಕ್ಕೆ, ರಾ.9.45ಕ್ಕೆ, ದಿ ಬ್ಲಾಕ್ ಆಡಮ್ (ಇ): ಬೆ.9.55ಕ್ಕೆ, ಮ.12.45ಕ್ಕೆ, ಸ.7.05ಕ್ಕೆ, ರಾ.9.50ಕ್ಕೆ, ಪ್ರಿನ್ಸ್ (ತ): ಮ.12.40ಕ್ಕೆ, ರಾ.7.10ಕ್ಕೆ ಸರ್ದಾರ್ (ತ): ಬೆ. 9.15ಕ್ಕೆ ಮ.3.45ಕ್ಕೆ,

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ಅಬ್ಬರ (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಕಾಂತಾರ (ಕ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಮಿಸ್ ಮಲ್ಲಿಗೆ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ದೃಶ್ಯಂ 2 (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಗಂಧದ ಗುಡಿ (ಕ) ಕಾಂತಾರ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಮಠ (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ನಾನ್ ಮಿರುಗಮ್ಮೈ ಮಾರಾ (ತ)	2 ಪ್ರದರ್ಶನಗಳು
ಸಂಗಂ	
ಗಂಧದಗುಡಿ (ಕ)	4 ಪ್ರದರ್ಶನಗಳು
ಲಿಡೋ	
ಅಬ್ಬರ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಅಬ್ಬರ (ಕ)	4 ಪ್ರದರ್ಶನಗಳು
ಪ್ರಭಾ	
ದಿಲ್ ಪಸಂದ್ (ಕ)	4 ಪ್ರದರ್ಶನಗಳು

ಸಾವಿನಲ್ಲೂ ಒಂದಾದ ದಂಪತಿ

ಮೊದಲು ಪತಿ ಸಾವು, ನಂತರ ಪತ್ನಿಯೂ ನಿಧನ



ಕೆ.ಆರ್.ನಗರ, ನ.23– ಪತಿಯ ಸಾವಿನಿಂದ ಆಘಾತಗೊಂಡ ಪತ್ನಿಯೂ ಕೂಡ ಸಾವನ್ನಪ್ಪಿದ್ದು, ಸಾವಿನಲ್ಲಿಯೂ ಹಿರಿಯ ಜೀವಗಳೆರಡು ಒಂದಾಗಿರುವ ಘಟನೆ ತಾಲೂಕಿನ ಚಂದಗಾಲು ಗ್ರಾಮದಲ್ಲಿ ಜರುಗಿದೆ.

ಗ್ರಾಮದ ರಾಮೇಗೌಡ(70) ಮತ್ತು ಪತ್ನಿ ಗೌರಮ್ಮ(65) ಸಾವಿನಲ್ಲೂ ಒಂದಾದ ದಂಪತಿ. ಸೋಮವಾರ ಸಂಜೆ ಜಮೀನಿನಲ್ಲಿ ಕೆಲಸ ಮಾಡುತ್ತಿದ್ದ ಸಂದರ್ಭದಲ್ಲಿ ರಾಮೇಗೌಡ ಮೃತಪಟ್ಟಿದ್ದು, ಮೃತರ ಅಂತ್ಯ ಸಂಸ್ಕಾರವನ್ನು ಮಂಗಳವಾರ ಮಾಡಲು ಕುಟುಂಬಸ್ಥರು ನಿಶ್ಚಯಿಸಿದ್ದರು. ಪತಿಯ ಸಾವಿನಿಂದ ನೊಂದಿದ್ದ ಗೌರಮ್ಮ ಮಂಗಳವಾರ ಬೆಳಗ್ಗೆ ದಿಢೀರ್ ಎಂದು ಕುಸಿದು ಬಿದ್ದಿದ್ದಾರೆ. ತಕ್ಷಣ ಅವರನ್ನು ಪಟ್ಟಣದ ಸಾರ್ವಜನಿಕ ಆಸ್ಪತ್ರೆಗೆ ಕರೆತಂದು ಚಿಕಿತ್ಸೆ ಕೊಡಿಸಿಕೊಂಡು ಮನೆಗೆ ಕರೆದೊಯ್ದಿದ್ದಾರೆ. ಆದರೆ ಚಿಕಿತ್ಸೆ ಫಲಕಾರಿಯಾಗದೇ ಗೌರಮ್ಮ ಮನೆಯಲ್ಲೇ ಮೃತಪಟ್ಟಿದ್ದಾರೆ ಎಂದು ತಿಳಿದು ಬಂದಿದೆ.

ಮೃತರಿಗೆ ಇಬ್ಬರು ಹೆಣ್ಣು ಮಗಳಿದ್ದು ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ತಂದೆ ತಾಯಿಯನ್ನು ಒಂದೇ ಸಲ ಕಳೆದುಕೊಂಡಿದ್ದರಿಂದ ಕುಟುಂಬದವರ ಆಕ್ರಂದನ ಮುಗಿಲು ಮುಟ್ಟಿತ್ತು. ಮಂಗಳವಾರ ಸಂಜೆ ಗ್ರಾಮದ ಅವರ ಸ್ವಂತ ಜಮೀನಿನಲ್ಲಿ ಮೃತ ದಂಪತಿಗಳ ಅಂತ್ಯಕ್ರಿಯೆಯನ್ನು ನೆರವೇರಿಸಲಾಯಿತು.

ಮನೆ ದೇವರು ನಂಜುಂಡೇಶ್ವರನಿಗೆ ವಿಶೇಷ ಪೂಜೆ ಸಲ್ಲಿಸಿದ ಶಾಸಕ ಮಂಜುನಾಥ್



ಹುಣಸೂರು, ನ.23– ಶಾಸಕ ಹೆಚ್.ಪಿ. ಮಂಜುನಾಥ್ ಅವರು ತಮ್ಮ ಮನೆ ದೇವರಾದ ನಂಜನಗೂಡಿನ ಶ್ರೀ ಶ್ರೀಕಂಠೇಶ್ವರ ದೇವಾಲಯಕ್ಕೆ ಇಂದು ಭೇಟಿ ನೀಡಿ ದೇವರ ದರ್ಶನ ಪಡೆದು ಬೆಲ್ಲದ ತುಲಾಭಾರ ಮಾಡಿಸಿ ಅಮಾವಾಸ್ಯೆಯ ವಿಶೇಷ ಪೂಜೆ ಸಲ್ಲಿಸಿದರು.

ನಂತರ ತಾಲೂಕಿನ ಹನಗೋಡು ಹೋಬಳಿಯ ಕಾಳಬೋಚನಹಳ್ಳಿ ಗ್ರಾಮದ ಶ್ರೀ ನಂದಿಕೇಶ್ವರ ದೇವಾಲಯದಲ್ಲಿ ನಡೆದ ಕಾರ್ತಿಕ ಮಾಸದ ವಿಶೇಷ ಪೂಜೆಯಲ್ಲಿ ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ಗ್ರಾಮಸ್ಥರು ಶಾಸಕರಿಗೆ ಸನ್ಮಾನಿಸಿದರು. ಇದೇ ವೇಳೆ ಗ್ರಾಮದ ಸಮಸ್ಯೆಗಳಾದ ವಿದ್ಯುತ್, ಕುಡಿಯುವ ನೀರು, ಗ್ರಾಮ ಪರಿಮಿತಿಯಲ್ಲಿ ಚರಂಡಿ ಹಾಗೂ ರಸ್ತೆ ಅಭಿವೃದ್ಧಿ ಹಾಗೂ ದೇವಾಲಯಕ್ಕೆ ತೆರಳುವ ರಸ್ತೆ ಅಭಿವೃದ್ಧಿ ಬಗ್ಗೆ ಗ್ರಾಮಸ್ಥರು ತಿಳಿಸಿದರು. ಶಾಸಕರು ಈಗಾಗಲೇ ಲೋಕೋಪಯೋಗಿ ಇಲಾಖೆ ವತಿಯಿಂದ 50 ಲಕ್ಷ ರೂ. ಅನುದಾನ ನೀಡಿದ್ದು, ಗ್ರಾಮ ಪರಿಮಿತಿಯೊಳಗೆ ಸಿಸಿ ರಸ್ತೆ ಹಾಗೂ ಚರಂಡಿ ಕಾಮಗಾರಿಗೆ ಮುಂದಿನ ದಿನಗಳಲ್ಲಿ ಭೂಮಿಪೂಜೆ ನೆರವೇರಿಸಲಾಗುವುದು. ಕುಡಿಯುವ ನೀರು ಹಾಗೂ ವಿದ್ಯುತ್ ಬಗ್ಗೆ ಸ್ಥಳದಲ್ಲಿಯೇ ಸಂಬಂಧಪಟ್ಟ ಅಧಿಕಾರಿಗಳಿಗೆ ದೂರವಾಣಿ ಮೂಲಕ ತರಾಟೆಗೆ ತೆಗೆದುಕೊಂಡು ನಾಳೆಯೇ ಗ್ರಾಮಕ್ಕೆ ಭೇಟಿ ನೀಡಿ ಸಮಸ್ಯೆ ಬಗೆಹರಿಸಬೇಕೆಂದು ಸೂಚನೆ ನೀಡಿದರು.

ತಪ್ಪಾಗಿದ್ದರೆ ಕ್ಷಮಿಸಿ, ಪುತ್ರನಿಗೆ ಜನಸೇವೆ ಮಾಡಲು ಅವಕಾಶ ಕೊಡಿ

ಪಂಚಾಯಿತಿ ಮಟ್ಟದ ಕಾಂಗ್ರೆಸ್ ಸಭೆಯಲ್ಲಿ ಮಾಜಿ ಸಚಿವ ಡಾ. ಹೆಚ್‌ಸಿಎಂ ಮನವಿ



ತಿ.ನರಸೀಪುರ, ನ.23– ಸಚಿವರಾಗಿದ್ದಾಗ ರಾಜ್ಯ ರಾಜಕಾರಣದ ಜವಾಬ್ದಾರಿ ಹೆಚ್ಚಿದ ವೇಳೆ ತಿಳಿದೋ, ತಿಳಿಯದೇ ತಪ್ಪಾಗಿದ್ದರೆ, ಕ್ಷಮೆಯಿರಲಿ. ಕ್ಷೇತ್ರದಲ್ಲಿ ಕಾಂಗ್ರೆಸ್‌ಗೆ ಮತ್ತೊಂದು ಅವಕಾಶ ಕೊಡಿ. ಮುಂಬರುವ ಸಾರ್ವತ್ರಿಕ ವಿಧಾನಸಭಾ ಚುನಾವಣೆಯಲ್ಲಿ ಪುತ್ರ ಸುನೀಲ್ ಬೋಸ್ ಪಕ್ಷದ ಅಭ್ಯರ್ಥಿಯಾಗಿ ಸ್ಪರ್ಧಿಸೋದ್ರಿಂದ ಆತನಿಗೆ ಜನಸೇವೆ ಮಾಡಲು ಬೆಂಬಲ ನೀಡಬೇಕೆಂದು ಮಾಜಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಮನವಿ ಮಾಡಿದ್ದಾರೆ.

ತಾಲೂಕಿನ ಕರೋಹಟ್ಟಿ ಗ್ರಾಮದಲ್ಲಿ ನಡೆದ ಪಂಚಾಯಿತಿ ಮಟ್ಟದ ಕಾಂಗ್ರೆಸ್ ಕಾರ್ಯಕರ್ತರು ಹಾಗೂ ಮುಖಂಡರ ಸಭೆಯಲ್ಲಿ ಮಾತನಾಡಿದ ಅವರು, ಜನರಿಂದಲೇ ರಾಜಕಾರಣದಲ್ಲಿ ಅಧಿಕಾರ ಪಡೆದ ನಾನೇನೂ ಬೃಹಸ್ಪತಿಯೇನಲ್ಲ. ಆಗಿರುವ ತಪ್ಪುಗಳನ್ನು ತಿದ್ದಿಕೊಳ್ಳೋಣ. ಕ್ಷೇತ್ರದಲ್ಲಿ ಬಾಕಿ ಉಳಿದು, ಪೂರ್ಣಗೊಳ್ಳದೆ ನನೆಗುದಿಗೆ ಬಿದ್ದಿರುವ ಅಭಿವೃದ್ಧಿ ಕಾಮಗಾರಿಗಳನ್ನು ಪೂರ್ಣಗೊಳಿಸಲು, ಹಳ್ಳಿಗಾಡಿನ ಜನರ ಬದುಕನ್ನು ಸರ್ಕಾರಿ ಯೋಜನೆಗಳ ಮೂಲಕ ಹಸನುಗೊಳಿಸಲು ಕಾಂಗ್ರೆಸ್‌ಗೆ ಮತ್ತೆ ಅಧಿಕಾರ ನೀಡಬೇಕು ಎಂದರು.

ಇದೇ ಸಂದರ್ಭದಲ್ಲಿ ಕರೋಹಟ್ಟಿ ಹಾಲು ಉತ್ಪಾದಕರ ಸಹಕಾರ ಸಂಘದ ರಸ್ತೆಯ ಅಭಿವೃದ್ಧಿಗೆ ಮಂಜೂರಾಗಿದ್ದ ಅನುದಾನವನ್ನು ಮತ್ತೊಂದು ರಸ್ತೆಗೆ ಬದಲಾಯಿಸಿರುವ ಶಾಸಕರ ವರ್ತನೆ ಬಗ್ಗೆ ಅಲ್ಲಿನ ನಿವಾಸಿಗಳು ಆಕ್ಷೇಪ ವ್ಯಕ್ತಪಡಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಮಾಜಿ ಸಚಿವರು ಇನ್ನೇನೂ ಬರಲಿರುವ ಚುನಾವಣೆಯಲ್ಲಿ ಸುನಿಲ್ ಬೋಸ್ ಬೆಂಬಲಿಸಿ, ಕಾಂಗ್ರೆಸ್ ಗೆಲ್ಲಿಸಿಕೊಡಿ. ಅಭಿವೃದ್ಧಿಗೊಳ್ಳದಿರುವ ರಸ್ತೆಗಳನ್ನು ನಾನೇ ಖುದ್ದಾಗಿ ಸರಿಪಡಿಸುತ್ತೇನೆ ಎಂದು ಭರವಸೆ ನೀಡಿದರು.

ಬಿಜೆಪಿ ಹಾಗೂ ಜೆಡಿಎಸ್ ಮುಖಂಡರುಗಳಾದ ಪ್ರಭುಸ್ವಾಮಿ, ರಾಜೇಂದ್ರ ಪ್ರಸಾದ್, ಉಮೇಶ, ರಾಜಶೇಖರ, ಮಲ್ಲಿಕಾರ್ಜುನ ಸ್ವಾಮಿ, ನಾಗಣ್ಣ, ಚಂದ್ರೇಗೌಡ ಹಾಗೂ ಮಹೇಶ ಅವರುಗಳು ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಗೊಂಡರು. ವಸತಿ ಯೋಜನೆ ಜಾಗೃತ ಸಮಿತಿಯ ಮಾಜಿ ಅಧ್ಯಕ್ಷ ಸುನೀಲ್ ಬೋಸ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಡಿ.ಬಸವರಾಜು, ಗ್ರಾಮ ಪಂಚಾಯಿತಿಯ ಮಾಜಿ ಅಧ್ಯಕ್ಷ ಮಹೇಶ, ರಂಗಶೆಟ್ಟಿ, ಹಾಲಿ ಸದಸ್ಯ ಹಾಡ್ಯ ನಾಗರಾಜು, ಮಾಜಿ ಸದಸ್ಯ ಪುಟ್ಟಬುದ್ಧಿ, ಮುಖಂಡರಾದ ಸಿದ್ದನಾಯಕ, ಪರಮೇಶಪ್ಪ ಪುಟ್ಟಸ್ವಾಮಪ್ಪ, ಕಪ್ಪಣ್ಣ, ನಾಗೇಗೌಡ, ರಂಗರಾಮು, ಗೋವಿಂದಶೆಟ್ಟಿ, ಶೇಷಾದ್ರಿ ಯಾದವ್, ನಾಗೇಶ, ಕೇತಹಳ್ಳಿ ಸಿದ್ದಶೆಟ್ಟಿ, ವೈಎಮ್. ಸಿದ್ದರಾಜು, ಪರಶಿವ, ಮಲ್ಲಿಕಾರ್ಜುನ ಸ್ವಾಮಿ, ನಾಗಣ್ಣ, ಮಹದೇವಸ್ವಾಮಿ, ಪರಮೇಶಪ್ಪ ಹಾಗೂ ಇನ್ನಿತರರು ಹಾಜರಿದ್ದರು.

ಜನರ ಸಂಪರ್ಕಕ್ಕೆ ನೇರವಾಗಿ ಸಿಗುವುದಾದರೆ ಬೆಂಬಲ!

ರೈತರಿಗೆ ಸರ್ಕಾರಿ ಸಹಾಯಧನದಡಿ ಯಾವೊಂದು ಪವರ್ ಟಿಲ್ಲರ್ ಕೊಟ್ಟಿಲ್ಲ. ಪಂಚಾಯಿತಿಗಳಿಗೆ ವಸತಿ ಯೋಜನೆಗಳನ್ನು ಮಂಜೂರು ಮಾಡದೆ ರೈತರ ಖಾತೆಗಳಿಗೆ ಎರಡೆರಡು ಸಾವಿರ ಪ್ರೋತ್ಸಾಹ ಧನ ನೀಡುತ್ತಿರುವ ಕೇಂದ್ರ ಸರ್ಕಾರದ ಬಗ್ಗೆ ನಿವಾಸಿಯೊಬ್ಬರು ಅಸಮಾಧಾನ ವ್ಯಕ್ತಪಡಿಸಿದರು. ಅಲ್ಲದೆ ಕಾಂಗ್ರೆಸ್ ಕಾರ್ಯಕರ್ತರು ನಿಮ್ಮನ್ನು (ಮಹದೇವಪ್ಪ ಮತ್ತು ಸುನೀಲ್ ಬೋಸ್) ನೇರವಾಗಿ ಸಂಪರ್ಕಿಸಲು ಬಿಡದ್ದಕ್ಕೆ ಸೋಲಾಗಿದೆ. ನೀವೇ ಜನರ ಸಂಪರ್ಕಕ್ಕೆ ನೇರವಾಗಿ ಸಿಗುವುದಾದರೆ ಚುನಾವಣೆಯಲ್ಲಿ ನಿಮ್ಮನ್ನೇ ಬೆಂಬಲಿಸುತ್ತೇವೆ ಎಂದು ಬಹಿರಂಗವಾಗಿ ಘೋಷಿಸಿದರು.

ಯೋಧರಿಬ್ಬರ ನಡುವಿನ ಜಮೀನು ವಿವಾದ ಕೊಲೆಯಲ್ಲಿ ಅಂತ್ಯ

ಹಾಸನ: ಬೇಲೂರು ತಾಲೂಕಿನ ತಿರುಮಲಹಳ್ಳಿ ಗ್ರಾಮದಲ್ಲಿ ಮಂಗಳವಾರ ಇಬ್ಬರು ಯೋಧರ ಕುಟುಂಬಗಳ ನಡುವೆ ನಡೆದ ವಾಗ್ವಾದ ದುರಂತದಲ್ಲಿ ಅಂತ್ಯವಾಗಿದೆ. ಇಲ್ಲಿನ ಬೇಲೂರು ತಾಲೂಕಿನ ತಿರುಮನಹಳ್ಳಿಯಲ್ಲಿ ಜಮೀನು ವಿಚಾರಕ್ಕೆ ನಡೆದ ಜಗಳವು ಕೊಲೆಯಲ್ಲಿ ಅಂತ್ಯವಾಗಿದೆ. ಯೋಧ ಯಶವಂತ್ ಎಂಬಾತ ಮೃತ ದುರ್ದೈವಿ. ಯೋಧ ಚಂದನ್ ಮೇವು ಹಾಕುವ ಮೂಲಕ ವಾಕಿಂಗ್ ಪಾತ್ ಒತ್ತುವರಿ ಮಾಡಿಕೊಂಡಿದ್ದರು. ಅದನ್ನು ತೆರವುಗೊಳಿಸುವಂತೆ ಯಶವಂತ ಚಂದನ್ ಜೊತೆ ಜಗಳವಾಡಿದ್ದ ಎನ್ನಲಾಗಿದೆ. ಯೋಧರಿಬ್ಬರ ಕುಟುಂಬಗಳ ನಡುವೆ ಜಮೀನು ವಿಚಾರಕ್ಕೆ ಗಲಾಟೆ ಆಗಿದ್ದು, ಯೋಧ ಚಂದನ್ ಹಾಗೂ ಆತನ ಸಂಬಂಧಿಕರು, ಯಶವಂತ್ ಎಂಬುವವರ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿದ್ದಾರೆ. ಈ ವೇಳೆ ತೀವ್ರ ರಕ್ತಸ್ರಾವಗೊಂಡ ಯಶವಂತ್ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ. ಯೋಧ ಚಂದನ್ ಯಶವಂತ್ ಹಾಗೂ ಆತನ ಸಹೋದರ ಯತೀಶ್ ಮೇಲೆ ಹಲ್ಲೆ ನಡೆಸಿದ್ದಾರೆ. ಹಲ್ಲೆಯಿಂದ ಗಾಯ ಗೊಂಡಿದ್ದ ಯಶವಂತ್‌ರನ್ನು ಆಸ್ಪತ್ರೆಗೆ ಸೇರಿಸಲಾಯಿತಾದರೂ ಚಿಕಿತ್ಸೆ ಫಲಿಸದೇ ಮೃತಪಟ್ಟಿದ್ದಾರೆ. ಯಶವಂತ್ ಸಹೋದರ, ಯೋಧ ಯತೀಶ್ ಕೂಡ ತೀವ್ರ ಗಾಯ ಗೊಂಡಿದ್ದು, ಅವರಿಗೆ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ.

ಸಾರ್ವಜನಿಕರ ಗಮನಕ್ಕಾಗಿ

ನನ್ನ ಕಕ್ಷಿದಾರರ ಇರ್ರಾದೆಯ ಮೇರೆಗೆ ಏನೆಂದರೆ, ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತಿನ ಸಂಬಂಧ ಮೈಸೂರು ಜಿಲ್ಲೆ ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ನಗರ್ತಹಳ್ಳಿ ದಾಖಲೆ, ಮೂಗನಹುಂಡಿ ಗ್ರಾಮದಲ್ಲಿ ವಾಸವಾಗಿರುವ ಲೇಟ್ ಮಲ್ಲೇಗೌಡರವರ ಪತ್ನಿಯಾದ ಗೌರಮ್ಮ ಹಾಗೂ ಮಗ ರವಿಕುಮಾರ, ಲೋಕೇಶ್ , ಹಾಗೂ ಅವರ ಕುಟುಂದವರುಗಳಿಗೂ ನನ್ನ ಕಕ್ಷಿದಾರರಿಗೂ ಕೆಳಕಂಡ ಜಮೀನಿನ ಸಂಬಂಧ ದಿನಾಂಕ 5/11/2022ರ ಕ್ರಯದ ಕರಾರಿನ ಮೂಲಕ ಒಡಂಬಡಿಕೆಯಾಗಿದ್ದು ಸದರಿ ಜಮೀನನ್ನು ನನ್ನ ಕಕ್ಷಿದಾರರು ಮೇಲ್ಕಂಡ ಮಾಲೀಕರಿಂದ ಕ್ರಯಕ್ಕೆ ಪಡೆಯಲು ಇಚ್ಚಿಸಿದ್ದು, ಮೇಲ್ಕಂಡ ಮಾಲೀಕರು ಸಹ ಕ್ರಯ ಪತ್ರ ಬರೆದುಕೊಡಲು ಸಿದ್ದರಿದ್ದು, ಈಗಾಗಲೇ ಕೆಲವು ಪತ್ರಗಳನ್ನು ನೀಡಿದ್ದು, ಆದರೆ ಸದರಿ ಜಮೀನಿನ ಸಂಬಂಧ ಯಾರಿಗಾದರೂ ಯಾವುದೇ ರೀತಿಯ ಹಕ್ಕು ಹಿತಾಸಕ್ತಿ ಇದ್ದಲ್ಲಿ ಸಂಬಂಧ ಪಟ್ಟವರು ಈ ಪತ್ರಿಕಾ ಪ್ರಕಟಣೆ ಹೊರಡಿಸಿದ 7 ದಿವಸದೊಳಗಾಗಿ ನನ್ನ ಕಕ್ಷಿದಾರರಿಗಾಗಲೀ, ನನಗಾಗಲೀ ಲಿಖಿತವಾಗಿ ಸಂಬಂಧ ಪಟ್ಟ ದಾಖಲಾತಿಗಳೊಡನೆ ನನ್ನ ಕೆಳಕಂಡ ವಿಳಾಸದ ಕಛೇರಿಯ ಸಮಯದಲ್ಲಿ ಹಾಜರಾಗಿ ತಮ್ಮ ಅವಹಾಲು ಹಾಗೂ ತಕರಾರನ್ನು ಸಲ್ಲಿಸತಕ್ಕದ್ದು. ಮೇಲ್ಕಂಡ ಸಮಯದೊಳಗೆ ಯಾವುದೇ ತಕರಾರು ಬರದೇ ಇದ್ದ ಪಕ್ಷದಲ್ಲಿ ನನ್ನ ಕಕ್ಷಿದಾರರು ಕೆಳಕಂಡ ಜಮೀನಿನ ಸಂಬಂಧ ಪಟ್ಟ ಹಾಗೆ ನೋಂದಣಿ ಕ್ರಯ ಪತ್ರವನ್ನು ಪಡೆದುಕೊಂಡು ಮುಂದುವರೆಯಲು ಇಚ್ಛಿಸಿದ್ದು ಸದರಿ ಜಮೀನಿನ ಸಂಬಂಧ ಮುಂದೆ ಯಾವುದೇ ತಂಟೆ ತಕರಾರುಗಳಿಗೆ ನನ್ನ ಕಕ್ಷಿದಾರರು ಬದ್ಧರಾಗಿರುವುದಿಲ್ಲವೆಂದು ಈ ಮೂಲಕ ತಿಳಿಯತಕ್ಕದ್ದು.

ಷೆಡ್ಯೂಲ್ ಸ್ವತ್ತು: ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ನಗರ್ತಹಳ್ಳಿ ದಾಖಲ, ಮೂಗನಹುಂಡಿ ಗ್ರಾಮದಲ್ಲಿರುವ ಸರ್ವೆ.ನಂ.72/ ರಲ್ಲಿ 33 ಗುಂಟೆ ವಿಸ್ತೀರ್ಣದ ಜಮೀನಿಗೆ ಚೆಕ್ ಬಂದಿ : ಪೂರ್ವಕ್ಕೆ : ಸರ್ವೆ. ನಂ. 71/2 .ರೈಲ್ವೆ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ, ಪಶ್ಚಿಮಕ್ಕೆ ; ಸರ್ವೇ ನಂ 72/3, ಸರೋಜಮ್ಮನವರ ಹಾಗೂ ಲೇಟ್ ಕೆಂಚೇಗೌಡರವರ ಜಮೀನು, ಉತ್ತರಕ್ಕೆ ; ಸರ್ವೆ ನಂ 72/5, ಉಮೇಶ್ ರವರ ಜಮೀನು, ದಕ್ಷಿಣಕ್ಕೆ : ಸರ್ವೆ. ನಂ. 72/3 ರಲ್ಲಿ ಶಾಂತೇಗೌಡ ಮತ್ತು ಮಹದೇವವ ಅವರ ಜಮೀನು.

ಸಹಿ/-ಕಕ್ಷಿದಾರರ ಪರ ವಕೀಲರು
ಶ್ರೀ ಪಾಲಾಕ್ಷ, ವಕೀಲರು
ಕಛೇರಿ ವಿಳಾಸ: # 645, ಮೊದಲನೇ ಮಹಡಿ, ಸೀತಾವಿಳಾಸ ಛತ್ರ, ನಾರಾಯಣ ಶಾಸ್ತ್ರಿ ರಸ್ತೆ, ಮೈಸೂರು, ಮೊ: 9448075718,

ಸಾರ್ವಜನಿಕರ ಗಮನಕ್ಕಾಗಿ

ನನ್ನ ಕಕ್ಷಿದಾರರ ಇರ್ರಾದೆಯ ಮೇರೆಗೆ ಏನೆಂದರೆ, ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತಿನ ಸಂಬಂಧ ಮೈಸೂರು ಜಿಲ್ಲೆ ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ನಗರ್ತಹಳ್ಳಿ ದಾಖಲೆ,ಮೂಗನಹುಂಡಿ ಗ್ರಾಮದಲ್ಲಿ ವಾಸವಗಿರುವ ಲೇಟ್ ಕೆಂಚೇಗೌಡರ ಕೆ. ರವರ ಧರ್ಮಪತ್ನಿ ಶ್ರೀಮತಿ ಸರೋಜಮ್ಮ ಹಾಗೂ ಅವರ ಮಗನಾದ ಬಾಸ್ಕರ್ ಕೆ. ಹಾಗೂ ಮಗ ಅವರ ಕುಟುಂದವರುಗಳಿಗೂ ನನ್ನ ಕಕ್ಷಿದಾರರಿಗೂ ಕೆಳಕಂಡ ಜಮೀನಿನ ಸಂಬಂಧ ದಿನಾಂಕ 5/11/2022 ರ ಕ್ರಯದ ಕರಾರಿನ ಮೂಲಕ ಒಡಂಬಡಿಕೆಯಾಗಿದ್ದು ಸದರಿ ಜಮೀನನ್ನು ನನ್ನ ಕಕ್ಷಿದಾರರು ಮೇಲ್ಕಂಡ ಮಾಲೀಕರಿಂದ ಕ್ರಯಕ್ಕೆ ಪಡೆಯಲು ಇಚ್ಚಿಸಿದ್ದು, ಮೇಲ್ಕಂಡ ಮಾಲೀಕರು ಸಹ ಕ್ರಯ ಪತ್ರ ಬರೆದುಕೊಡಲು ಸಿದ್ದರಿದ್ದು, ಈಗಾಗಲೇ ಕೆಲವು ಪತ್ರಗಳನ್ನು ನೀಡಿದ್ದು, ಆದರೆ ಸದರಿ ಜಮೀನಿನ ಸಂಬಂಧ ಯಾರಿಗಾದರೂ ಯಾವುದೇ ರೀತಿಯ ಹಕ್ಕು ಹಿತಾಸಕ್ತಿ ಇದ್ದಲ್ಲಿ ಸಂಬಂಧ ಪಟ್ಟವರು ಈ ಪತ್ರಿಕಾ ಪ್ರಕಟಣೆ ಹೊರಡಿಸಿದ 7 ದಿವಸದೊಳಗಾಗಿ ನನ್ನ ಕಕ್ಷಿದಾರರಿಗಾಗಲೀ, ನನಗಾಗಲೀ ಲಿಖಿತವಾಗಿ ಸಂಬಂಧ ಪಟ್ಟ ದಾಖಲಾತಿಗಳೊಡನೆ ನನ್ನ ಕೆಳಕಂಡ ವಿಳಾಸದ ಕಛೇರಿಯ ಸಮಯದಲ್ಲಿ ಹಾಜರಾಗಿ ತಮ್ಮ ಅಹವಾಲು ಹಾಗೂ ತಕರಾರನ್ನು ಸಲ್ಲಿಸತಕ್ಕದ್ದು. ಮೇಲ್ಕಂಡ ಸಮಯದೊಳಗೆ ಯಾವುದೇ ತಕರಾರು ಬರದೇ ಇದ್ದ ಪಕ್ಷದಲ್ಲಿ ನನ್ನ ಕಕ್ಷಿದಾರರು ಕೆಳಕಂಡ ಜಮೀನಿನ ಸಂಬಂಧ ಪಟ್ಟ ಹಾಗೆ ನೋಂದಣಿ ಕ್ರಯ ಪತ್ರವನ್ನು ಪಡೆದುಕೊಂಡು ಮುಂದುವರೆಯಲು ಇಚ್ಛಿಸಿದ್ದು ಸದರಿ ಜಮೀನಿನ ಸಂಬಂಧ ಮುಂದೆ ಯಾವುದೇ ತಂಟೆ ತಕರಾರುಗಳಿಗೆ ನನ್ನ ಕಕ್ಷಿದಾರರು ಬದ್ಧರಾಗಿರುವುದಿಲ್ಲವೆಂದು ಈ ಮೂಲಕ ತಿಳಿಯತಕ್ಕದ್ದು.

ಷೆಡ್ಯೂಲ್ ಸ್ವತ್ತು : ಮೈಸೂರು ಜಯಪುರ ಹೋಬಳಿ, ನಗರ್ತಹಳ್ಳಿ ದಾಖಲೆ, ಮೂಗನಹುಂಡಿ ಗ್ರಾಮದಲ್ಲಿರುವ ಸರ್ವೆ.ನಂ.72/3 ರಲ್ಲಿ 33 ಗುಂಟೆ ಪೈಕಿ 16.08 ಗುಂಟೆ ವಿಸ್ತೀರ್ಣದ ಜಮೀನಿಗೆ ಚೆಕ್ ಬಂದಿ : ಪೂರ್ವಕ್ಕೆ : ಗೌರಮ್ಮ ಮತ್ತು ಮಲ್ಲೇಗೌಡರ ಸರ್ವೆ ನಂ 72/3 ರ ಜಮೀನು, ಪಶ್ಚಿಮಕ್ಕೆ : ಸರ್ಕಾರಿ ರಸ್ತೆ, ಉತ್ತರಕ್ಕೆ : ಎಸ್.ಬಿ. ಉಮೇಶ್ ಬಿನ್ ಬೋರೇಗೌಡರವರ ಸರ್ವೆ ನಂ 72/4, ದಕ್ಷಿಣಕ್ಕೆ : ಮಹೇಶ್ ಕೆ. ಅವರ ಉಳಿಕೆ ಜಮೀನು.

ಸಹಿ/-ಕಕ್ಷಿದಾರರ ಪರ ವಕೀಲರು
ಶ್ರೀ ಪಾಲಾಕ್ಷ, ವಕೀಲರು
ಕಛೇರಿ ವಿಳಾಸ: # 645, ಮೊದಲನೇ ಮಹಡಿ, ಸೀತಾವಿಳಾಸ ಛತ್ರ, ನಾರಾಯಣ ಶಾಸ್ತ್ರಿ ರಸ್ತೆ, ಮೈಸೂರು, ಮೊ: 9448075718,

भारतीय खाद्य निगम Food Corporation of India

कार्यालय: मंडल कार्यालय, बी. एम. श्रीनगर, बान्नीमंटप एक्सटेंशन, मेटगल्ली पोस्ट, मैसूरु - 16.

Office: Divisional Office, Bannimantap Extension, BM Shree Nagar, Metagalli post, Mysuru - 16.
Ph: 0821-2420902, 0821-2422902. Email: mysorko.fci@gov.in

ಹರಾಜು ನೋಟಿಸ್

ಜಿಲ್ಲಾ ಪ್ರಬಂಧಕರು, ಭಾರತೀಯ ಅಹಾರ ನಿಗಮ, ಜಿಲ್ಲಾ ಕಛೇರಿ ಮೈಸೂರು, ಇವರು ಈ ಮೂಲಕ ಉದ್ದೇಶಿಸಿರುವುದೇನೆಂದರೆ ಮೈಸೂರು ವಿಭಾಗೀಯ ಕಛೇರಿ ವ್ಯಾಪ್ತಿಯಲ್ಲಿ ಬರುವ ಗೋದಾಮು ಎಂದರೆ ಮೈಸೂರು, ಕುಶಾಲನಗರ, ನಂಜನಗೂಡು, ಕೆ. ಆರ್. ನಗರ, ಮದ್ದೂರು ಮತ್ತು ತುಮಕೂರು ಗೋದಾಮುಗಳಲ್ಲಿ ಇರುವ **ಅನುಪಯುಕ್ತ ಗೋಣಿ ಚೀಲ, ಅಲುಮಿನಿಯಮ್ ಟಿನ್ ಮತ್ತು ಇತರೆ ವಸ್ತುಗಳನ್ನು ಅವುಗಳು ಇರುವ ಸ್ಥಿತಿಯಲ್ಲಿ ಎಲ್ಲಿರುವವೋ ಅಲ್ಲಿ ಟೆಂಡರ್ ಮೂಲಕ ದಿನಾಂಕ 30.11.2022 ರಂದು ಬೆಳಿಗ್ಗೆ 11.00 AM ವಿಭಾಗೀಯ ಕಚೇರಿ, ಬನ್ನಿಮಂಟಪ ಬಡಾವಣೆ, ಬಿ ಎಮ್ ಶ್ರೀನಗರ ಮೇಟಗಳ್ಳಿ ಪೋಸ್ಟ್, ಮೈಸೂರು-16, ಇಲ್ಲಿ ಹರಾಜು ಮಾಡಲು ಉದ್ದೇಶಿಸಿರುತ್ತಾರೆ.** ಆಸಕ್ತರು ಜಿಲ್ಲಾ ಪ್ರಬಂಧಕರು ಜಿಲ್ಲಾ ಕಛೇರಿ ಮೈಸೂರು ಅಥವಾ ಮೇಲೆ ತಿಳಿಸಿದ ಗೋದಾಮುಗಳ ಪ್ರಬಂಧಕರನ್ನು **25.11.2022** ರಿಂದ **28.11.2022** ರ ಒಳಗೆ ಎಲ್ಲಾ ಕೆಲಸದ ದಿನಗಳಲ್ಲಿ ಬೆಳಿಗ್ಗೆ 11 ರಿಂದ ಮಧ್ಯಾಹ್ನ 3 ಗಂಟೆಯ ಒಳಗೆ ಸಂಪರ್ಕಿಸಿ **354/- ರೂ** (ಜೀ ಎಸ್ ಟೀ ತೆರಿಗೆ ಒಳಗೊಂಡಿದೆ) ಶುಲ್ಕವನ್ನು ಪಾವತಿಸಿ, ಷರತ್ತುಗಳೊಂದಿಗಿನ ಟೆಂಡರ್ ಫಾರಂಗಳನ್ನು ಪಡೆದುಕೊಳ್ಳಬಹುದು. ಈ ಶುಲ್ಕವು (ಮರುಪಾವತಿಸಲಾಗುವುದಿಲ್ಲ) ಟೆಂಡರ್ ಫಾರಂಗಳನ್ನು ಪಡೆದ ನಂತರ ಹರಾಜಿಗೆ ಮುನ್ನ ಗೋದಾಮುಗಳಿಗೆ ಭೇಟಿ ನೀಡಿ ಹರಾಜು ವಸ್ತುಗಳನ್ನು ಪರಿಶೀಲಿಸಬಹುದು. ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸಲು ಇಚ್ಛಿಸುವವರು ಹರಾಜು ಪ್ರಾರಂಭವಾಗುವ ಮುನ್ನ **5000/- ರೂ. ಇಡುಗಂಟು ಠೇವಣಿಯನ್ನು "ಜಿಲ್ಲಾ ಪ್ರಬಂಧಕರು ಜಿಲ್ಲಾ ಕಛೇರಿ, ಮೈಸೂರು" ಅವರ ಹೆಸರಿನಲ್ಲಿ ಡಿ.ಡಿ ಮೂಲಕ ಪಾವತಿಸಬೇಕು.** ಈ ಮೊತ್ತವನ್ನು ಹರಾಜು ಮುಗಿದ ನಂತರ ಯಶಸ್ವಿಯಾಗದ ಬಿಡ್ಡರ್‌ಗಳಿಗೆ ಮರುಪಾವತಿಸಲಾಗುವುದು ಹಾಗು ಯಶಸ್ವಿಯಾದ ಬಿಡ್ಡರ್ ಅವರ ಒಟ್ಟು ಬಿಡ್ ಮೊತ್ತಕ್ಕೆ ಸರಿಹೊಂದಿಸಲಾಗುವುದು. ಯಶಸ್ವಿ ಬಿಡ್ಡರ್ ಬಿಡ್ ಮಾಡಿದ ಒಟ್ಟು ಮೊತ್ತದ ಶೇಕಡ 10 ರಷ್ಟನ್ನು ಭದ್ರತಾ ಠೇವಣಿಯಾಗಿ ಎಫ್ ಸೀ ಐ ಬ್ಯಾಂಕ್ ಖಾತೆಗೆ ತಕ್ಷಣ ಪಾವತಿಸಬೇಕು.

ಸಹಿ/- ವಿಭಾಗೀಯ ವ್ಯವಸ್ಥಾಪಕರು



